
ಲಂಕೇಶ್

ಜುಲೈ 8, 2009 ರೂ. 12/-

ಲಾಲ್‌ಗಢ್ ದಂಗೆ

ಭಾರದ್ವಾಜ್ ಬಾಂಬ್





ಗಣಿಕಳ್ಳರಿಗೆ ಕ್ಲೀನ್ ಚೀಟ್

ಂಗಾವತಿ: ಆಪರೇಷನ್ ಮಲಕ್ಕೆ ಒಬ್ಬ ಬಲಿ

ಸಂಸ್ಕೃತ ವಿವಿ ಯಾರಿಗಾಗಿ

ರುತೆರೆ ಬರ್ಬಾದ್

ಕುವೆಂಪು ವಿವಿಯಲ್ಲಿ ಅವ್ಯವಹಾರ



ಪಿಕ್‌ಪಾಕೆಟ್ ಸಾಹಿತಿ

ಅವನತಿ ಶುರು




ಬಿಜೆಪಿಯ ಆತ್ಮ ವಿಮರ್ಶೆ:

ನರೇಂದ್ರ ಮೋದಿಗೆ "ದೀನ ದಯಾಳು"ವಿನ ಮುಸುಕು!



ಇದೀಗ ಆತ್ಮ ವಿಮರ್ಶೆಯ ಪರ್ವ. ಗೆದ್ದ ಹಮ್ಮಿನಲ್ಲಿರುವ ಕಾಂಗ್ರೆಸ್ಸನ್ನು ಹೊರತುಪಡಿಸಿ ಸೋತ ಬಿಜೆಪಿ, ಸಿಪಿಎಂ, ಟಿಆರ್‌ಎಸ್ ಎಲ್ಲಾ ಪಕ್ಷಗಳು ಸೋಲಿಗೆ ಕಾರಣವನ್ನು ಹುಡುಕುತ್ತಾ ಆತ್ಮ ವಿಮರ್ಶೆಯ ಕಸರತ್ತಿನಲ್ಲಿ ತೊಡಗಿವೆ. ಆದರೆ ಬಿಜೆಪಿಯಲ್ಲಿ ಮಾತ್ರ ಆತ್ಮ ವಿಮರ್ಶೆಯ ಹೆಸರಲ್ಲಿ ಪರರ ಆತ್ಮದ ವಿಮರ್ಶೆಯೇ ಹೆಚ್ಚು ನಡೆಯುತ್ತಿದೆ. ಕಳೆದ ಸಂಚಿಕೆಯಲ್ಲಿ ಸಂಪಾದಕಿ ಗೌರಿ ಲಂಕೇಶರು ಬರೆದಂತೆ **party with difference** ಎಂಬ ಹೆಗ್ಗಳಿಕೆ ತೋರುತ್ತಿದ್ದ ಬಿಜೆಪಿ ಅಕ್ಷರಶಃ **party with differences** ಆಗಿಬಿಟ್ಟಿದೆ.



ಇದನ್ನೆಲ್ಲಾ ಬಗೆಹರಿಸಲೆಂದೇ ಕಳೆದ ಜೂನ್ 20ರಿಂದ ಮೂರು ದಿನಗಳ ರಾಷ್ಟ್ರೀಯ ಕಾರ್ಯಕಾರಣಿಯನ್ನು ಆಯೋಜಿಸಲಾಗಿತ್ತು, ಆದರೆ ಬಿಜೆಪಿಯ ಅಡಿಪಾಯ ಎಷ್ಟು ಸಡಿಲವಾಗಿ ಹೋಗಿದೆಯೆಂದರೆ ಅದರ ಹಿಂದಿನ ದಿನವೇ ಅರುಣ್ ಶೌರಿ ಎಂಬ ಬಿಜೆಪಿಯ ಮತ್ತೊಂದು ಅತೃಪ್ತ ಆತ್ಮ ಹಾಲಿ ನಾಯಕತ್ವದ ವಿರುದ್ಧ ಗುಪ್ತವಾಗಿ ಒಂದು ಸುದೀರ್ಘ ಪತ್ರ ಬರೆದು ಗುಪ್ತವಾಗಿ ಮಾಧ್ಯಮಗಳಿಗೆ ಲೀಕ್ ಮಾಡಿದರು! ಮತ್ತೊಂದೆಡೆ ಬಿಜೆಪಿಯ ಹಾಲಿ ನಾಯಕತ್ವದಿಂದ ಗುಮ್ಮಿಸಿಕೊಂಡು ಹೊರಬಿದ್ದಿದ್ದ ಆರೆಸ್ಸೆಸ್ಸಿನ ಗೋವಿಂದಾಚಾರ್ಯ "ಬಿಜೆಪಿಯ ನಾಯಕರು ಅವಕಾಶವಾದಿಗಳು. ಹಿಂದೂತ್ವವನ್ನು ರಾಜಕೀಯ ದಾಳವನ್ನಾಗಿ ಬಳಸಿಕೊಳ್ಳುವವರು. ಅವರಲ್ಲಿ ಹಲವರಿಗೆ ಈಗ ಆರೆಸ್ಸೆಸ್ ಬೇಡ ಅನಿಸುತ್ತಿದೆ. ಬಿಜೆಪಿಯ ಹಾಲಿ ಎಂಪಿಗಳಲ್ಲಿ ಕನಿಷ್ಠ 85 ಜನರಿಗಾದರೂ ದೀನ್‌ದಯಾಳ್ ಉಪಾಧ್ಯಾಯ ಯಾರೆಂಬುದೇ ತಿಳಿದಿರಲಿಕ್ಕಿಲ್ಲ" ಎಂದು ವಿಷಕಕ್ಕಿದ್ದಲ್ಲದೆ ಆರೆಸ್ಸೆಸ್‌ಗೆ ಬಿಜೆಪಿಯ ಊರುಗೋಲಿನ ಅಗತ್ಯವೇನೂ ಇಲ್ಲವೆಂದು ಬೆದರಿಕೆಯನ್ನೂ ಹಾಕಿಬಿಟ್ಟರು.

ಹೀಗೆ ಒಡೆದ ಮನೆಯಾಗಿದ್ದ ಬಿಜೆಪಿ ಒಂದೆಡೆ ಸೀಟಿಗೂ ದೂರವಾಗಿ ಮತ್ತೊಂದೆಡೆ ಮನೆಯೊಡೆಯನಾದ ಆರೆಸ್ಸೆಸ್‌ಗೂ ದೂರವಾದರೆ ಗತಿಯೇನು ಎಂಬ ಇಬ್ಬಂದಿ ಸ್ಥಿತಿಯಲ್ಲಿತ್ತು. ಆದ್ದರಿಂದಲೇ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ತಾನೆಂದಿಗೂ ಹಿಂದೂತ್ವದಿಂದ ವಿಮುಖವಾಗುವುದಿಲ್ಲವೆಂದು ಘೋಷಿಸಿ ತಾತ್ಕಾಲಿಕವಾಗಿಯಾದರೂ ಭಿನ್ನಮತಕ್ಕೆ ಸಂಘಪರಿವಾರದ ನವ್‌ತಾಲ್ ಬೀಗ ಹಾಕಿದೆ. ಆದರೆ ಇದರಿಂದ ಆರೆಸ್ಸೆಸ್ ತೃಪ್ತವಾಗಬಹುದಾದರೂ ಸಾಲು ಸಾಲು ಚುನಾವಣೆ ಎದುರಿಸಬೇಕಾಗಿರುವ ಬಿಜೆಪಿಗೆ ಮೊದಲಿನಷ್ಟು ಹಸಿಹಸಿಯಾಗಿಯೇ ಜನರ ಮುಂದಕ್ಕೆ ಹೋಗುವುದು ಕಷ್ಟ.

ಆದ್ದರಿಂದಲೇ ಅದು ತನ್ನ ತ್ರಿಶೂಲದ ಅಲಗುಗಳ ಮೇಲೆ ಬಿಳಿವಸ್ತ್ರವನ್ನು ಹೊದಿಸಿ ಅದನ್ನೇ ಶಾಂತಿ ಬಾವುಟವೆಂದು ನಂಬಿಸಲು ಹೊರಟದೆ! ಈ ಹಿಡನ್ ಅಜೆಂಡಾದ ಭಾಗವಾಗಿಯೇ ತನ್ನ ಸಿದ್ಧಾಂತ ಮೋದಿತ್ವವಲ್ಲವೆಂದೂ ಬಿಜೆಪಿಯ ಹಿರಿಯ ನಾಯಕ ದೀನ್‌ದಯಾಳ್ ಉಪಾಧ್ಯಾಯ ಬೋಧಿಸಿದ "ಇಂಟೆಗ್ರಲ್ ಹ್ಯೂಮನಿಸಂ" (ಸಮಗ್ರ ಮಾನವತ್ವ) ಹಾಗೂ ಬಿಜೆಪಿಯ ಹಿಂದಿನ ರೂಪವಾದ ಭಾರತೀಯ ಜನಸಂಘದ



ಚಾರ್ವಾಕ

▸ ಶಿವಸುಂದರ್

ಜನಕ ಶಾಂಪ್ರಸಾದ್ ಮುಖರ್ಜಿ ಪ್ರತಿಪಾದಿಸಿದ ರಾಷ್ಟ್ರೀಯವಾದವೆಂದೂ ಘೋಷಿಸಿದೆ.

ಈ ದೀನ್‌ದಯಾಳ್ ಉಪಾಧ್ಯ ಮತ್ತು ಮುಖರ್ಜಿ ಯಾರು? ಇವರು ಹೇಳಿದ್ದೇನು? ಎಂಬುದು ಸಾಮಾನ್ಯ ಜನರಿಗಿರಲಿ ಶೇ.90ರಷ್ಟು ಬಿಜೆಪಿ ಎಂಪಿಗಳಿಗೇ ಗೊತ್ತಿಲ್ಲ. ಹೀಗಾಗಿ ಈ ಮಹಾಶಯರು ಪ್ರಾಯಶಃ ಫ್ಯಾಸಿಸ್ಟ್ ಹಿಂದೂತ್ವವಾದಕ್ಕಿಂತ ಭಿನ್ನವಾದ ರಾಜಕೀಯ ಸಿದ್ಧಾಂತವನ್ನೇನಾದರೂ ಹೇಳಿರಬಹುದೇ ಎಂಬ ಅನುಮಾನ ಬರುವುದು ಸಹಜ. ಅದರಲ್ಲೂ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ವರುಣ್ ಗಾಂಧಿ ಭಾಷಣದಿಂದ ಬಿಜೆಪಿಗೆ ಹಾನಿಯಾಗಿದೆ ಎಂಬ ಅಭಿಪ್ರಾಯಕ್ಕೆ ಮನ್ನಣೆ ದೊರೆಯಿತು. ಅಲ್ಲದೇ ಅಂತಿಮ ದಿನ ಅಧ್ವಾನಿ ಹಿಂದೂತ್ವ ಎಂದರೆ ಪರಮತ ದ್ವೇಷವಲ್ಲ, ಧರ್ಮಾಧಾರಿತ ದೇಶದ ನಿರ್ಮಾಣವಲ್ಲ ಎಂದು ಹೇಳಿಬಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ದಣಿದಿರುವ ಮನಸ್ಸುಗಳಲ್ಲಿ ಬಿಜೆಪಿಯ ಈ "ಮುಖರ್ಜಿ ಮತ್ತು ಉಪಾಧ್ಯ ಸಿದ್ಧಾಂತ" ಎಂಬ ಹೊಸ ಅವತಾರ ದ್ವೇಷವನ್ನಲ್ಲದೆ ಪ್ರೀತಿಯನ್ನೇನಾದರೂ ಬೋಧಿಸುತ್ತಿರಬಹುದೇ ಎಂಬ ನಿರೀಕ್ಷೆಯೂ ಹುಟ್ಟಿಕೊಂಡರೆ ಆಶ್ಚರ್ಯವೇನಿಲ್ಲ!

ಆದರೆ ಬಿಜೆಪಿಯ ತಾತ್ವಿಕ ಧೋರಣೆಗಳ ಇತಿಹಾಸವನ್ನು ಬಲ್ಲವರಿಗೆ ಇದು ಹುಲಿಯನ್ನೇ ಹಸುವೆಂದು ತೋರಿಸುವ ಸಂಚೆಂಬುದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಉದಾಹರಣೆಗೆ ಈ ಚುನಾವಣೆಯಲ್ಲಿ ಸೋಲುಂಡ ಮೇಲೂ ಬಿಜೆಪಿ ಯಾವ ರೀತಿಯಲ್ಲಿ ತನ್ನ ಇತಿಹಾಸವನ್ನು ಬಣ್ಣಿಸಿಕೊಳ್ಳುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಈಗಲೂ ಅವರ ವೆಬ್‌ಸೈಟ್‌ನಲ್ಲಿರುವ **http://www.bjp.org/content/view/432/284/** ಲೇಖನವನ್ನು ನೋಡಬಹುದು. ಈ ದೇಶದ ಮುಸ್ಲಿಮರ ಬಗ್ಗೆ ಈಗಲೂ ಅವರ ಅಧಿಕೃತ ನಿಲುವು ಏನೆಂಬುದನ್ನು ಅದರಲ್ಲಿ ಹೀಗೆ ಸ್ಪಷ್ಟಪಡಿಸಲಾಗಿದೆ:

Its position on this issue has all along been: "Justice for all and appeasement of none". But it has no doubt tha[t] we were and are a Hind[u] nation; that change of fait[h] cannot mean change o[f] nationality.

ಅಂದರೆ "ಈ ವಿಷಯದ ಬ[ಗ್ಗೆ] ಉದ್ದಕ್ಕೂ ನಮ್ಮ ನಿಲುವು 'ಎಲ್ಲರಿಗೂ ನ್ಯಾಯ-ಯಾರಿಗೂ ತುಷ್ಟೀಕರಣ ಸಲ್ಲ' ಎಂಬುದಾಗಿದೆ. ಆದರೆ ನಮ್ಮದು ಈ[ಗ] ಹಿಂದೆಯೂ ಹಿಂದೂ ರಾಷ್ಟ್ರವಾಗಿತ್ತು ಮತ್ತು ಈಗಲೂ ಹಿಂದೂ ರಾಷ್ಟ್ರವಾಗಿದೆ ಎಂಬುದರಲ್ಲಿ ಯಾವುದೇ ಅನುಮಾನ ವಿಲ್ಲ. ಧರ್ಮಶ್ರದ್ಧೆಯಲ್ಲಿ ಆಗುವ ಬದಲಾವಣೆ ರಾಷ್ಟ್ರೀಯತೆಯಲ್ಲೂ ಬದಲಾವಣೆ ಆಗುತ್ತದೆ ಎಂಬ ಅರ್ಥವನ್ನೇನೂ ಕೊಡುವುದಿಲ್ಲ." ಈ ದೇಶವನ್ನು ಜಾತ್ಯತೀತ ದೇಶವನ್ನಾಗಿ ಕಟ್ಟಬೇಕೆಂಬ ಆಶಯವುಳ್ಳ ಈ ದೇಶದ ಸಂವಿಧಾನಕ್ಕೆ ಬದ್ಧವಾಗಿರುತ್ತೇನೆಂದು ಪ್ರತಿಜ್ಞೆ ಸ್ವೀಕರಿಸುವ ಪಕ್ಷವೊಂದು ಹೀಗೆ ಬಹಿರಂಗವಾಗಿಯೇ ಈ ದೇಶವನ್ನು ಹಿಂದೂ ದೇಶವನ್ನಾಗಿ ಕಟ್ಟುತ್ತೇನೆಂದು ಈಗಲೂ ಘೋಷಿಸಿಕೊಳ್ಳುತ್ತದೆ. ಹೀಗಾಗಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಅಧ್ವಾನಿ ಹಿಂದೂತ್ವವೆಂದರೆ ಪರಮತ ದ್ವೇಷವಲ್ಲ ಅಥವಾ ಧರ್ಮಾಧಾರಿತ ದೇಶವಲ್ಲ ಎಂದು ಹೇಳಿದ್ದೆಲ್ಲಾ ಬರೀ ಬುರುಡೆಯೆಂಬುದು ಸ್ಪಷ್ಟವಾಗುತ್ತದೆ.

ಹಾಗಿದ್ದ ಮೇಲೆ ಮುಖರ್ಜಿ ಮತ್ತು ಉಪಾಧ್ಯಾಯರ ಸಿದ್ಧಾಂತಗಳೇನು? ಈ ದೇಶದ ಮುಸ್ಲಿಮರು ಹಿಂದೂತ್ವಕ್ಕೆ ಬದ್ಧರಾಗಿ ನಡೆದುಕೊಳ್ಳಬೇಕು ಎಂದು ಆದೇಶಿಸಿದ ಆರೆಸ್ಸೆಸ್ಸಿನ ಮುದ್ದಿನ ಬಿಡ್ಡ ಈ ಮುಖರ್ಜಿ. ಈ ಮುಖರ್ಜಿಯ ಆದರ್ಶ ಶಿಷ್ಯ ದೀನ್‌ದಯಾಳ್ ಉಪಾಧ್ಯಾಯ. ಈ ಉಪಾಧ್ಯಾಯರ ಅಪಾರ ಹಿಂದೂತ್ವ ನಿಷ್ಠೆಯನ್ನು ಕಂಡು ಮರಣಾನಂದ ಹೊಂದಿದ್ದ ಮುಖರ್ಜಿ 1950ರಲ್ಲಿ "ಇಂಥ ಇಬ್ಬರು ದೀನದಯಾಳು ಇದ್ದರೆ ನಾನು ಹಿಂದೂಸ್ಥಾನದ ರಾಜಕೀಯವನ್ನೇ ಬದಲಿಸುತ್ತೇನೆ" ಎಂದಿದ್ದರಂತೆ! ಈ ದೇಶದ ಪುಣ್ಯ ಇಬ್ಬರು ದೀನದಯಾಳರು ಇರಲಿಲ್ಲ! ಮುಖರ್ಜಿ ತಮ್ಮ ಜೀವಮಾನದುದ್ದಕ್ಕೂ "ಸ್ವರಾಜ್ಯಕ್ಕಿಂತ ಗೋ ರಕ್ಷಣೆ ಮುಖ್ಯ", "ಪಾಕಿಸ್ತಾನ ಎಂದಾದ ಮೇಲೆ ಇಲ್ಲಿ ಮುಸ್ಲಿಮರಿಗೆ ಯಾವುದೇ ಹಕ್ಕಿರಬಾರದು ಮತ್ತು ಇದು ಹಿಂದೂಗಳ ದೇಶ" ಎಂದು ಪ್ರತಿಪಾದಿಸುತ್ತಾ ಬಂದವರು. ಬಿಜೆಪಿ ಸಹ ತನ್ನ ಪ್ರವರದಲ್ಲಿ ಇವೆಲ್ಲವನ್ನು ಈಗಲೂ ಹೆಮ್ಮೆಯಿಂದ

▶▶▶ 18




"ಈಗ ನೇಪಾಳದಲ್ಲಿ ಅಧಿಕಾರ ಪಡೆದುಕೊಂಡಿರುವ ಸಿಪಿಎನ್-ಯುಎಂಎಲ್ ಸರ್ಕಾರ ವಿದೇಶಿ ಶಕ್ತಿಗಳ ಕೈಗೊಂಬೆ ಸರ್ಕಾರವಾಗಿದೆ. ಮತ್ತು ನೇಪಾಳದ ಕಮ್ಯುನಿಸ್ಟ್ ಪಕ್ಷಗಳ ನಡುವೆ ಒಂದು "ಕಪ್ಪು ಕುರಿ" ಯಾಗಿದೆ.

- ಪ್ರಚಂಡ

"ಇರಾನ್‌ನ ಐತಿಹಾಸಿಕ ಕ್ರಾಂತಿಯನ್ನು ಮಟ್ಟ ಹಾಕಲು ನಡೆಯುತ್ತಿರುವ ಸಂಚುಗಳು ಸುಸ್ಪಷ್ಟ. ಆದ್ದರಿಂದ ಇರಾನ್ ಜನತೆಯನ್ನು ಮತ್ತು ಅವರು ಆಯ್ಕೆ ಮಾಡಿರುವ ಸರ್ಕಾರವನ್ನು ಗೌರವಿಸಬೇಕೆಂದು ನಾನು ಕರೆನೀಡುತ್ತೇನೆ."

- ಶಾವೇಝ್. ವೆನಿಜುಯೇಲಾ ಅಧ್ಯಕ್ಷ

"ಗುಜರಾತ್‌ನ ಕೋಕಾ ಕಾಯ್ದೆಗೆ ತಿದ್ದುಪಡಿ ಅಗತ್ಯ ಏಕೆಂದರೆ ಅದು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನೂ ಸಾಕ್ಷ್ಯಯೆಂದು ಪರಿಗಣಿಸುತ್ತದೆ. ಆರೋಪಿಗಳ ಬಂಧನದ ಅವಧಿಯನ್ನು 90 ದಿನಗಳಿಂದ 180 ದಿನಗಳಿಗೆ ಏರಿಸುತ್ತದೆ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್‌ನ ಒಪ್ಪಿಗೆಯಿಲ್ಲದೆ ಆರೋಪಿಗಳಿಗೆ ಜಾಮೀನು ನೀಡಲಾಗದೆಂದು ಹೇಳುತ್ತದೆ. ಭಯೋತ್ಪಾದನಾ ವಿರೋಧಿ ಕಾನೂನು ನಮ್ಮ ಸಮಾಜದ ಒಂದು ವರ್ಗದ ದ್ವೇಷಕ್ಕಾಗಿ ಬಳಸಬಾರದು."



- ವೀರಪ್ಪ ಮೊಯಿಲಿ

"ನಮ್ಮ ಪಕ್ಷವು ಮೊದಲಿಂದಲೂ ಭೂಗತ ಪಕ್ಷವೇ ಆಗಿರುವುದರಿಂದ ಕೇಂದ್ರ ಸರ್ಕಾರ ಹೊರಿಸಿರುವ ನಿಷೇಧದಿಂದಾಗಿ ನಮ್ಮ ಕಾರ್ಯ ಚಟುವಟಿಕೆಗಳ ಮೇಲೆ ಯಾವುದೇ ಪ್ರಭಾವವಾಗುವುದಿಲ್ಲ."

- ಗೌರು ಚಕ್ರವರ್ತಿ ಸಿಪಿಐ(ಮಾವೋವಾದಿ) ಪಕ್ಷದ ವಕ್ತಾರ



"ರಾಜ್ಯದಲ್ಲಿ ವಿಕಾಸ ಕಾಣುತ್ತಿಲ್ಲ, ಬರೀ ವಿಕಲ್ಪ ಕಾಣುತ್ತಿದೆ."

- ಡಿ.ಕೆ. ಶಿವಕುಮಾರ್

ನಂಬಿದ್ರನಂಬಿ ಬಿಟ್ರೆಬಿಡಿ

"ಮಾವೋವಾದಿಗಳನ್ನು ನಿಷೇಧಿಸಿರುವ ಕೇಂದ್ರ ಸರ್ಕಾರದ ಕ್ರಮ ಸರಿಯಲ್ಲ. ಮಾವೋವಾದಿಗಳನ್ನು ರಾಜಕೀಯವಾಗಿ ಪ್ರತ್ಯೇಕಿಸಬೇಕೇ ವಿನಃ ಅದನ್ನು ಪೊಲೀಸ್ ಅಥವಾ ಭದ್ರತಾ ಕ್ರಮಗಳಿಂದ ನೀವು ಮಾಡಲಾರಿರಿ."

- ಸಿಪಿಎಂ

"ಸರ್ಕಾರಿ ಕಾಮಗಾರಿಗಳಲ್ಲಿ ವ್ಯಾಪಕ ಅವ್ಯವಹಾರ ನಡೆಯುತ್ತಿದ್ದು ಗುತ್ತಿಗೆ ನೀಡಲು ಹಾಗೂ ಬಿಲ್ ಪಾಸ್ ಮಾಡಿಸಲು ಶೇ.20ರಷ್ಟು ಲಂಚ ಪಡೆಯಲಾಗುತ್ತಿದೆ. ಮುಖ್ಯಮಂತ್ರಿಯ ಕಾರ್ಯದರ್ಶಿ ಬಳಿಗಾರ್ 'ವಸೂಲಾತಿ ಕಾರ್ಯದರ್ಶಿ'ಯಂತೆ ಕೆಲಸ ಮಾಡುತ್ತಿದ್ದಾರೆ."

- ವರ್ತೂರ್ ಪ್ರಕಾಶ್

"ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಹಾಸ್ಯ ಎಲ್ಲಾ ಕಾಲಕ್ಕೂ ಪ್ರಸ್ತುತ."

- ವೈ.ವಿ. ಗುಂಡೂರಾವ್, ಹಾಸ್ಯ ಸಾಹಿತಿ

"ಮುಂಬೈ ಕಮಿಷನರ್ ಗಫೂರ್‌ರವರನ್ನು ನಾವು ವರ್ಗಾವಣೆ ಮಾಡಿಲ್ಲ, ಅವರಿಗೆ ಪ್ರಮೋಷನ್ ಕೊಟ್ಟಿದ್ದೇವೆ."

- ಜಯಂತ್ ಪಾಟೀಲ್, ಮಹಾರಾಷ್ಟ್ರ ಗೃಹಮಂತ್ರಿ

"ಬಿಜೆಪಿಯ ನಾಯಕರು ಅವಕಾಶವಾದಿಗಳು. ಹಿಂದೂತ್ವವನ್ನು ರಾಜಕೀಯ ದಾಳವನ್ನಾಗಿ ಬಳಸಿಕೊಳ್ಳುವವರು. ಅವರಲ್ಲಿ ಹಲವರಿಗೆ ಈಗ ಆರೆಸ್ಸೆಸ್ ಬೇಡ ಅನಿಸುತ್ತಿದೆ. ಬಿಜೆಪಿಯ ಹಾಲಿ ಎಂಪಿಗಳಲ್ಲಿ ಕನಿಷ್ಠ 85 ಜನರಿಗಾದರೂ ದೀನ್‌ದಯಾಳ್ ಉಪಾಧ್ಯಾಯ ಯಾರೆಂಬುದೇ ತಿಳಿದಿರಲಿಕ್ಕಿಲ್ಲ."

-ಗೋವಿಂದಾಚಾರ್ಯ, ಬಿಜೆಪಿಯ ಮಾಜಿ ರಾಷ್ಟ್ರೀಯ ಕಾರ್ಯದರ್ಶಿ

ಕೊಟ್ಟಂತೆ ಮಾಡಿ ಕಿತ್ತುಕೊಳ್ಳುವುದೇ ಗುಡ್ ಗವರ್ನೆನ್ಸ್!

"2004ರಲ್ಲಿ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಾಗ ಮಾಡಿದ ಮೊದಲನೆ ಕೆಲಸವೇ ಮಾಹಿತಿ ಹಕ್ಕನ್ನು ಜಾರಿಗೊಳಿಸಿದ್ದು. ಈಗ ಅದು ಎರಡನೇ ಬಾರಿ ಅಧಿಕಾರಕ್ಕೆ ಬಂದ ತಕ್ಷಣ ಮಾಡುತ್ತಿರುವ ಮೊದಲನೇ ಕೆಲಸವೇ ಅದು ಜನರಿಗೆ ನೀಡುತ್ತಿದ್ದ ಅಧಿಕಾರಗಳನ್ನು ಕತ್ತರಿಸುತ್ತಿರುವುದು!"

- ಅರವಿಂದ್ ಕೇಜ್ರಿವಾಲ್, ಮಾಹಿತಿ ಹಕ್ಕು ಕಾರ್ಯಕರ್ತ

ಸುಸಂಸ್ಕೃತ ಅಭಿಪ್ರಾಯ.

"ಕನ್ನಡಕ್ಕೆ ಪೂರಕವಾಗಿ ಸಂಸ್ಕೃತ ಭಾಷೆಯಿಂದ ಜೀವದ್ರವ್ಯ ಪಡೆಯಬೇಕೆಂದಿದ್ದರೆ ಆ ಕಾರ್ಯವನ್ನು ಹಾಲಿ ಅಸ್ತಿತ್ವದಲ್ಲಿರುವ ಕನ್ನಡ ವಿಶ್ವವಿದ್ಯಾಲಯ ಅಥವಾ ಇನ್ನಿತರ ವಿವಿಗಳಿಗೆ ವಹಿಸಬಹುದು. ಭಾಷಾ ವಿಜ್ಞಾನದ ವಲಯದಲ್ಲಿ ಜನಬಳಸದ ಭಾಷೆ ಎಂದೇ ಗುರುತಿಸಲಾಗುವ ಸಂಸ್ಕೃತ ವಿವಿಯನ್ನು ಜನರ ತೆರಿಗೆ ಹಣದಲ್ಲಿ ಸ್ಥಾಪಿಸುವ ನಿರ್ಧಾರ ತಪ್ಪು."

-ಸಾಹಿತ್ಯ ಪರಿಷತ್ತಿನ ಚಿಂತನಾ ಗೋಷ್ಠಿಯ ಅಭಿಪ್ರಾಯ

ಜನರಿಗೂ ನ್ಯಾಯಾಲಯದ ಬಗ್ಗೆ ಹೀಗೆ ಹೇಳುವ ಹಕ್ಕಿರಬೇಕು!

"ನಾವು ರಚನಾತ್ಮಕ ಟೀಕೆಗಳನ್ನು ಅರ್ಥ ಮಾಡಿಕೊಳ್ಳಬಲ್ಲೆವು. ಆದರೆ ಅನಾರೋಗ್ಯಕರ ವಿಮರ್ಶೆಗಳನ್ನು ನಾವು ಸಹಿಸಿಕೊಳ್ಳಲು ಸಾಧ್ಯವಿಲ್ಲ."

- ಜಸ್ಟೀಸ್ ದಿನಕರನ್, ಮುಖ್ಯ ನ್ಯಾಯಮೂರ್ತಿ

ಮತ್ತೆ ಅಬಾರ್ಷನ್ ಹಕ್ಕಿನ ನಿರಾಕರಣೆ ಏನು?

"ಇಸ್ಲಾಮಿಕ್ ಬುರ್ಖಾಗೆ ಫ್ರಾನ್ಸ್‌ನಲ್ಲಿ ಸ್ವಾಗತವಿಲ್ಲ, ಏಕೆಂದರೆ ಇದೊಂದು ಧಾರ್ಮಿಕ ಚಿಹ್ನೆಯಲ್ಲ, ಬದಲಾಗಿ ಮಹಿಳಾ ಗುಲಾಮಗಿರಿಯ ಸಂಕೇತ."

- ಫ್ರಾನ್ಸ್ ಅಧ್ಯಕ್ಷ ಸರ್ಕೋಜಿ

ಹಾಗಾದರೆ ನಿಮ್ಮ ಹೋರಾಟ ಇದ್ದದ್ದು ಯಾರ ವಿರುದ್ಧ?


"ಕಾಂಗ್ರೆಸ್‌ನ ನಾಯಕರಾದ ಖರ್ಗೆ ಮತ್ತು ದೇಶಪಾಂಡೆಯವರು ಅಕ್ರಮ ಗಣಿಗಾರಿಕೆ ವಿರುದ್ಧ ದಿವಾಕರ ಬಾಬು ನಡೆಸುತ್ತಿದ್ದ ಹೋರಾಟಕ್ಕೆ ತಾವೂ ಜೊತೆಗೂಡುತ್ತೇವೆಂಬ ಆಶ್ವಾಸನೆ ಕೊಟ್ಟ ನಂತರ ಐದು ದಿನಗಳಿಂದ ನಡೆಸುತ್ತಿದ್ದ ಅವರ ಉಪವಾಸ ಸತ್ಯಾಗ್ರಹ ಕೊನೆಗೊಂಡಿತು."

- ಪತ್ರಿಕಾ ವರದಿ

You said it!

"ಬಡವರ ಮಟ್ಟಿಗೆ ಬದಲಾವಣೆ ಎಂದರೆ ಆಹಾರ ಮತ್ತು ಉದ್ಯೋಗಗಳೇ ವಿನಃ ಡ್ರೆಸ್ ಕೋಡ್‌ಗಳಲ್ಲಿ ಬರುವ ಬದಲಾವಣೆಯೂ ಅಲ್ಲ, ವೈವಿಧ್ಯಮಯ ಮನರಂಜನೆಗೆ ಸಿಗುವ ಅವಕಾಶವೂ ಅಲ್ಲ...ಇರಾನ್‌ನ ರಾಜಕಾರಣ ಮೂಲಭೂತವಾಗಿ ಒಂದು ವರ್ಗಯುದ್ಧದ ರಾಜಕಾರಣವೇ ವಿನಃ ಧರ್ಮಾಧಾರಿತವಾದದ್ದಲ್ಲ."

- ಜೇಮ್ಸ್ ಪೆಟ್ರಾಸ್



ಚಿಂತಕರ ಚಾವಡಿ

"ಇಂದು ಜನಪ್ರಿಯ ಸಾಂಸ್ಕೃತಿಕ ಪ್ರಾಕಾರಗಳಿಂದ ಹಿಡಿದು ಪ್ರಚಾರ ಸಾಧನಗಳವರೆಗೆ ಎಲ್ಲವೂ ಜನರನ್ನು ಎಲ್ಲೆಡೆ ಅಸಹಾಯಕರನ್ನಾಗಿ ಭಾವಿಸುವಂತೆ ಮಾಡುತ್ತಿವೆ. ಜನರಿಗೆ ಆ ಬಗೆಯ ಮನೋಭಾವ ಹುಟ್ಟಿಸುವಂತೆ ಮಾಡುವ ಒತ್ತಡ ಅವುಗಳ ಮೇಲೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಇದರಿಂದಾಗಿ ಜನರ ಪಾಲಿಗೆ ಉಳಿದುಕೊಂಡಿರುವ ಏಕೈಕ ಪಾತ್ರವೆಂದರೆ ಅಧಿಕಾರಸ್ಥರು ತೆಗೆದುಕೊಳ್ಳುವ ಎಲ್ಲಾ ನಿರ್ಧಾರಗಳನ್ನು ಒಪ್ಪಿಕೊಳ್ಳುವ ಮೂಲಕ ಅವಕ್ಕೆ ಮಾನ್ಯತೆ ಒದಗಿಸುವುದು ಮತ್ತು ಅದರ ಬಲಿಪಶುಗಳಾಗುವುದು."

- ನೋಮ್ ಚಾಮ್‌ಸ್ಕಿ

ಲಾಲ್‌ಗಢ ಆದಿವಾಸಿಗಳ ದಂಗೆ





ಕಂಡಹಾಗೆ

■ ಗೌರಿ ಲಂಕೇಶ್

ೇಂದ್ರ ಸರ್ಕಾರವು ಮೊನ್ನೆ ಮಾವೋವಾದಿಗಳ ನಕ್ಸಲೈಟರ ಮೇಲೆ ನಿಷೇಧವನ್ನು ಹೇರಿದೆ. ಮಾಡುವ ಮೂಲಕ "ಈ ದೇಶ ಎದುರಿಸುತ್ತಿರುವ ಆಂತರಿಕ ಸಮಸ್ಯೆ" ಎಂದು ಪ್ರಧಾನಿ ಮನಮೋಹನ್ ಬಣ್ಣಿಸಿದ್ದ ಮಾವೋವಾದಿಗಳ ಸಂಘಟನೆಯನ್ನು ಡಿಯಲಿದ್ದೇವೆ ಎಂದು ಘರ್ಜಿಸಿದೆ. ಆದರೆ ವಾಸ್ತವ ದರೆ ಹೇಗೆ ಭಯೋತ್ಪಾದಕ ತಡೆ ಕಾನೂನುಗಳು ತ್ಪಾದಕರ ಅಟ್ಟಹಾಸವನ್ನು ತಡೆಯುವುದಿಲ್ಲವೋ ಮೇ ಈ ನಿಷೇಧ ಕೂಡ ನಕ್ಸಲ್ ಸಮಸ್ಯೆಯನ್ನು ಸುವುದಿಲ್ಲ, ಬದಲಾಗಿ ಈ ನಿಷೇಧ ಎಂಬ ನ್ನ ಜನಪರ ಹೋರಾಟಗಳನ್ನು, ಸರ್ಕಾರದ ವಿರುದ್ಧದ ಟನೆಗಳನ್ನು ದಮನಿಸಲು ಸರ್ಕಾರಗಳು ದುರು ೀಗ ಮಾಡುತ್ತವೆ. ಅಂತಹ ಅಪಾಯಕಾರಿ ಗಳು ಈಗಾಗಲೇ ದೂರದ ಲಾಲ್‌ಗಢದಲ್ಲಿ ತ್ತಿವೆ.

ಾಗಲೇ ಲಾಲ್‌ಗಢ ಪ್ರದೇಶಗಳ ಮೇಲೆ ಪಶ್ಚಿಮ ದ ಪೊಲೀಸರು ಮತ್ತು ಸಿಆರ್‌ಪಿಎಫ್ ತಂಡಗಳು ಮಾಡಿ ಅಲ್ಲಿ ದಂಗೆ ಎದ್ದಿರುವ ಆದಿವಾಸಿಗಳನ್ನು ಹಾಕುತ್ತಿವೆ. ಸದ್ಯದಲ್ಲೇ ಮಾವೋವಾದಿಗಳನ್ನು ಓಡಿಸುವಲ್ಲಿಯೂ ಸರ್ಕಾರ ಯಶಸ್ವಿಯಾಗ ಂ. ಆದರೆ ಆದಿವಾಸಿಗಳ ದಂಗೆಗೆ ಮೂಲ ಕಾರಣ ಕು ಅರ್ಥ ಮಾಡಿಕೊಳ್ಳದಿದ್ದರೆ, ಬಡವರ ಲುಗಳಿಗೆ ಸರ್ಕಾರ ಕಿವಿಗೊಡದಿದ್ದರೆ ನಕ್ಸಲ್ ಯನ್ನು ಬಗೆಹರಿಸಲಾಗುವುದಿಲ್ಲ ಮತ್ತು ಇತರೆ ದಂಗೆಗಳನ್ನು ತಡೆಯಲಾಗುವುದಿಲ್ಲ. ಅದು

ತ್ತೀಚೆಗೆ ಪತ್ರಿಕೆಗಳಲ್ಲಿ ಲಾಲ್‌ಗಢದ ಆದಿವಾಸಿಗಳ ಪ್ರತಿಭಟನೆಯ ರ್‍ಯಾಲಿಯ ಬಗ್ಗೆ ವರದಿಗಳು ಫೋಟೋಗಳು ಪ್ರಕಟಗೊಂಡಿದ್ದವು. ಬಣ್ಣಬಣ್ಣದ ೊಟ್ಟು, ಕೈಗಳಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ಮಹಿಳೆಯರು; ಮಚ್ಚು ಮತ್ತು ಇತರೆ ಕೃಷಿ ಕೆಗಳನ್ನು ಆಯುಧದಂತೆ ಹಿಡಿದಿದ್ದ ಯುವಕರು ಟೋಗಳಲ್ಲಿದ್ದರು. ಈ ಆದಿವಾಸಿಗಳ ಬೇಡಿಕೆಗಳು ಂದು ಬಹಳಷ್ಟು ಲೇಖನಗಳನ್ನು ಓದಿ ನಾನು ದ ಮಾಹಿತಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ುತ್ತೇನೆ.

ಮ ಬಂಗಾಳದ ಪಶ್ಚಿಮ ಮಿಡ್ನಾಪುರ ಜಿಲ್ಲೆಯಲ್ಲಿ ಢವಿದೆ. ಇದು ಪಶ್ಚಿಮ ಬಂಗಾಳದಲ್ಲೇ ಅತಿ ದ ಪ್ರದೇಶ. ಇಲ್ಲಿನ ಜನಸಂಖ್ಯೆಯಲ್ಲಿ ಶೇ. 57 ಮತ್ತು ಎಸ್‌ಟಿಗಳಾಗಿದ್ದು, ಶೇ. 40 ಜನ ೇಖೆಗಿಂತ ಕೆಳಗೆ ಇದ್ದಾರೆ. ಅವರಲ್ಲಿ ಬಹಳಷ್ಟು ಕೂಲಿಗಳಾಗಿದ್ದಾರೆ. ಇಲ್ಲಿ ಅಭಿವೃದ್ಧಿ ಎಂಬುದರ ಷವೂ ಇಲ್ಲ, ಇವತ್ತಿಗೂ ಇಲ್ಲಿನ ಹಳ್ಳಿಗಳಿಗೆ ಸಂಪರ್ಕವಿಲ್ಲ, ಶಾಲಾ ಕಟ್ಟಡಗಳಿದ್ದರೂ ರಿಲ್ಲ, ನೀರಾವರಿ ಕಾಲುವೆಗಳಿದ್ದರೂ ಅವುಗಳಲ್ಲಿ ಹರಿಯುವುದಿಲ್ಲ, ಇನ್ನು ಆಸ್ಪತ್ರೆ, ಶೌಚಾಲಯ ಇಲ್ಲವೇ ಇಲ್ಲ, ಈ ಪ್ರದೇಶದ ಅಭಿವೃದ್ಧಿಗೆ ದಿದ್ದರೂ ಅದನ್ನೆಲ್ಲಾ ಪಂಚಾಯತಿಯ ನಾಯಕರು ೊಡೆದಿದ್ದಾರೆ. ಜನ ಉದ್ಧಾರವಾಗದಿದ್ದರೂ ೊಲೀಸ್ ಠಾಣೆಗಳ ಆಧುನೀಕರಣಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ. ಪೊಲೀಸ್ ಕ್ಯಾಂಪುಗಳ ಸಂಖ್ಯೆ ಹೆಚ್ಚುತ್ತಲೇ ಇದ್ದು ಅವರಿಗೆಲ್ಲ ಆಧುನಿಕ ಶಸ್ತ್ರಾಸ್ತ್ರಗಳನ್ನು ನೀಡಲು ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ.

ಒಂದೆಡೆ ಪೊಲೀಸರ ದೌರ್ಜನ್ಯ ಇನ್ನೊಂದೆಡೆ ಕಿತ್ತು ತಿನ್ನುವ ಬಡತನದಲ್ಲಿ ಬೆಂದಿದ್ದ ಈ ಪ್ರದೇಶ ಸಹಜವಾಗಿಯೇ ಮಾವೋವಾದಿಗಳ ಗಮನವನ್ನು ಸೆಳೆಯಿತು. ಅವರು ಅಲ್ಲಿನ ಜನರ ಪರ ವಹಿಸಿ ಹಲವು ಹೋರಾಟಗಳನ್ನು ರೂಪಿಸಲು ಯತ್ನಿಸಿದರು. 1998 ರಲ್ಲೇ ಇದರ ಸೂಚನೆ ಪೊಲೀಸರಿಗೆ ಗೊತ್ತಾಗಿ ಅವರು ಜನರನ್ನು ದಮನಿಸಲು ಪ್ರಾರಂಭಿಸಿದರು. ಪೊಲೀಸರಿಗೆ 'ಸಂಶಯಾಸ್ಪದ'ವಾಗಿ ಕಂಡವರನ್ನೆಲ್ಲ ಬಂಧಿಸಿ ಚಿತ್ರಹಿಂಸೆ ನೀಡಲಾರಂಭಿಸಿದರು. ಈ ಹಿಂಸೆಯಿಂದ ಬಿಡುಗಡೆ ಪಡೆಯಬೇಕೆಂದರೆ ಬಂಧನಕ್ಕೊಳಗಾದ ವ್ಯಕ್ತಿಯ ಸಂಬಂಧಿಕರು "ಈತ ಕಾಡಿನಲ್ಲಿ ಬಂದೂಕುಗಳನ್ನು, ಇತರೆ ಶಸ್ತ್ರಾಸ್ತ್ರಗಳನ್ನು ಬಚ್ಚಿಟ್ಟಿದ್ದ" ಎಂದು ಲಿಖಿತ ರೂಪದಲ್ಲಿ ಒಪ್ಪಿಗೆಯನ್ನು ಕೊಡಬೇಕಿತ್ತು. ಹತ್ತು ವರ್ಷಗಳಲ್ಲಿ ಇದು ಯಾವ ಹಂತ ತಲುಪಿತೆಂದರೆ 2008 ರ ಹೊತ್ತಿಗೆ 'ಮಾವೋವಾದಿ' ಎಂದೋ, 'ಮಾವೋವಾದಿ ಬೆಂಬಲಿಗ' ಎಂದೋ ಬಂಧನಕ್ಕೊಳಗಾಗದಿದ್ದ ಒಂದೇ ಒಂದು ಆದಿವಾಸಿ ಕುಟುಂಬ ಇಡೀ ಪ್ರದೇಶದಲ್ಲಿ ಸಿಗುವುದೇ ಕಷ್ಟವಾಗಿತ್ತು. ಒಂದು ಸತ್ಯ ಶೋಧನ ಸಮಿತಿಯ ವರದಿ ಪ್ರಕಾರ ಕಳೆದ ಒಂದು ದಶಕದಲ್ಲಿ ಮಹಿಳೆಯರೂ ಸೇರಿದಂತೆ 1500 ಜನರನ್ನು ಪೊಲೀಸರು ಬಂಧಿಸಿ ಅವರನ್ನು 'ಏರೋಪ್ಲೇನು' ಹತ್ತಿಸಿದ್ದಾರೆ. ಅವರಲ್ಲಿ ಅದೆಷ್ಟೋ ಜನರನ್ನು ಮತ್ತೆ ಮತ್ತೆ ಬಂಧಿಸಿ ಚಿತ್ರಹಿಂಸೆ ನೀಡಿದ್ದಾರೆ. ಅದೂ ಸಾಲದೆಂಬಂತೆ ನಡುರಾತ್ರಿಯಲ್ಲಿ ಸಾವಿರಾರು ಮನೆಗಳಿಗೆ ನುಗ್ಗಿ ಮಹಿಳೆಯರ ಮೇಲೆ ಅತ್ಯಾಚಾರ ವೆಸಗಿದ್ದಾರೆ.

ಇಷ್ಟೆಲ್ಲ ದೌರ್ಜನ್ಯಗಳು ಕಳೆದ ಹತ್ತು ವರ್ಷಗಳಿಂದ ನಡೆಯುತ್ತಾ ಬಂದಿದ್ದರೂ ಲಾಲ್‌ಗಢದ ಜನ ಎಂದೂ ಪ್ರತಿಭಟಿಸಿರಲಿಲ್ಲ, ಸರ್ಕಾರದ ವಿರುದ್ಧ ದನಿ ಎತ್ತಿರಲಿಲ್ಲ, ಅಸಂಘಟಿತರಾಗಿದ್ದ ಜನರಿಗೆ ಹೋರಾಟದ ಮಾರ್ಗವೂ ಗೊತ್ತಿರಲಿಲ್ಲ, ಆದ್ದರಿಂದ ಪೊಲೀಸರಿಗೆ ಲಂಗುಲಗಾಮು ಹಾಕುವವರೇ ಇರಲಿಲ್ಲ.

ಇದೆಲ್ಲ ಬದಲಾಗಿದ್ದು 2008 ರ ನವೆಂಬರ್ 2 ರಂದು. ಅಂದು ಸಲ್ಬೋನಿ ಎಂಬಲ್ಲಿ ಜಿಂದಾಲ್ ಕಂಪನಿ ಸ್ಥಾಪಿಸಲಿರುವ ಉಕ್ಕು ಕಾರ್ಖಾನೆಯ ವಿಶೇಷ ಆರ್ಥಿಕ ವಲಯುವನ್ನು ಉದ್ಘಾಟಿಸಿ ರಾಜಧಾನಿ ಕಲ್ಕತ್ತಾಗೆ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಮತ್ತು ಅಂದಿನ ಕೇಂದ್ರ ಉಕ್ಕು ಸಚಿವ ರಾಮ್ ವಿಲಾಸ್ ಪಾಸ್ವಾನ್ ಹಿಂದಿರುಗುತ್ತಿದ್ದರು. ಆಗ ಅವರ ಸಿಬ್ಬಂದಿ ಮೇಲೆ ನೆಲಬಾಂಬ್‌ಗಳನ್ನು ಸ್ಫೋಟಿಸಲಾಯಿತು. ಆ ದಾಳಿಯ ಹಿಂದಿದ್ದದ್ದು ಮಾವೋವಾದಿಗಳು. ಆದರೆ ಅದೃಷ್ಟವಶಾತ್ ಅವರಿಬ್ಬರೂ ಆ ದಾಳಿಯಲ್ಲಿ ಸುರಕ್ಷಿತವಾಗಿ ಪಾರಾದರು. ಆ ದಾಳಿಯ ನಂತರ ಕೆಳ ದರ್ಜೆಯ ಪೊಲೀಸರನ್ನು ಅಮಾನತ್ತು ಮಾಡಲಾಯಿತು ಮತ್ತು ಕೆಲವೇ ಕೆಲವು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಕರ್ತವ್ಯ ನಿರ್ಲಕ್ಷ್ಯದ ಆರೋಪದ ಮೇಲೆ ಷೋಕಾಸ್ ನೋಟೀಸ್‌ಗಳನ್ನು ಜಾರಿಗೊಳಿಸಲಾಯಿತು.

ಅಂದಹಾಗೆ ಈ ಜಿಂದಾಲ್ ಸ್ಟೀಲ್ ಕಾರ್ಖಾನೆಗೆ ಲಾಲ್‌ಗಢದಲ್ಲಿ 5000 ಎಕರೆಗಳನ್ನು ನೀಡಲಾಗಿದೆ. ಅದರಲ್ಲಿ ಕೇವಲ 500 ಎಕರೆಗಳನ್ನು ಜಿಂದಾಲ್ ಕಂಪನಿ ರೈತರಿಂದ ನೇರವಾಗಿ ಖರೀದಿಸಿದರೆ, ಉಳಿದ 4,500 ಎಕರೆಗಳನ್ನು ಪಶ್ಚಿಮ ಬಂಗಾಳದ ಸರ್ಕಾರವೇ ಕಡಿಮೆ ದರದಲ್ಲಿ ನೀಡಿದೆ. ವಾಸ್ತವವಾಗಿ ಕಾಡು ಪ್ರದೇಶಗಳನ್ನೂ ಹೊಂದಿರುವ ಈ 4,500 ಎಕರೆಗಳಲ್ಲಿ ಭೂಸುಧಾರಣೆ ಯೋಜನೆಯಡಿ ಭೂರಹಿತ ಆದಿವಾಸಿಗಳಿಗೆ ನೀಡುತ್ತೇವೆ ಎಂದು ಈ ಹಿಂದೆ ಸರ್ಕಾರ ಹೇಳಿತ್ತು. ಆದರೆ ಹಾಗೆ ಮಾಡುವ ಬದಲಾಗಿ ಇದೇ ಜಾಗದಲ್ಲಿ ಜಿಂದಾಲ್ ಕಂಪನಿ ತನ್ನ ಕಾರ್ಖಾನೆಯನ್ನು ಸ್ಥಾಪಿಸಲು ಮತ್ತು ಅದಕ್ಕೆಂದು ವಿಶೇಷ ಆರ್ಥಿಕ ವಲಯವನ್ನು ಘೋಷಿಸಲು ರಾಜ್ಯ ಸರ್ಕಾರ ನೆರವು ನೀಡಿತ್ತು. ಅಷ್ಟೇ ಅಲ್ಲ, ಹಾಗೆ ಮಾಡುವ ಮೂಲಕ ಈ ಕಾರ್ಖಾನೆಯಿಂದಾಗಿ ಪರಿಸರದ ಮೇಲಾಗುವ ಪರಿಣಾಮವನ್ನು ನಿರ್ಲಕ್ಷಿಸಿತಲ್ಲದೆ, ಎಲ್ಲ ಇತರೆ ಕಾನೂನುಬದ್ಧ ನಿರ್ಬಂಧಗಳಿಂದ ಜಿಂದಾಲ್ ಕಂಪನಿ ಪಾರಾಗುವಂತೆ ಸಹಕರಿಸಿತ್ತು. ಸಹಜವಾಗಿಯೇ ಇದೆಲ್ಲ ಅಲ್ಲಿನ ಆದಿವಾಸಿ ಜನರಲ್ಲಿ ತಮ್ಮ ಭೂಮಿ ಮತ್ತು ಬದುಕಿನ ಶೈಲಿಗೆ ಸರ್ಕಾರ ಮಾರಕವಾಗುತ್ತಿದೆ ಎಂಬ ಭಾವನೆಯನ್ನು ಹೆಚ್ಚಿಸಿತು.

ಲಾಲ್‌ಗಢದ ಮೇಲೆ ಪೊಲೀಸರ ದಾಳಿ.....








ಮುಖ್ಯಮಂತ್ರಿ ಭಟ್ಟಾಚಾರ್ಯರ ಹತ್ಯಾಯತ್ನದ ನಂತರ ಪೊಲೀಸರು ಎಂದಿನಂತೆ ಅಮಾಯಕರ ಮೇಲಿನ ದೌರ್ಜನ್ಯವನ್ನು ಮತ್ತಷ್ಟು ತೀವ್ರಗೊಳಿಸಿದರು. ಆ ನೆಲಬಾಂಬ್ ಸ್ಫೋಟಿಸಿದ ಮಾವೋವಾದಿಗಳನ್ನು ಬಂಧಿಸುವಲ್ಲಿ ವಿಫಲರಾದ ಪೊಲೀಸರು ತಮ್ಮ ಅಸಹಾಯಕತೆಯಿಂದ ಜನಿಸಿದ ಕೆಂಗಣ್ಣನ್ನು ಆದಿವಾಸಿಗಳತ್ತ ತಿರುಗಿಸಿದರು. ಹತ್ಯಾಯತ್ನ ಮರುದಿನ ಹೈಸ್ಕೂಲಿನಲ್ಲಿ ಓದುತ್ತಿರುವ ಮೂರು ಬಾಲಕರನ್ನು ಬಂಧಿಸಿದ ಪೊಲೀಸರು ಅವರೆಲ್ಲ "ದೇಶದ್ರೋಹಿ ಕೃತ್ಯಗಳಲ್ಲಿ ಪಾಲ್ಗೊಂಡಿದ್ದಾರೆ" ಎಂದು ಆರೋಪಿಸಿದರು. ಅದಾದ ಮಾರನೆಯ ದಿನ ಆದಿವಾಸಿಯೊಬ್ಬನನ್ನು ಬಂಧಿಸಿ ಆತನ ಗರ್ಭಿಣಿ ಹೆಂಡತಿಯನ್ನು ಹೇಗೆ ಥಳಿಸಿದರೆಂದರೆ ಆಕೆಯನ್ನು ಆಸ್ಪತ್ರೆಗೆ ದಾಖಲಿಸಬೇಕಾಯಿತು. ಅದೂ ಸಾಲದೆಂಬಂತೆ ಲಾಲ್‌ಗಢದ 35 ಹಳ್ಳಿಗಳ ಮೇಲೆ ದಾಳಿ ಮಾಡಿದ ಪೊಲೀಸರು ಹೆಂಗಸರು, ಮಕ್ಕಳು ಎಂದು ಮುಖ-ಮೂತಿ ನೋಡದೆ ಎಂತಹ ದೌರ್ಜನ್ಯವೆಸಗಿದರೆಂದರೆ ಓರ್ವ ಮಹಿಳೆಯ ಕಣ್ಣಿಗೆ ಪೆಟ್ಟುಬಿದ್ದು ಆಕೆ ಒಂದು ಕಣ್ಣಿನಲ್ಲಿ ದೃಷ್ಟಿಯನ್ನು ಕಳೆದುಕೊಂಡರೆ ಮತ್ತೋರ್ವಳ ಹಲವಾರು ಮೂಳೆಗಳು ಮುರಿದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾಯಿತು.

ಲಾಲ್‌ಗಢ ಪ್ರದೇಶದ ಬಂಕುರ, ಪುರುಲಿಯಾ ಮತ್ತು ಮಿಡ್ನಾಪುರದ ಆದಿವಾಸಿಗಳಿಗೆ ಪೊಲೀಸರ ದೌರ್ಜನ್ಯ ಹೊಸದೇನಾಗಿರಲಿಲ್ಲ, ಆದರೆ ಈ ಬಾರಿ ಮಹಿಳೆಯರ ಮೇಲೂ ಪೊಲೀಸರು ಅವ್ಯಾಹತವಾಗಿ ದಾಳಿ ಮಾಡಿದ್ದರಿಂದ ಅವರ ಸಹನೆಯ ಕಟ್ಟೆ ಒಡೆಯಿತು. ಅವರೆಲ್ಲಾ ಸೆಟೆದೆದ್ದು ನಿಂತರು. ಮೂವರು ಅಮಾಯಕ ಬಾಲಕರನ್ನು ಬಂಧಿಸಿದ್ದ ಪೊಲೀಸ್ ಠಾಣೆಯನ್ನು ಸುತ್ತುವರಿದ ಸಾವಿರಾರು ಆದಿವಾಸಿಗಳು ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು. ಅದಾದ ಮಾರನೆ ದಿನ ಹತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಆದಿವಾಸಿ ಪುರುಷರು ಮತ್ತು ಮಹಿಳೆಯರು ಲಾಲ್‌ಗಢದೊಂದಿಗೆ ಸಂಪರ್ಕ ಹೊಂದಿದ್ದ ರಸ್ತೆಗಳನ್ನು ಅಗೆದು, ಮರದ ದಿಣ್ಣೆಗಳನ್ನು ಪೇರಿಸಿಟ್ಟರು. ಇನ್ನು ಮುಂದೆ ತಮ್ಮನ್ನು ಪೀಡಿಸುತ್ತಿದ್ದ ಪೊಲೀಸರಾಗಲಿ, ಸಿಪಿಎಂನ ಗೂಂಡಾಗಳಾಗಲಿ, ತಮ್ಮನ್ನು ನಿರ್ಲಕ್ಷಿಸಿದ್ದ ಅಧಿಕಾರಿಗಳಾಗಲಿ

▶▶▶4

ಅಕಾಡೆಮಿ ಪ್ರಶಸ್ತಿ




ಹೆಚ್.ಎಲ್.ಕೇಶವಮೂರ್ತಿಯವರಿಗೆ ಅಭಿನಂದನೆಗಳು...

'ಲಂಕೇಶ್' ಬಳಗದ ಅಂಕಣಕಾರ, ಹಿರಿಯರಾದ ಹೆಚ್.ಎಲ್. ಕೇಶವಮೂರ್ತಿಯವರಿಗೆ 2007ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

'ದೇವರುಗಳ ಟೈಮೇ ಸರಿ ಇಲ್ಲ' ಎಂಬ ಲಲಿತ ಪ್ರಬಂಧಗಳ ಅವರ ಪುಸ್ತಕ ನಮ್ಮ ಸಮಾಜದ ಹಿತಶತ್ರುಗಳಿಗೆ ಕನ್ನಡಿ ಹಿಡಿಯುವಂತಿದೆ. ಎಚ್ಚೆಲ್ಕೆ ಅವರು ತಮ್ಮ ಮೊನಚಾದ ವ್ಯಂಗ್ಯ, ತಮಾಷೆಯೊಳಗೆ ವಿಷಾದ ಮೂಡಿಸುವ ಬರಹಗಳ ಶೈಲಿಯಿಂದಲೇ ಓದುಗರ ಮೆಚ್ಚಿನ ಲೇಖಕರಾಗಿದ್ದಾರೆ.

ವಿಪರೀತ ಸಂಕೋಚ ಹಾಗೂ ಆತ್ಮಾಭಿಮಾನದ ಎಚ್ಚೆಲ್ಕೆಯವರಿಗೆ 'ಲಂಕೇಶ್' ಬಳಗದ ಹಾಗೂ ಓದುಗರ ಪರವಾಗಿ ಅಭಿನಂದನೆಗಳು ■

▶▶▶3



ಲಾಲ್‌ಗಢದಲ್ಲಿ ಒಂದು ವಾಲ್‌ಪೋಸ್ಟರ್.......

ತಮ್ಮ ಅನುಮತಿ ಇಲ್ಲದೆ ತಮ್ಮ ಪ್ರದೇಶವನ್ನು ಪ್ರವೇಶಿಸಕೂಡದು ಎಂದು ಹೇಳಿದರು. ಇವತ್ತು ಈ ಹೋರಾಟದಲ್ಲಿ ಒಂದು ಲಕ್ಷ ಅರವತ್ತು ಸಾವಿರದಷ್ಟು ಜನ ಭಾಗಿಯಾಗಿದ್ದಾರೆಂದರೆ ಅದು ಎಷ್ಟು ದೊಡ್ಡ ದಂಗೆಯಾಗಿದೆ ಎಂಬುದು ಸುಲಭವಾಗಿ ಅರ್ಥವಾಗುತ್ತದೆ.

ಕಳೆದ 32 ವರ್ಷಗಳಿಂದ ಸಿಪಿಎಂ ನಿರಾತಂಕವಾಗಿ ಆಡಳಿತ ನಡೆಸುತ್ತಾ ಬಂದಿರುವ ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶಗಳಲ್ಲಿ ಪೊಲೀಸರ ಜೀಪುಗಳು . ಮತ್ತು ಮೋಟಾರ್ ಬೈಕುಗಳನ್ನೇರಿ ಬರುವ ಸಿಪಿಎಂ ಪಕ್ಷದ ಗೂಂಡಾ ಪಡೆಗಳು ಅಮಾಯಕರ ಶೋಷಣೆಯ ಪ್ರತೀಕಗಳಾಗಿವೆ. ಆದ್ದರಿಂದ ಈ ವಾಹನಗಳು ತಾವಿರುವ ಪ್ರದೇಶಗಳನ್ನು ಪ್ರವೇಶಿಸದಂತೆ ರಸ್ತೆಯನ್ನು ಅಗೆಯುವುದೂ ಜನರ ಪ್ರತಿಭಟನೆಯ ಒಂದು ಅಂಗವಾಗಿದೆ. ಈ ಹಿಂದೆ ನಂದಿಗ್ರಾಮದಲ್ಲಿ ನಡೆದದ್ದೂ ಇಂತಹದ್ದೇ ಪ್ರತಿಭಟನೆ.


ಆದರೆ ನಂದಿಗ್ರಾಮದ ಜನರ ಮೇಲೆ ರೌಡಿ ಗ್ಯಾಂಗುಗಳನ್ನೂ, ಬಂದೂಕುಧಾರಿ ಪೊಲೀಸರನ್ನೂ ಛೂ ಬಿಟ್ಟಂತೆ ಲಾಲ್‌ಗಢದಲ್ಲಿ ಸಿಪಿಎಂ ಸರ್ಕಾರಕ್ಕೆ ಮಾಡಲಾಗಲಿಲ್ಲ. ಅದಕ್ಕೆ ಒಂದು ಕಾರಣ ಈ ಪ್ರದೇಶ ನಂದಿಗ್ರಾಮಕ್ಕಿಂತಲೂ ವಿಸ್ತಾರವಾಗಿರುವುದು. ಎರಡನೆ ಕಾರಣ, ಅಲ್ಲಿನ ಆದಿವಾಸಿಗಳು ಯಾವ ಸರ್ಕಾರಿ ಸೌಲಭ್ಯವನ್ನು ಪಡೆಯದೆ ಇಷ್ಟು ವರ್ಷಗಳ ಕಾಲ ಬದುಕಿರುವುದರಿಂದ ಅವರಿಗೆ ಆ ಸೌಲಭ್ಯಗಳನ್ನು ನಿರಾಕರಿಸುವ ಮೂಲಕ ಅವರ ಹೋರಾಟವನ್ನು ಹದ್ದುಬಸ್ತಿಗೆ ತರಲಾಗದಿದ್ದದ್ದು. ಅದೆಲ್ಲಕ್ಕಿಂತ ಮುಖ್ಯವಾಗಿ ಆದಿವಾಸಿಗಳ ಈ ಹೋರಾಟ ಒಂದು ಸಾಮೂಹಿಕ ಪ್ರಕ್ರಿಯೆಯಾಗಿದ್ದು ಅದಕ್ಕೆ ಯಾರೇ ನಾಯಕ ಇಲ್ಲದಿರುವುದರಿಂದ ಆತನನ್ನು ಬಗ್ಗುಬಡಿಯುವುದಾಗಲಿ, ಓಲೈಸಿಕೊಳ್ಳುವುದಾಗಲಿ ಸಾಧ್ಯವಾಗದಿದ್ದದ್ದು.

ಭಾರತ ಜಗತ್ತಿನಲ್ಲೇ ಅತಿದೊಡ್ಡ ಪ್ರಜಾಪ್ರಭುತ್ವ ಎಂದು ಬಡಾಯಿ ಕೊಚ್ಚಿಕೊಳ್ಳುತ್ತೇವೆ. ಆದರೆ ನಿಜವಾದ ಪ್ರಜಾಪ್ರಭುತ್ವ ಎಂದರೇನು, ಅದು ಹೇಗಿರಬೇಕೆಂದು ಲಾಲ್‌ಗಢದ ಆದಿವಾಸಿಗಳು ಜಾರಿಗೆ ತಂದಿದ್ದಾರೆ. ಪೊಲೀಸ್ ದೌರ್ಜನ್ಯದ ವಿರುದ್ಧ ಜನರ ಸಮಿತಿಯನ್ನು ರಚಿಸಿಕೊಂಡಿರುವ ಅಲ್ಲಿನ ಆದಿವಾಸಿಗಳು ಪ್ರತಿ ಹಳ್ಳಿಯಲ್ಲಿ ಹತ್ತು ಸದಸ್ಯರ ಸಮಿತಿಯನ್ನು ಹೊಂದಿದ್ದಾರೆ. ಇವತ್ತಿಗೂ ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ. 33 ಪ್ರಾತಿನಿಧಿತ್ವ ಕೊಡಬೇಕೆಂಬುದರ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಅನಕ್ಷರಸ್ಥರಾದ ಲಾಲ್‌ಗಢದ ಆದಿವಾಸಿಗಳು ತಮ್ಮ ಹಳ್ಳಿ ಸಮಿತಿಗಳಲ್ಲಿ ಮಹಿಳೆಯರಿಗೆ ಶೇ. 50 ಪ್ರಾತಿನಿಧಿತ್ವವನ್ನು ನೀಡಿದ್ದಾರೆ! ಪ್ರತಿ ಸಮಿತಿಯಲ್ಲಿ ಐವರು ಮಹಿಳೆಯರು ಮತ್ತು ಐವರು ಪುರುಷರಿದ್ದು ಎಲ್ಲಾ ಮುಖ್ಯ ನಿರ್ಧಾರಗಳನ್ನು ಸಾರ್ವಜನಿಕ ಸಭೆಗಳಲ್ಲಿ ಕೈಗೊಳ್ಳಲಾಗುತ್ತದೆ. ಸಮಿತಿಯ ಸದಸ್ಯರ ಕೆಲಸ ಜನರ ನಿರ್ಧಾರವನ್ನು ವ್ಯಕ್ತಪಡಿಸುವುದಾಗಿರುತ್ತದೆಯೇ ಹೊರತು ಅವರೇ ಸ್ವಯಂ ಪ್ರೇರಣೆಯಿಂದ ಜನರ ಸಮ್ಮತಿ ಇಲ್ಲದೆ ಯಾವ ನಿರ್ಧಾರವನ್ನೂ ಕೈಗೊಳ್ಳುವಂತಿಲ್ಲ. ಇದು ಎಷ್ಟು ಪ್ರಜಾಸತ್ತಾತ್ಮಕ ವ್ಯವಸ್ಥೆ ಎಂದರೆ ಕಳೆದ ವರ್ಷ ಲಾಲ್‌ಗಢವನ್ನು ಪೊಲೀಸರು ಪ್ರವೇಶಿಸದಂತೆ ರಸ್ತೆಗಳನ್ನು ಅಗೆದ ನಂತರ ತಮ್ಮ ಬೇಡಿಕೆಗಳು ಏನಾಗಿರಬೇಕು ಎಂದು ಅಲ್ಲಿನ ಆದಿವಾಸಿಗಳು ನಿರ್ಧರಿಸಿದ್ದು 158 ಹಳ್ಳಿಗಳಿಂದ ಸೇರಿದ್ದ 10 ರಿಂದ 12,000 ಸಾವಿರ ಹಳ್ಳಿಗಳ ಸಮಿತಿ ಸದಸ್ಯರಿದ್ದ ಸಾರ್ವಜನಿಕ ಸಭೆಯಲ್ಲಿ!

ಆ ಸಭೆಯ ನಂತರ ತಮ್ಮ ಮೇಲಿನ ಪೊಲೀಸರ ದೌರ್ಜನ್ಯಕ್ಕೆ ಪರಿಹಾರವಾಗಿ ಮಂಡಿಸಿದ 13 ಅಂಶಗಳ ಪಟ್ಟಿ ಎಷ್ಟು ಸರಳವಾಗಿತ್ತೆಂದರೆ ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದೇ ಸಿಪಿಎಂ ಸರ್ಕಾರಕ್ಕಾಗಲಿ, ಅಧಿಕಾರಿಗಳಿಗಾಗಲಿ ಗೊತ್ತಾಗಲಿಲ್ಲ. ಏಕೆಂದರೆ ತಮ್ಮ ಮೇಲೆ ದೌರ್ಜನ್ಯವೆಸಗಿದ್ದ ಪೊಲೀಸರ ಮುಖ್ಯಸ್ಥ ಎಸ್‌ಪಿಯನ್ನು ಅಮಾನತ್ತುಗೊಳಿಸಬೇಕೆಂದಾಗಲಿ, ಆತನ ವಿರುದ್ಧ ನ್ಯಾಯಾಲಯ ವಿಚಾರಣೆ ನಡೆಯಬೇಕೆಂದಾಗಲಿ ಅವರು ಕೋರಲಿಲ್ಲ. ಅಷ್ಟೇ ಅಲ್ಲ ತಮ್ಮ ಮಹಿಳೆಯರ ಮೇಲೆ ಲಾಠಿಪ್ರಹಾರ ಮಾಡಿದ್ದ ಪೊಲೀಸ್ ಪೇದೆಗಳ ವಿರುದ್ಧ ಕ್ರಮ ಜರುಗಿಸಬೇಕೆಂದೂ ಅವರು ಕೇಳಿಕೊಂಡಿರಲಿಲ್ಲ. ಬದಲಾಗಿ ತಮ್ಮ ಆದಿವಾಸಿ ಸಮುದಾಯದಲ್ಲಿ ದಾರಿತಪ್ಪಿದ ಯುವಕರಿಗೆ ತಾವು ನೀಡುವ ಶಿಕ್ಷಾಕ್ರಮಗಳನ್ನೇ ಅವರ ಮೇಲೆ ವಿಧಿಸಬೇಕೆಂದು ಕೋರಿದ್ದರು. ಅದರಂತೆ ಎಸ್‌ಪಿ ತನ್ನ ಕಿವಿಗಳನ್ನು ಹಿಡಿದುಕೊಂಡು ಉಟ್‌ಭೈಸ್ ಮಾಡಿ ಜನರ ಕ್ಷಮೆ ಕೇಳಿದರೆ ಸಾಕು. ಹಾಗೆಯೇ ಲಾಠಿ ಪ್ರಹಾರ ಮಾಡಿದ್ದ ಪೇದೆಗಳು ಪಶ್ಚಾತಾಪದ ರೂಪದಲ್ಲಿ ತಾವು ಕ್ರೌರ್ಯವನ್ನು ಎಸಗಿದ್ದ ರಸ್ತೆಗಳಲ್ಲಿ ಉರುಳು ಸೇವೆ ಮಾಡಿದರೆ ಸಾಕು ಎಂದಿದ್ದರು!

ನಮ್ಮ ಸರ್ಕಾರಗಳು ಮತ್ತು ನ್ಯಾಯಾಂಗ ಬಡವರ ಮತ್ತು ಶೋಷಿತರ ವಿರುದ್ಧವೇ ಇದೆ ಎಂದೂ, ಆ ವ್ಯವಸ್ಥೆಯಲ್ಲಿ ತಮಗೆಂದೂ ನ್ಯಾಯ ಸಿಗುವುದಿಲ್ಲವೆಂದೂ ಬಗೆದ ಆದಿವಾಸಿಗಳು ತಮ್ಮ ಸಮುದಾಯದ ಶಿಕ್ಷಾ ಪ್ರಕಾರಗಳನ್ನೇ ಪೊಲೀಸರ ಮೇಲೆ ವಿಧಿಸಬೇಕೆಂದು ಕೋರಿದ್ದರ ಹಿಂದೆ ಅವರ ರಾಜಕೀಯ ಪ್ರಜ್ಞೆ ಮತ್ತು ಸಾಮಾಜಿಕ ಮುಗ್ಧತೆಯೂ ಇದೆ ಎನಿಸುತ್ತದೆ.

ಆದರೆ ಇಂತಹ 'ಶಿಕ್ಷೆ'ಗಳು ನಮ್ಮ ಪ್ರಜಾಪ್ರಭುತ್ವದಲ್ಲಿ 'ಸರಿಯಲ್ಲ'ವಾದ್ದರಿಂದ ಅವುಗಳನ್ನು ಸರ್ಕಾರ ನಿರಾಕರಿಸಿತು. ಅಷ್ಟೇ ಅಲ್ಲ ಲಾಲ್‌ಗಢದ ಆದಿವಾಸಿಗಳ ಹೋರಾಟದ ಹಿಂದೆ, ಅವರು ರೂಪಿಸಿಕೊಂಡಿದ್ದ 'ಪೊಲೀಸರ ದೌರ್ಜನ್ಯದ ವಿರುದ್ಧ ಜನರ ಸಮಿತಿ'ಯ ಹಿಂದೆ ಮಾವೋವಾದಿಗಳಿದ್ದಾರೆಂದೂ, ಆ ಸಮಿತಿಯೇ ನಕ್ಸಲೈಟರ ಮುಖವಾಡವೆಂದೂ ಹುಯಿಲೆಬ್ಬಿಸಿತು. ಅದರ ಹಿಂದಿದ್ದ ಉದ್ದೇಶ ಸ್ಪಷ್ಟ. ಈ ಹಿಂದೆ ನಂದಿಗ್ರಾಮದ ಮೇಲೆ ಸರ್ಕಾರ ಮತ್ತು ಸಿಪಿಎಂ ರೌಡಿಗಳು ದಾಳಿ ನಡೆಸಿದ್ದಾಗ ಅದನ್ನು ಪಶ್ಚಿಮ ಬಂಗಾಳದ ಬುದ್ಧಿಜೀವಿಗಳು ಖಂಡಿಸಿದ್ದರಲ್ಲದೇ, ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದು ಭಟ್ಟಾಚಾರ್ಯರ ಸರ್ಕಾರಕ್ಕೆ ಮುಖಭಂಗ ಮಾಡಿದ್ದರು. ಆದ್ದರಿಂದ, ಲಾಲ್‌ಗಢದ ಜನರ ದಂಗೆಯ ಹಿಂದೆ ಮಾವೋವಾದಿಗಳಿದ್ದಾರೆಂದು ಮೊದಲೇ ಹುಯಿಲೆಬ್ಬಿಸಿದರೆ ಆ ಜನರ ಪರವಾಗಿ ಬುದ್ಧಿಜೀವಿಗಳಾಗಲಿ, ಮಾನವ ಹಕ್ಕುಗಳ ಸಂಘಟನೆಗಳಾಗಲಿ ಬರುವುದಿಲ್ಲ. ಆ ತಂತ್ರದಲ್ಲಿ ಸಿಪಿಎಂ ಸರ್ಕಾರ ಯಶಸ್ವಿಯೂ ಆಯಿತು. ಇಲ್ಲಿಯ ತನಕ ಲಾಲ್‌ಗಢದ ಆದಿವಾಸಿಗಳ ಪರವಾಗಿ ಬೆರಳೆಣಿಕೆಯ ಜನ ದನಿ ಎತ್ತಿದ್ದಾರೆಯೇ ಹೊರತು ಬಹಳಷ್ಟು ಜನ ಇವತ್ತಿಗೂ ಮೌನ ವಹಿಸಿದ್ದಾರೆ.


ಲಾಲ್‌ಗಢ ಆದಿವಾಸಿಗಳ ಬೇಡಿಕೆಗಳ ಭಿತ್ತಿಪತ್ರ......

ಆದರೆ ವಸ್ತುಸ್ಥಿತಿ ಅಷ್ಟು ಸರಳವಾಗಿಲ್ಲ. ಬಹುತೇಕ ಪತ್ರಿಕೆಗಳ ವರದಿಗಳಲ್ಲಿ ಮತ್ತು ಸತ್ಯಶೋಧನಾ ಸಮಿತಿಗಳು ಮಂಡಿಸಿರುವ ಲೇಖನಗಳಲ್ಲಿ ಒಂದು ಅಂಶವಂತೂ ಸ್ಪಷ್ಟವಾಗಿದೆ. ಅದೇನೆಂದರೆ, ಹಲವಾರು ವರ್ಷಗಳಿಂದ ಸ್ಥಳೀಯ ಆದಿವಾಸಿಗಳ ಸಮಸ್ಯೆಗಳೊಂದಿಗೆ ಸ್ಪಂದಿಸುತ್ತಾ ಬಂದಿರುವ ಮಾವೋವಾದಿಗಳ ಬಗ್ಗೆ ಅಲ್ಲಿನ ಜನರಲ್ಲಿ ಸಿಂಪಥಿ ಇದೆ. ಅಂದಮಾತ್ರಕ್ಕೆ ಅವರೆಲ್ಲಾ ಮಾವೋವಾದಿಗಳಲ್ಲ, ಅಥವಾ ಮಾವೋವಾದಿಗಳ ಹೋರಾಟಕ್ಕೆ ಬೆಂಬಲ ನೀಡುತ್ತಿರುವವರೂ ಅಲ್ಲ. ಅವರಲ್ಲಿ ಬಹಳಷ್ಟು ಜನಕ್ಕೆ ಮಾವೋವಾದಿ ಸಿದ್ಧಾಂತವೂ ಗೊತ್ತಿಲ್ಲ. ಅವರದ್ದೇನಿದ್ದರೂ ತಮ್ಮ ಮೇಲಿನ ದೌರ್ಜನ್ಯವನ್ನು ನಿಲ್ಲಿಸುವ, ತಮ್ಮ ಭೂಮಿ ಜಿಂದಾಲ್‌ನಂತಹ ಕಂಪನಿಯ ಪಾಲಾಗಿ ತಮ್ಮ ಬದುಕೇ ಅತಂತ್ರವಾಗದಂತೆ ತಡೆಯುವ ಹೋರಾಟ.

ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಮೊನ್ನೆಯ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮತಗಟ್ಟೆಗಳ ರಕ್ಷಣೆಗೆ ಪೊಲೀಸರನ್ನು ಕಳುಹಿಸಲು ಚುನಾವಣಾ ಆಯೋಗ ನಿರ್ಧರಿಸಿತ್ತು. ಆದರೆ ಪೊಲೀಸರ ಪ್ರವೇಶವನ್ನೇ ನಿರ್ಬಂಧಿಸಿದ್ದ ಲಾಲ್‌ಗಢದಲ್ಲಿ ಅದು ಸಾಧ್ಯವಾಗುವ ಲಕ್ಷಣಗಳು ಕಾಣಿಸಲಿಲ್ಲ. ಆಗ ಆದಿವಾಸಿಗಳ ಸಮಿತಿಗಳೊಂದಿಗೆ ಚರ್ಚಿಸಿದ ಚುನಾವಣಾ ಆಯೋಗ ಹಳ್ಳಿಗಳ ಹೊರವಲಯದಲ್ಲಿ ಮತಗಟ್ಟೆಗಳನ್ನು ಸ್ಥಾಪಿಸಲು ಒಪ್ಪಿಕೊಂಡಿತು.

ಎಲ್ಲರಿಗೂ ಗೊತ್ತಿರುವಂತೆ ಪ್ರಸ್ತುತ ಚುನಾವಣಾ ಪ್ರಕ್ರಿಯೆಯಲ್ಲಿ ನಂಬಿಕೆ ಹೊಂದಿಲ್ಲದಿರುವ ಮಾವೋವಾದಿಗಳು ಚುನಾವಣಾ ಪ್ರಕ್ರಿಯೆಯನ್ನೇ


ಲಾಲ್‌ಗಢದಲ್ಲಿ ಒಂದು ಸಾರ್ವಜನಿಕ ಸಭೆ.......

ಬಹಿಷ್ಕರಿಸಬೇಕೆಂದು ಕರೆ ನೀಡುತ್ತಾರೆ. ಹಾಗಿದ್ದಾಗಲೂ ಲಾಲ್‌ಗಢದ ಜನ ಚುನಾವಣಾ ಪ್ರಕ್ರಿಯೆಯನ್ನು ಬಹಿಷ್ಕರಿಸದೇ ಮತಗಟ್ಟೆಗಳು ಮಾತ್ರ ಹಳ್ಳಿಗಳ ಹೊರವಲಯದಲ್ಲಿರಬೇಕೆಂದೂ, ಮತ ಚಲಾಯಿಸಲು ಜನರಿಗೆ ಅವಕಾಶ ನೀಡಬೇಕೆಂದೂ ಹೇಳಿದ್ದಾರೆಂದರೆ ಏನರ್ಥ? ಇಷ್ಟೇ, ಮಾವೋವಾದಿಗಳು ಅಲ್ಲಿನ ಜನರ ಮೇಲೆ ಸಂಪೂರ್ಣ ಹಿಡಿತ ಸಾಧಿಸಿಲ್ಲ ಮತ್ತು ಅಲ್ಲಿನ ಜನರು ಯಾವ ಪಕ್ಷದ ಗುಲಾಮರಾಗದೆ ಪ್ರಜಾಸತ್ತಾತ್ಮವಾಗಿ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದಾರೆಂದೇ ಅಲ್ಲವೇ?

ಅದಿರಲಿ, ರಾಜ್ಯ ಪೊಲೀಸರ ವಿರುದ್ಧ ಸಿಟೆದ್ದು ನಿಂತ ಆದಿವಾಸಿಗಳು 32 ದಿನಗಳ ಕಾಲ ದಿಗ್ಬಂಧನವನ್ನು ಮುಂದುವರೆಸಿದರು. ಆ ಅವಧಿಯಲ್ಲಿ ಶಾಲಾ ಕಟ್ಟಡಗಳನ್ನು ಕ್ಯಾಂಪ್‌ಗಳಾಗಿ ಪರಿವರ್ತಿಸಿದ್ದ ಪೊಲೀಸರು ಜಾಗ ಖಾಲಿಯಾಗುವಂತೆ ಮಾಡಿ ಮತ್ತೆ ತಮ್ಮ ಮಕ್ಕಳಿಗೆ ಶಾಲೆ ಪ್ರಾರಂಭವಾಗುವಂತೆ ನೋಡಿಕೊಂಡರು. ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಿ ಗ್ರಾಮಸ್ಥರಿಗೆ ಕುಡಿಯುವ ನೀರು ಸಿಗುವಂತೆ ಮಾಡಿದರು. ವೈದ್ಯರಿಲ್ಲದೆ ಪಾಳು ಬಿದ್ದಿದ್ದ ಆಸ್ಪತ್ರೆಗೆ ಚಾಲನೆ ನೀಡಿ ವಾರದಲ್ಲಿ ಎರಡು ದಿನ ವೈದ್ಯರು ಬರುವಂತೆ ವ್ಯವಸ್ಥೆ ಮಾಡಿಕೊಂಡರು. ಅಷ್ಟೇ ಅಲ್ಲ, ಭೂರಹಿತರಿಗೆ ಭೂಮಿಯನ್ನು ಹಂಚಲಾರಂಭಿಸಿದರು. ಇದೆಲ್ಲದರಿಂದ ಸ್ಥಳೀಯರ ಆತ್ಮವಿಶ್ವಾಸವೂ ಇಮ್ಮಡಿಯಾಯಿತು. ಆಗ ಅವರ ಪ್ರತಿಭಟನೆಯೂ ಬೆಳೆಯಿತು. ಮೊದಲು ಪೊಲೀಸರ ಅತ್ಯಾಚಾರದ ವಿರುದ್ಧ ಜನಿಸಿದ ಅವರ ಹೋರಾಟ ಈಗ ತಮ್ಮ ಭೂಮಿ ಮತ್ತು ಅಸ್ತಿತ್ವವನ್ನು ಕಾಪಾಡಿಕೊಳ್ಳುವ ಹೋರಾಟವಾಗಿಯೂ ರೂಪ ಪಡೆಯಿತು.

ಇದನ್ನೆಲ್ಲ ಕಂಡು ಪರಿಸ್ಥಿತಿ ಕೈ ಮೀರಿಹೋಗುತ್ತಿದೆ ಎಂದು ರಾಜ್ಯ ಸರ್ಕಾರಕ್ಕೆ ಗೊತ್ತಾಯಿತು. ಅದು ನಿಧಾನವಾಗಿ ತನ್ನ ಕುತಂತ್ರಗಳನ್ನು ಪ್ರಾರಂಭಿಸಿತು. ಕೆಲ ಆದಿವಾಸಿಗಳನ್ನು ಹಿಡಿದು ಅವರ ಮೂಲಕ ಹೊಸ ಸಂಘಟನೆಗಳನ್ನು ಹುಟ್ಟುಹಾಕಿ ಅವರೇ ಆದಿವಾಸಿ ನೇತಾರರು ಎಂಬಂತೆ ಬಿಂಬಿಸಿ ಅವರು ಹೋರಾಟವನ್ನು ಹಿಂದೆ ಪಡೆದಿದ್ದಾರೆ ಎಂದು ಘೋಷಿಸಿತು. ಇದು ಆದಿವಾಸಿಗಳಿಗೆ ಗೊತ್ತಾ... ಆ ನಕಲಿ ನಾಯಕರನ್ನು ಕರೆಸಿ ಬಾಯಿ ಮುಚ್ಚಿಕೊಂಡಿರುವಂತೆ ಆದೇಶಿಸಿದರು.

ಇದು ಹೊಸ ತಂತ್ರವೇನಲ್ಲ. ಯಾವಾಗ ಸರ್ಕಾರದ ನೀತಿಗಳ ವಿರುದ್ಧ ಜನ ದಂಗೆ ಏಳುತ್ತಾರೊ, ಆಗ ಅವರ ನಡುವೆಯೇ ಬಿರುಕು ತಂದು ದಂಗೆಯನ್ನು ದಮನ ಮಾಡುವುದು. ಸರ್ಕಾರಗಳಿಗೆ ಈಗ ಕರಗತವಾಗಿದೆ. ಛತ್ತೀಸಗಡದಲ್ಲಿ ಸಲ್ವಜುದುಂ, ನಂದಿಗ್ರಾಮ ಮತ್ತು ಸಿಂಗೂರಿನಲ್ಲಿ ಸಿಪಿಎಂ ಗೂಂಡಾಗಳು, ಕಳಿಂಗ ನಗರದಲ್ಲಿ ಟಾಟಾ ಪರವಾದ ಗ್ಯಾಂಗುಗಳು, ಜಗತ್‌ಸಿಂಗ್‌ಪುರದಲ್ಲಿ ಪೋಸ್ಕೊ ಕಂಪನಿ ಪರವಾದ ಗುಂಪುಗಳನ್ನು ಹುಟ್ಟು ಹಾಕಲಾಗಿದೆ.

ಇದಾದ ನಂತರ ರಾಜ್ಯ ಸರ್ಕಾರ ನಿಧಾನವಾಗಿ ತನ್ನ ಪೊಲೀಸ್ ಪಡೆಗಳನ್ನು ಮತ್ತು ಸಿಪಿಎಂನ ರೌಡಿ ತಂಡಗಳನ್ನು ಮತ್ತೆ ಲಾಲ್‌ಗಢ ಪ್ರದೇಶಕ್ಕೆ ಕಳುಹಿಸಲಾರಂಭಿಸಿತು. ಆಗ ಎರಡೂ ಕಡೆಯವರ ನಡುವೆ ಸಹಜವಾಗಿ ಘರ್ಷಣೆಗಳು ಸಂಭವಿಸಿ ಹಲವಾರು ಜನ ತಮ್ಮ ಪ್ರಾಣ ಕಳೆದುಕೊಂಡರು. ಒಂದು ವರದಿಯ ಪ್ರಕಾರ ಕಳೆದ ಏಳು ತಿಂಗಳಲ್ಲಿ ಸಿಪಿಎಂ ಪಕ್ಷದ ಏಳು ಬೆಂಬಲಿಗರು ಮತ್ತು ಆದಿವಾಸಿ ಸಮಿತಿಗಳ ನಾಲ್ವರು ಸತ್ತಿದ್ದಾರೆ.


ಇದೆಲ್ಲದರ ನಡುವೆಯೂ ಆದಿವಾಸಿಗಳು ತಮ್ಮ ಹೋರಾಟವನ್ನು ಮುಂದುವರೆಸಿದ್ದಾರೆ. ತಮ್ಮಲ್ಲಿಗೆ ಸರ್ಕಾರ ಬಾರದಿದ್ದರೆ ತಾವೇ ಸರ್ಕಾರ ಇರುವಲ್ಲಿಗೆ ಹೋಗಬೇಕೆಂದು ಒಮ್ಮೆ ಸಾವಿರಾರು ಸಂಖ್ಯೆಯಲ್ಲಿ ಕಲ್ಕತ್ತಾದ ಹೃದಯ ಭಾಗವಾದ ಎಸ್ಪಲಾಂಡೆಗೆ ಮುತ್ತಿಗೆ ಹಾಕಿ ಇಡೀ ನಗರದ ಚಲನವೇ ನಿಲ್ಲುವಂತೆಯೂ ಮಾಡಿದ್ದಾರೆ. ಆದರೂ ಸರ್ಕಾರ ಈ ಜನರ ಹೋರಾಟದೊಂದಿಗೆ ಸ್ಪಂದಿಸಲಿಲ್ಲ. ಬದಲಾಗಿ "ಮಾವೋವಾದಿಗಳು ನಮ್ಮ ಆದಿವಾಸಿ ಸಹೋದರರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ, ವಸಾಹತುಶಾಹಿಗಳು ಇದರ ಹಿಂದಿದ್ದಾರೆ" ಎಂದೆಲ್ಲ ಆರೋಪಿಸುತ್ತಲೇ ಬಂದಿದೆ. ಇದೆಲ್ಲ ಎಂತಹ ಹಾಸ್ಯಾಸ್ಪದ ರೂಪ ಪಡೆದಿದೆ ಎಂದರೆ ಅಮಿಯ ಪಾತ್ರಾ ಎಂಬ ಸ್ಥಳೀಯ ಸಿಪಿಎಂ ನಾಯಕ "ಹಿಂದೆಲ್ಲಾ ಆದಿವಾಸಿಗಳು ಆಹಾರ ಮತ್ತು ಕುಡಿಯುವ ನೀರಿಗಾಗಿ ಪ್ರತಿಭಟಿಸುತ್ತಿದ್ದರು. ಆದರೀಗ ಅಭಿವೃದ್ಧಿ ಬೇಕೆಂದು ಕೇಳುತ್ತಾರೆಂದರೆ ಅವರ ಹಿಂದೆ ಮಾವೋವಾದಿಗಳು ಇರಲೇಬೇಕು" ಎಂದು ಅಚ್ಚರಿ ವ್ಯಕ್ತಪಡಿಸಿದರೆ, ಬೋಸ್ ಎಂಬ ಸಿಪಿಎಂನ ರಾಜ್ಯ ಕಾರ್ಯದರ್ಶಿ "ಛತ್ತೀಸಗಡಕ್ಕಿಂತ ನಮ್ಮ ರಾಜ್ಯದ ಆದಿವಾಸಿಗಳ ಸ್ಥಿತಿ ಚೆನ್ನಾಗಿದೆ. ಜಾರ್ಖಂಡದ ಮುಖ್ಯಮಂತ್ರಿ ಬಾಬುಲಾಲ್ ಮರಾಂಡಿ ಅಲ್ಲಿನ ಆದಿವಾಸಿಗಳನ್ನು ಸಾಯಿಸುತ್ತಿರುವಂತೆ ನಾವು ಸಾಯಿಸುತ್ತಿಲ್ಲ" ಎಂದು ಸ್ಪಷ್ಟೀಕರಣ ನೀಡಿದ್ದಾರೆ!

ಆದರೂ ಲಾಲ್‌ಗಢದ ಆದಿವಾಸಿಗಳ ಹೋರಾಟ ಹೀಗೆಯೇ ಮುಂದುವರೆಯುತ್ತೇನೋ. ಆದರೆ ಮಾವೋವಾದಿಗಳು ಒಂದು ಎಡವಟ್ಟು ಮಾಡಿದರು. ಈ ಹೋರಾಟದಲ್ಲಿ ಮಾವೋವಾದಿಗಳ ಪಾತ್ರ ಪ್ರಮುಖವಾಗಿರದಿದ್ದರೂ ತಾವೇ ನಾಯಕತ್ವವನ್ನು ವಹಿಸಿದ್ದೇವೆಂದೂ, ಆದಿವಾಸಿಗಳು ರೂಪಿಸಿಕೊಂಡಿರುವ ಜನರ ಸಮಿತಿಗಳು ತಮ್ಮ ಸಮೂಹ ಸಂಘಟನೆ ಎಂದೂ, ತಾವು ಲಾಲ್‌ಗಢವನ್ನು ವಿಮೋಚಿತ ಪ್ರದೇಶವಾಗಿಸಿದ್ದೇವೆಂದೂ ಘೋಷಿಸಿದರು. ಅದಿಷ್ಟು ಸಾಕಿತ್ತು ಕೇಂದ್ರ ಮತ್ತು ಪಶ್ಚಿಮ ಬಂಗಾಳದ ಸರ್ಕಾರಗಳಿಗೆ ಮಾವೋವಾದಿಗಳ ಹುಟ್ಟಡಗಿಸುವ ನೆಪದಲ್ಲಿ ಪೊಲೀಸರು ಲಾಲ್‌ಗಢದ ಆದಿವಾಸಿಗಳ ಮೇಲೆ ಮುಗಿಬಿದ್ದರು. ಈಗ ಮತ್ತೆ ಎಲ್ಲ ಕಡೆ ಪೊಲೀಸ್ ಕ್ಯಾಂಪ್‌ಗಳು ಸ್ಥಾಪನೆಗೊಂಡು ಜನರನ್ನು ಜೀವಭಯದಲ್ಲಿ ಇಡಲಾಗುತ್ತಿದೆ ಮತ್ತು ಅವರ ಹೋರಾಟವನ್ನು ದಮನ ಮಾಡಲಾಗುತ್ತಿದೆ.

ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನೆಮ್ಮದಿಯ ಬದುಕಿಗಾಗಿ, ತಮ್ಮ ನೆಲ, ಜಲ ಮತ್ತು ಅರಣ್ಯದ ಸಂಪತ್ತನ್ನು ಕಾಪಾಡುವುದಕ್ಕಾಗಿ ಆದಿವಾಸಿಗಳೇ ರೂಪಿಸಿದ್ದ ಹೋರಾಟವನ್ನು ಸಿಪಿಎಂ, ಕೇಂದ್ರದ ಯುಪಿಎ ಮತ್ತು ಸ್ವತಃ ಮಾವೋವಾದಿಗಳೇ ಜೊತೆಗೂಡಿ ನಾಶ ಮಾಡುತ್ತಿದ್ದಾರೆ.

ವಾಸ್ತವ ಏನೆಂದರೆ, ಎಲ್ಲಿಯ ತನಕ ಈ ದೇಶದ ಬಹುಸಂಖ್ಯಾತರಾದ ಬಡವರ ಪರವಾಗಿ ಸರ್ಕಾರಗಳು ನಿಲ್ಲುವುದಿಲ್ಲವೋ, ಅಲ್ಲಿಯ ತನಕ ಮಲ್ಟಿ ನ್ಯಾಷನಲ್ ಕಂಪನಿಗಳ ಗುಲಾಮನಂತೆ ವರ್ತಿಸುತ್ತವೆಯೋ ಅಲ್ಲಿತನಕ ಜನ ದಂಗೆ ಏಳುವುದನ್ನು ಯಾವ ಕಾನೂನಿನಿಂದಲೂ, ನಿಷೇಧದಿಂದಲೂ ತಡೆಯಲಾಗುವುದಿಲ್ಲ. ಇದು ಸರ್ಕಾರಗಳಿಗೆ ಅರ್ಥವಾಗದಿದ್ದರೆ ನಾಳೆ ಇಡೀ ದೇಶದಲ್ಲಿ ಹಲವಾರು ಲಾಲ್‌ಗಢಗಳು ಸಂಭವಿಸಿದರೂ ಅಚ್ಚರಿ ಇಲ್ಲ.

● ಗೌರಿ ಲಂಕೇಶ್



ಕುವೆಂಪು ವಿವಿ ಕರ್ಮಕಾಂಡ

ಅವ್ಯವಹಾರಗಳಿಗೆ ಇಲ್ಲಿ ಎಣೆಯೇ ಇಲ್ಲ!

ವಿಶ್ವವಿಖ್ಯಾತ ವಿ.ವಿ.ಗಳಲ್ಲಿ ಒಂದಾಗುವ ಕನಸಿನೊಂದಿಗೆ ...ಭವಾದ, 'ವಿಶ್ವ ಮಾನವ ಸಂದೇಶ' ಸಾರಿದ ರಾಷ್ಟ್ರಕವಿ ...ಪು ಹೆಸರಿನ ವಿಶ್ವವಿದ್ಯಾನಿಲಯ ಇಂದು ಭ್ರಷ್ಟಾಚಾರ, ...ಚಾರ, ದುರಾಡಳಿತ, ನಿಯಮಗಳ ಉಲ್ಲಂಘನೆ ...ತರ ಕಾರಣಗಳಿಂದ ಸುದ್ದಿಯಲ್ಲಿದೆ.


...ಶೈಕ್ಷಣಿಕ ಗುಣಮಟ್ಟದಲ್ಲಿನ ಕುಸಿತ, ಕುವೆಂಪು ಆದರ್ಶ ...ವಲ್ಲಿ ವಿಫಲತೆಯಿಂದಾಗಿ ರಾಜ್ಯದ ವಿವಿಗಳಲ್ಲಿಯೇ ...ಯ ಸ್ಥಾನ ಪಡೆದಿದ್ದ ಈ ವಿವಿ ಮತ್ತೆ ಚಿಗುರಿಕೊಳ್ಳುವ ...ಗಳೇ ಕಾಣುತ್ತಿಲ್ಲ. ವಿ.ವಿ.ಗೆ ಕುಲಪತಿಗಳಾಗಿ ಬಂದ ... ಒಂದಲ್ಲಾ ಒಂದು ರೀತಿಯ ಭ್ರಷ್ಟಾಚಾರಕ್ಕೆ ಅವ ...ಮಾಡಿಕೊಡುತ್ತಾ, ವಿವಿಯನ್ನು ಸುದ್ದಿಯಲ್ಲಿಟ್ಟಿದ್ದಾರೆ. ... ಕುಲಪತಿ ಪ್ರೊ. ಶೇರಿಗಾರ್ ಅವರಂತೂ ದಿನಾ ...ಸುದ್ದಿಯಲ್ಲಿರಬೇಕೆಂದು ಹಠತೊಟ್ಟ..., ಭ್ರಷ್ಟಾಚಾರ, ನಿಯಮ ಉಲ್ಲಂಘನೆ, ...ಡಳಿತಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ. ...ಷ್ಟಕೂಟದ ಲಾಬಿಗೆ ಮಣಿಯು... ಕುಲಪತಿಗಳು ಕಾನೂನು ಉಲ್ಲಂಘ...ಹೇಸುತ್ತಿಲ್ಲ. ಕುವೆಂಪು ವಿವಿಯವರೇ ... ಶೇರಿಗಾರರು ಕುಲಪತಿಗಳಾದಾಗ, ... ಸಮಸ್ಯೆ ಅವರಿಗೆ ಚೆನ್ನಾಗಿ ಗೊತ್ತಿರು...ಂದ ವಿವಿಯನ್ನು ಸರಿದಾರಿಯಲ್ಲಿ ...ಡೆಸಲು ಪ್ರಯತ್ನಿಸಬಹುದು ಎಂದು ...ಸಲಾಗುತ್ತಿತ್ತು. ಆದರೆ ಎಲ್ಲರ ...ಗಳನ್ನು ಹುಸಿಗೊಳಿಸಿರುವ ಶೇರಿಗಾರರು, ಕುವೆಂಪು ... ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ...ಳುವವರು, ಕೇಳುವವರು ಯಾರೂ ಇಲ್ಲವೆಂಬಂತಾಗಿದೆ.

...ಸಗಿ ಕಾಲೇಜನ್ನು ವಿವಿಗೆ ಸೇರಿಸಿಕೊಂಡರು!

...ಲಪತಿ ಶೇರಿಗಾರರಿಗೆ ತಮ್ಮ ವಿವಿಯ ಪಕ್ಕದಲೇ ...ಶ್ರೀಮದ್ ರಂಭಾಪುರಿ ಪ್ರಥಮ ದರ್ಜೆ ಕಾಲೇಜಿನ ... ಅದೇನು ವ್ಯಾಮೋಹವ್ರೋ ಗೊತ್ತಿಲ್ಲ. ಕಾನೂನು ...ವಾಗಿ ಈ ಕಾಲೇಜನ್ನು ವಿವಿಗೆ ಸೇರಿಸಿಕೊಂಡಿದ್ದಾರೆ. ...ಕುರಿತು 2008ರ ಏಪ್ರಿಲ್ 26ರಂದು ನಡೆದ ...ಕೇಟ್ ಸಭೆಯಲ್ಲಿ ನಿರ್ಣಯತೆಗೆದುಕೊಳ್ಳುವಂತೆ ... ಅವರು, ಈ ಕಾಲೇಜನ್ನು ಕೆಲ ಷರತ್ತುಗಳೊಂದಿಗೆ ...ಹಿಂಸಿಕೊಳ್ಳುವಂತೆ ಮಾಡಿದ್ದಾರೆ. ಕಾನೂನು ಹೇಳುತ್ತಿದ್ದ ... ಕುಲಸಚಿವ ಉದಯಕುಮಾರ್ ಅವರಿಗೂ ...ಸದಂತೆ ಕುಲಪತಿಗಳು ಈ ವ್ಯವಹಾರ ನಡೆಸಿದ್ದು ...ನುಮಾನಗಳೇಳಲು ಕಾರಣವಾಗಿದೆ.

...ಶದ ಯಾವುದೇ ವಿವಿಯೂ ಇದುವರೆಗೆ ಹೀಗೆ ... ಕಾಲೇಜನ್ನು ನೇರವಾಗಿ ತನ್ನ ಆಡಳಿತಕ್ಕೆ ...ಂಡ ಉದಾಹರಣೆ ಇಲ್ಲ. ಇದಕ್ಕೆ ಕಾನೂನಿನಲ್ಲಿ ...ಶವೂ ಇಲ್ಲ. ಕೆಎಸ್‌ಯು ಕಾಯ್ದೆ 2000 ಇದಕ್ಕೆ ... ನೀಡುವುದಿಲ್ಲ ಎಂದು ಎಲ್ಲ ವಿವಿಗಳ ಅಧಿಕಾರಿ ...ಹೇಳುತ್ತಿದ್ದಾರೆ. ಆದರೆ ಕುವೆಂಪು ವಿವಿ ಮಾತ್ರ ...ಯು 2000 4(VIII) ರಡಿಯಲ್ಲಿ ಅವಕಾಶವಿದೆ ...ವಾದಿಸುತ್ತಿದೆ. ಆದರೆ ವಿವಿಯ ಕುಲಾಧಿಪತಿಗಳಾದ ...ಪಾಲರೇ ಕಾನೂನು ಪರಿಶೀಲಿಸಿ, ಇದಕ್ಕೆ ಅವಕಾಶವಿಲ್ಲ ... ಹೇಳಿದ್ದಾರೆ!

... ರೀತಿ ಖಾಸಗಿ ಕಾಲೇಜನ್ನು ವಿವಿ ತನ್ನ ಆಡಳಿತಕ್ಕೆ ...ಕೊಳ್ಳಬೇಕೆಂದಿದ್ದರೆ, ಇದರಿಂದ ವಿವಿಗೆ ಅನುಕೂಲ ...ಗಿರಬೇಕು. ಖಾಸಗಿ ಅಲ್ಲ, ಹೊಸ ಸರ್ಕಾರಿ ...ಯನ್ನು ವಿವಿ ಸೇರಿಸಿಕೊಳ್ಳಬೇಕೆಂದರೂ ಸಚಿವ ...ದಲ್ಲಿ ನಿರ್ಧಾರವಾಗಿರಬೇಕು ಇಲ್ಲವೇ ಸರ್ಕಾರ ...ಚನೆ ಹೊರಡಿಸಿ ಅವಕಾಶ ಮಾಡಿಕೊಟ್ಟಿರಬೇಕು.



ಕೌಶಿಕ್ ಮುಖರ್ಜಿ

ಇದುವರೆಗೆ ರಾಜ್ಯದ ವಿವಿಗಳು ಒಟ್ಟು 14 ಸರ್ಕಾರಿ ಕಾಲೇಜನ್ನು ತಮ್ಮ ಆಡಳಿತಕ್ಕೆ ಹೊಸದಾಗಿ ಸೇರಿಸಿಕೊಂಡಿವೆ. ಆಗೆಲ್ಲಾ ಸಚಿವ ಸಂಪುಟವೇ ಈ ತೀರ್ಮಾನ ತೆಗೆದುಕೊಂಡಿದೆ.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಗೋಡೆಕೆರೆಯ ಶ್ರೀಮದ್ ರಂಭಾಪುರಿ ವಿದ್ಯಾಸಂಸ್ಥೆಗೆ ಸೇರಿದ ಈ ಕಾಲೇಜನ್ನು ವಹಿಸಿಕೊಳ್ಳುವ ಪ್ರಸ್ತಾವನೆಯನ್ನು ಮೊದಲು ರಾಜ್ಯಪಾಲರಿಗೆ ಕಳುಹಿಸಬೇಕಾಗಿತ್ತು. ರಾಜ್ಯಪಾಲರು ಒಪ್ಪಿಗೆ ನೀಡಿದ ಮೇಲೆ ಉನ್ನತಶಿಕ್ಷಣ ಇಲಾಖೆ ಈ ಬಗ್ಗೆ ವಿವಿಗೆ ಅನುಮತಿ ನೀಡಬೇಕು. ಈ ಪ್ರಕರಣದಲ್ಲಿ ವಿವಿ ರಾಜ್ಯಪಾಲರಿಗೆ ಪ್ರಸ್ತಾವನೆಯನ್ನೇನೋ ಸಲ್ಲಿಸಿದೆ. ಆದರೆ ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದಿರುವುದರಿಂದ ರಾಜ್ಯಪಾಲರು ಈ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದಾರೆ. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಶಾರದಾ ಸುಬ್ರಹ್ಮಣ್ಯಂ 2008ರ ಏಪ್ರಿಲ್ 21ರಂದು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಕೌಶಿಕ್ ಮುಖರ್ಜಿಯವರಿಗೆ ಪತ್ರ ಬರೆದು ಇಡೀ ಪ್ರಸ್ತಾವನೆಯನ್ನೇ ವಾಪಾಸು ಕಳುಹಿಸಿದ್ದರು.


ಆದರೆ ಇದಕ್ಕೂ ಮುನ್ನ, ಅಂದರೆ 12-2-08ರಂದು, ಈ ಕಾಲೇಜನ್ನು ಕುವೆಂಪು ವಿವಿ ನೇರ ಆಡಳಿತಕ್ಕೆ ಒಳಪಡಿಸುವ ಸರ್ಕಾರಿ ಆದೇಶ (ಸರ್ಕಾರಿ ಆದೇಶ ಸಂಖ್ಯೆ: ಇಡಿ 115 ಯುಎಸ್‌ವಿ 2006 ಬೆಂಗಳೂರು) ಉನ್ನತ ಶಿಕ್ಷಣ ಇಲಾಖೆ ಅಧೀನ ಕಾರ್ಯದರ್ಶಿಗಳಿಂದ ಹೊರಬಿದ್ದಿತ್ತು. ರಾಜ್ಯಪಾಲರು ಒಪ್ಪಿಗೆ ನೀಡದೇ ಇದ್ದಾಗ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಎಚ್ಚೆತ್ತು ಆದೇಶ ಹಿಂಪಡೆಯಬೇಕಾಗಿತ್ತು. ಆದರೆ ಬೇಕೆಂದೇ ನಿರ್ಲಕ್ಷ್ಯ ತೋರಿಸಿದ್ದಾರೆ.

ಈ ವಿಷಯದಲ್ಲಿ ಕುಲಪತಿ ಶೇರಿಗಾರರು ಮತ್ತು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕೌಶಿಕ್ ಮುಖರ್ಜಿ ನಡುವೆ ಡೀಲ್ ನಡೆದಿದೆ ಎಂದು ಹೇಳಲಾಗುತ್ತಿದೆ. ಇನ್ನೇನು ಮುಚ್ಚುವ ಹಂತದಲಿದ್ದ ಶ್ರೀಮದ್ ರಂಭಾಪುರಿ ಕಾಲೇಜಿನಿಂದ ವಿವಿಗೆ ಯಾವುದೇ ರೀತಿಯ ಲಾಭವಿರಲಿಲ್ಲ. ಆದರೂ ಈ ಕಾಲೇಜಿನ ಸಿಬ್ಬಂದಿಗಳಿಂದ ಲಕ್ಷಗಟ್ಟಲೇ ಹಣ ಪಡೆದ ಶೇರಿಗಾರರ ಆಪ್ತರು ಈ ಅವ್ಯವಹಾರ ನಡೆಸಿದ್ದಾರೆಂದು ವಿವಿಯ ಗೋಡೆ, ಕಿಟಕಿಗಳು ಮಾತನಾಡಿಕೊಳ್ಳುತ್ತಿವೆ.

ಕೌಶಿಕ್ ಎಂದರೆ ಶೇರಿಗಾರರಿಗೆ ಬಹಳ ಪ್ರೀತಿ

ಹೌದು, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಕೌಶಿಕ್ ಮುಖರ್ಜಿ ಎಂದರೆ ಕುವೆಂಪು ವಿವಿಗೆ ಮತ್ತು ಕುಲಪತಿ ಶೇರಿಗಾರರಿಗೆ ಎಲ್ಲಿಲ್ಲದ ಪ್ರೀತಿ. ಹೀಗಾಗಿಯೇ ಅವರು ವಿವಿಗೆ ಭೇಟಿ ನೀಡಿದರೆ, ವಿವಿಯ ಗೆಸ್ಟ್ ಹೌಸ್ ಇದ್ದರೂ ಜಂಗಲ್ ರೆಸಾರ್ಟ್‌ನಲ್ಲಿ ಉಳಿಸಿಕೊಳ್ಳುತ್ತಾರೆ. ಫೈವ್ ಸ್ಟಾರ್ ಹೊಟೇಲ್ ಇಲ್ಲದಿದ್ದರೂ, ಅಲ್ಲಿ ಸಿಗುವ ಆತಿಥ್ಯ ನೀಡುತ್ತಾರೆ. 5,600ರೂ ಬೆಲೆಯ ದುಬಾರಿ ನೆನಪಿನ ಕಾಣಿಕೆ ನೀಡುತ್ತಾರೆ, ಅವರು ಫೋನ್ ಮಾಡಿದ ಬಿಲ್ ಎಷ್ಟೇ ಆಗಿದ್ದರೂ ಹಿಂದೆ-ಮುಂದೆ ನೋಡದೆ ವಿವಿ ಹಣದಿಂದ ತುಂಬುತ್ತಾರೆ!

ಇದರಲ್ಲಿ ಅತಿಶಯೋಕ್ತಿ ಏನೂ ಇಲ್ಲ. ವಿವಿಯ ದಾಖಲೆಗಳೇ ಇದನ್ನು ಹೇಳುತ್ತಿದೆ. 2007ರ ನವೆಂಬರ್‌ನಲ್ಲಿ ಮುಖರ್ಜಿ ವಿವಿಗೆ ಎರಡು ದಿನಗಳ ಭೇಟಿ ನೀಡಿದ್ದರು. ಆಗ ವಿವಿ ಅವರಿಗಾಗಿ ಖರ್ಚು ಮಾಡಿದ್ದು ಎಷ್ಟು ಗೊತ್ತೇ ಬರೋಬ್ಬರಿ 22,985 ರೂ! ಇದರಲ್ಲಿ ಆಹಾರಕ್ಕೆ ಮಾಡಲಾದ ಖರ್ಚು 12,925 ರೂ. (ಗಮನಿಸಿ, ಭದ್ರಾವತಿಯಲ್ಲಿ ಒಂದು ಊಟದ ಗರಿಷ್ಠ ಬೆಲೆ 50 ರೂ. ಮೀರುವುದಿಲ್ಲ. ಎರಡು ದಿನದಲ್ಲಿ 13 ಸಾವಿರ ಖರ್ಚು ಮಾಡಬೇಕೆಂದರೆ ಮುಖರ್ಜಿ ಸಾಹೇಬರು ಅದೇನು ತಿಂದರೋ ಎಂಬುದು ಶೇರಿಗಾರರಿಗೇ ಗೊತ್ತು!)



ಶೇರಿಗಾರ್

ಇನ್ನು ಗೆಸ್ಟ್ ಹೌಸ್ ಇದ್ದರೂ ಉಳಿದುಕೊಳ್ಳಲು 2,600 ರೂ. ಖರ್ಚು ಮಾಡಲಾಗಿದೆ. ಇತ್ಯಾದಿ ಖರ್ಚು ಎಂದು ಹೇಳಿ 1,860 ರೂ. ಬಿಲ್ ಜಡಿಯಲಾಗಿದೆ. ಈ ರೀತಿ ದುಂದುವೆಚ್ಚ ಮಾಡಿದ ಬಗ್ಗೆ ಸುಳಿವರಿತ ಭದ್ರಾವತಿಯ ಚಂದ್ರಕಾಂತ ಎಂಬುವರು ಮಾಹಿತಿ ಹಕ್ಕು ಕಾಯ್ದೆಯನ್ವಯ ಲೆಕ್ಕಕೊಡಿ ಎಂದರೆ, ವಿವಿ ಅಧಿಕಾರಿಗಳು ಮುಚ್ಚಿಹಾಕಲು ಯತ್ನಿಸಿದ್ದರು. ಕೊನೆಗೂ ಚಂದ್ರಕಾಂತ ಆರ್‌ಟಿಐ ಆಯುಕ್ತರಿಗೆ ದೂರು ನೀಡಿ, ಈ ಮಾಹಿತಿ ಪಡೆದುಕೊಳ್ಳಬೇಕಾಯಿತು. ಈಗ ಈ ಖರ್ಚಿಗೆಲ್ಲಾ ಕಾಗಕ್ಕ-ಗುಬ್ಬಕ್ಕನ ಕತೆ ಕಟ್ಟಿ ವಿವರಣೆ ನೀಡುವ ವಿವಿ ಮೊದಲೇ ಮಾಹಿತಿ ನೀಡಿ ಪ್ರಾಮಾಣಿಕತೆ ತೋರಿಸಬಹುದಿತ್ತಲ್ಲವೇ?

ಈಗ ಕರ್ನಾಟಕ ಹಣಕಾಸು ನಿಗಮಕ್ಕೆ ವಕ್ಕರಿಸಿರುವ ಈ ಮುಖರ್ಜಿ ಹಿಂದೊಮ್ಮೆ ಬೆಲ್ಜಿಯಂನ ಗೇಂಟ್ ವಿಶ್ವವಿದ್ಯಾನಿಲಯದಲ್ಲಿ ನಡೆದ 'ಕರ್ನಾಟಕ ಅಕಾಡೆಮಿ ಆಫ್ ಸೋಸಿಯಲ್ ಸೈನ್ಸ್ ಅಂಡ್ ಹುಮ್ಯಾನಿಟೀಸ್'(ಈ ಕಾರ್ಯಕ್ರಮದ ರೂವಾರಿ ಖ್ಯಾತ ಚಿಂತಕ(!) ಪ್ರೊ. ಬಾಲು.)ನ ಸರಣಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕುವೆಂಪು ವಿವಿಯ ಕೆಲ ಬುದ್ಧಿಜೀವಿಗಳ ಒತ್ತಾಸೆಯಿಂದಾಗಿಯೇ ತಾವು ಈ ಸಭೆಗಳಲ್ಲಿ ಭಾಗವಹಿಸಿದ್ದರಿಂದ ತಾವು ಮಾಡಿದ ಫೋನ್ ಬಿಲ್ಲನ್ನೂ ವಿವಿಯೇ ಪಾವತಿಸಬೇಕೆಂದು ಮುಖರ್ಜಿ ಪಟ್ಟು ಹಿಡಿದಿದ್ದರು. ಮುಖರ್ಜಿ ವಿದೇಶದಲ್ಲಿದ್ದಾಗ ಮಾಡಿದ ಫೋನ್ ಕರೆಗಳ ಬಿಲ್ 23,356 ರೂ. ಇದರಲ್ಲಿ 16,549ರೂ.ಗಳನ್ನು ವಿವಿಯಿಂದಲೇ ಪಾವತಿಸಲಾಗಿದೆ. ಸರ್ಕಾರದ ವತಿಯಿಂದ ಗರಿಷ್ಠ 3 ಸಾವಿರ ರೂ. ಬಿಲ್ ಪಾವತಿಸಲಷ್ಟೇ ಅವಕಾಶವಿದೆ. ಆದರೂ ಕಾನೂನು ಉಲ್ಲಂಘಿಸಿದ ವಿವಿ ಬೇಕಾಬಿಟ್ಟಿಯಾಗಿ ಹಣ ನೀಡಿದೆ. ಮುಖರ್ಜಿ ಕೇಳಿದ್ದಕ್ಕೆಲ್ಲಾ ವಿವಿ ಎಸ್ ಎಸ್ ಎಂದು ತಲೆಯಾಡಿಸಿದ್ದು ಏಕೆ? ಕುಲಪತಿಗಳೇ ಹೇಳಬೇಕು.

ವಿದ್ಯಾರ್ಥಿ ವೇತನವೂ ಗುಳುಂ

ಸರ್ಕಾರ ಮಂಜೂರು ಮಾಡಿದ್ದ ಕೋಟ್ಯಂತರ ರೂ. ವಿದ್ಯಾರ್ಥಿವೇತನವನ್ನು ಬೇಕಾಬಿಟ್ಟಿಯಾಗಿ ವಿತರಣೆ ಮಾಡಿರುವ ವಿವಿ, ಸಿಬ್ಬಂದಿಗಳಿಗೆ ಈ ಹಣವನ್ನು ಲೂಟಿ ಮಾಡಲು ಅವಕಾಶ ಮಾಡಿಕೊಟ್ಟಿದೆ. ಹೀಗಾಗಿ 2005-06ರಿಂದ 2007-08ರವರೆಗೆ ಸರ್ಕಾರ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಮೂಲಕ ಬಿಡುಗಡೆ ಮಾಡಿದ್ದ 4.05. ಕೋಟಿ ರೂ. ವಿದ್ಯಾರ್ಥಿ ವೇತನ ಎಲ್ಲಿ ಹೋಯಿತು ಎಂಬುದಕ್ಕೆ ದಾಖಲೆಗಳೇ ಇಲ್ಲ.

ವಿದ್ಯಾರ್ಥಿ ವೇತನ ನೀಡುವಲ್ಲಿ ವಿಶ್ವವಿದ್ಯಾಲಯ ಯಾವುದೇ ರೀತಿಯ ನಿಯಮ ಪಾಲಿಸಿಲ್ಲ. ವಿದ್ಯಾರ್ಥಿಗಳು ಕೋರ್ಸ್ ಮುಗಿಸಿ ಹೋದ ಮೇಲೆ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಿ, ಸಿಬ್ಬಂದಿಗಳೇ ವಿದ್ಯಾರ್ಥಿಗಳ ಸಹಿ ಮಾಡಿ ಹಣ ಲಪಟಾಯಿಸಿದ್ದಾರೆ. ಗಲಾಟೆ ಮಾಡಿದವರಿಗೆ, ಲಂಚ ನೀಡಿದವರಿಗೆ ಮಾತ್ರ ವಿದ್ಯಾರ್ಥಿ ವೇತನ ಸಿಕ್ಕಿದೆ. ಉಳಿದವರ ಹಣವೆಲ್ಲಾ ಸಿಬ್ಬಂದಿಗಳ ಮನೆ ಸೇರಿದೆ. ಹೀಗಾಗಿ ಯಾವುದಕ್ಕೂ ಇಲ್ಲಿ ದಾಖಲೆಗಳಿಲ್ಲ. ದಾಖಲಾತಿಗಳನ್ನು ಇಲಾಖೆಗೆ ಒದಗಿಸದಿದ್ದರಿಂದ ಜಿಲ್ಲಾ ಅಧಿಕಾರಿಗಳು ಕುಲಸಚಿವರಿಗೆ ಕಾರಣ ಕೇಳಿ ನೋಟಿಸ್ ನೀಡಿದ್ದೂ ಆಗಿದೆ. ಶುಲ್ಕ ವಿನಾಯಿತಿ ಬಾಬ್ತು ಹಣಕ್ಕೆ ವಿನಿಯೋಗ ಪ್ರಮಾಣ ಪತ್ರ ಹಾಗೂ ವಿದ್ಯಾರ್ಥಿಗಳಿಗೆ ವಿತರಿಸಿದ ಬಗ್ಗೆ ರಶೀದಿ ಮಾಹಿತಿ ನೀಡದಿದ್ದರೆ ಇನ್ನು ಮುಂದೆ ವಿಶ್ವವಿದ್ಯಾನಿಲಯಕ್ಕೆ ಶುಲ್ಕ ವಿನಾಯಿತಿಯನ್ನು ತಡೆಹಿಡಿಯಲಾಗುವುದು ಎಂಬ ಎಚ್ಚರಿಕೆ ಸಹ ನೀಡಲಾಗಿದೆ.

ಇನ್ನು ವಿವಿಯ ಹಣಕಾಸು ವ್ಯವಹಾರದಲ್ಲಿ ವಿವಿಗೆ ಶಿಸ್ತೇ ಇಲ್ಲ ಎಂದು ಸರ್ಕಾರಿ ಲೆಕ್ಕ ಪರಿಶೋಧಕರೇ ಹೇಳಿದ್ದಾರೆ. ಕುಲಪತಿಗಳಿಂದ ಹಿಡಿದು ಎಲ್ಲ ಸಿಬ್ಬಂದಿಗಳೂ ಬೇಕೆಂದಾಗಲೆಲ್ಲ ಬೇಕಾಬಿಟ್ಟಿಯಾಗಿ ಮುಂಗಡ ಹಣ ಪಡೆದಿದ್ದಾರೆ. ವಸೂಲಾಗಬೇಕಾಗಿದ್ದ ಹಣವನ್ನು ಮರೆತೇ ಬಿಟ್ಟಿದೆ. ಈ ವಿ.ವಿ. ಪ್ರತಿ ದಿನ ಸರಾಸರಿ 20 ಲಕ್ಷ ರೂ. ವೆಚ್ಚದ ಹಣಕಾಸು ವ್ಯವಹಾರ ಹೊಂದಿರುವ ಈ ಬೃಹತ್ ಶಿಕ್ಷಣ ಸಂಸ್ಥೆ ಆರ್ಥಿಕ ಶಿಸ್ತು ಹೊಂದಿಲ್ಲದೇ ಇರುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಇಲ್ಲವಾದಲ್ಲಿ ದೂರಗಾಮಿ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಲೆಕ್ಕಪರಿಶೋಧಕರು ವಿವಿಗೆ ಪಾಠ ಮಾಡಿದ್ದಾರೆ. ಆದರೆ ಪರಿಣಾಮ ಮಾತ್ರ ಶೂನ್ಯ.

ಕುಲಪತಿಗಳೇ ಹೊಣೆ

"ಇಲ್ಲಿ ನಡೆಯುತ್ತಿರುವ ಅಕ್ರಮಗಳಿಗೆಲ್ಲಾ ಕುಲಪತಿಗಳೇ ನೇರ ಹೊಣೆ. ಏಕೆಂದರೆ ತಮ್ಮ ಮಾತನ್ನು ಯಾರೂ ಕೇಳುತ್ತಲೇ ಇರಲಿಲ್ಲ" ಎಂದು ಹಿಂದೆ ಕುಲಸಚಿವರಾಗಿದ್ದ ಉದಯಕುಮಾರ್ ರಾಜ್ಯಪಾಲರಿಗೆ ಪತ್ರ ಬರೆದಿದ್ದರು. "ಕುಲಪತಿಗಳೇ ನೇರವಾಗಿ ಆದೇಶ ನೀಡುತ್ತಿದ್ದಾರೆ. ನಿಯಮಗಳನ್ನು ಪರಿಶೀಲಿಸಲೂ ಅವಕಾಶ ನೀಡುತ್ತಿಲ್ಲ. ಕುಲಪತಿಗಳು ನೇರವಾಗಿ ಕಡತಗಳನ್ನು ತರಿಸಿಕೊಂಡು ಆದೇಶ ನೀಡುತ್ತಿದ್ದಾರೆ. ಇದಲ್ಲದೆ, ಕುಲಪತಿಗಳ ಆಪ್ತ ಸಹಾಯಕ, ನನ್ನ ಕೈಕೆಳಗಿನ ನೌಕರ, ನನಗೇ ಟಿಪ್ಪಣಿ ಕಳಿಸಿ, ನಿರ್ದೇಶನ ನೀಡುತ್ತಿದ್ದಾನೆ" ಎಂದೂ ಅವರು ಅವಲತ್ತುಕೊಂಡಿದ್ದರು. ಈಗ ಉದಯಕುಮಾರ್ ವರ್ಗಾವಣೆಗೊಂಡಿದ್ದಾರೆ. ಹೊಸದಾಗಿ ಯಾರನ್ನೂ ಕುಲಸಚಿವರನ್ನಾಗಿ ನೇಮಿಸಿಲ್ಲ. ಹೀಗಾಗಿ ವಿವಿಯಲ್ಲಿ ಕುಲಪತಿಗಳ ಆಪ್ತ ಸಹಾಯಕರು ಆಡಿದ್ದೇ ಆಟವಾಗಿದೆ.

● ವರದಿಗಾರ

ನಕಲಿ ಎಂ.ಫಿಲ್ ಬೇಕೇ, ಕುವೆಂಪು ವಿವಿಗೆ ಬನ್ನಿ!

ಇದುವರೆಗೆ ಹೊರ ರಾಜ್ಯದ ಕೆಲ ವಿವಿಗಳು ನಕಲಿ ಎಂ.ಫಿಲ್. ಸರ್ಟಿಫಿಕೇಟ್ ನೀಡುತ್ತಿರುವುದು ಸುದ್ದಿಯಾಗುತ್ತಿತ್ತು. ಇದೀಗ ಈ ವಿವಿಗಳ ಪಟ್ಟಿಗೆ ನಮ್ಮ ಕುವೆಂಪು ವಿವಿಯೂ ಸೇರ್ಪಡೆಗೊಂಡಿದೆ.


ಎಂ.ಫಿಲ್. ರೆಗ್ಯುಲರ್ ಕೋರ್ಸ್‌ನ ಅವಧಿ ಒಂದು ವರ್ಷ ಹಾಗೂ ದೂರ ಶಿಕ್ಷಣದ ಮೂಲಕ ಪಡೆಯುವ ಎಂ.ಫಿಲ್‌ಗೆ ಎರಡು ವರ್ಷ ಅವಧಿ ಎಂದು ನಿಗದಿಪಡಿಸಿ, ಯುಜಿಸಿ ನಿಯಮಾವಳಿ ರೂಪಿಸಿದೆ. ಕುವೆಂಪು ವಿವಿಯಲ್ಲಿ ರೆಗ್ಯುಲರ್ ಎಂ.ಫಿಲ್ ಕೋರ್ಸ್ ಇದೆ.

2007ರ ಏಪ್ರಿಲ್‌ನಲ್ಲಿ ರೆಗ್ಯುಲರ್ ಎಂ.ಫಿಲ್ ಕೋರ್ಸ್‌ಗೆ ದಾಖಲಾದ ಎಲ್ಲ ವಿದ್ಯಾರ್ಥಿಗಳಿಗೆ 2008ರ ಫೆಬ್ರವರಿ 23ರಂದು ಪದವಿ ಪ್ರಧಾನ ಮಾಡಲಾಗಿದೆ. ಅಂದರೆ ಒಂದು ವರ್ಷದ ಬದಲಿಗೆ ಕೇವಲ 9ರಿಂದ 10 ತಿಂಗಳಲ್ಲಿ ಎಂ.ಫಿಲ್ ಪದವಿ ನೀಡಲಾಗಿದೆ. ಸಾಮಾನ್ಯವಾಗಿ ಯಾವುದೇ ಪದವಿಯ ಅಂಕಪಟ್ಟಿ ಮೊದಲು ಬರಬೇಕು. ಆನಂತರ ಪದವಿ ಪ್ರಮಾಣ ಪತ್ರ ಪ್ರದಾನವಾಗಬೇಕು ಎಂಬುದು ನಿಯಮಾವಳಿ. ಆದರೆ ಇಲ್ಲಿ ವಿವಿಧ ವಿಷಯಗಳ ಸುಮಾರು 60 ಅಭ್ಯರ್ಥಿಗಳಿಗೆ ಕುವೆಂಪು ವಿವಿ ಮೊದಲೇ ಪ್ರಮಾಣ ಪತ್ರ ನೀಡಿದೆ. ನಂತರ ಅಂಕಪಟ್ಟಿಯನ್ನು ನೀಡಿದೆ. ಫೆಬ್ರವರಿ 23ರಂದು ನಡೆದ ಘಟಿಕೋತ್ಸವದಲ್ಲಿ ಪ್ರಮಾಣ ಪತ್ರ ನೀಡಲಾಗಿದ್ದರೆ, ಅಂಕ ಪಟ್ಟಿ ನೀಡಿದ್ದು ಮೇ. 28ಕ್ಕೆ. ನೀಡಲಾಗಿರುವ ಅಂಕಕ್ಕೂ ಇಂತಿಷ್ಟು ಎಂದು ಬೆಲೆ ಕಟ್ಟಲಾಗಿತ್ತಂತೆ. ಈ ರೀತಿಯಲ್ಲಿ ನಿಮಗೂ ಎಂ.ಫಿಲ್ ಬೇಕಾದರೆ ಕುವೆಂಪು ವಿವಿಗೆ ಭೇಟಿ ನೀಡಬಹುದು! ■

ಲಿಂಗಾಯತ ಸಾದರ ಮೀಸಲು ವಿವಾದ

"ಸಮಗ್ರ ಪರಿಶೀಲನೆ ಆಗದೆ ಸವಲತ್ತು ನೀಡಲಾಗದು"

-ಡಾ. ಸಿ.ಎಸ್. ದ್ವಾರಕಾನಾಥ್



ಲಿಂಗಾಯತ ಜನಾಂಗದ ಉಪಜಾತಿಗಳಲ್ಲಿ ಒಂದಾಗಿರುವ ಸಾದರಿಗೆ ಕೆಲದಿನಗಳ ಹಿಂದೆ ದಿಢೀರನೆ 2A ಕ್ಯಾಟಗರಿಯಲ್ಲಿ ಮೀಸಲು ನಿಗಧಿ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು.

ಮೂಲತಃ ಇದೊಂದು ನಿಯಮಬಾಹಿರ ಆದೇಶವಾಗಿತ್ತು, ರಾಜ್ಯದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಗಮನಕ್ಕೇ ತಾರದೆ, ಆಯೋಗದ ಶಿಫಾರಸ್ಸು ಇಲ್ಲದೆ ಹೊರಡಿಸಿದ್ದ ಈ ಆದೇಶ ನಂತರ ವಿವಾದಕ್ಕೆ ಕಾರಣವಾಗಿ ಕೊನೆಗೆ ಅಷ್ಟೇ ತರಾತುರಿಯಲ್ಲಿ ರದ್ದಾಗಿದೆ. ಈ ನಡುವೆ ಲಿಂಗಾಯತ ಸಾದರು ಒಂದು ಸಂಘಟನೆ ಮಾಡಿಕೊಂಡು ಮುಂದಿನ ಜೂನ್ 28 ರೊಳಗೆ ತಮಗೆ ಮತ್ತೆ ಕ್ಯಾಟಗರಿ 2Aನಲ್ಲಿ ಮೀಸಲಾತಿ ಒದಗಿಸುವ ಆದೇಶ ನೀಡದಿದ್ದಲ್ಲಿ ರಾಜ್ಯವ್ಯಾಪಿ ಪ್ರತಿಭಟನೆ ನಡೆಸುವುದಾಗಿ ಹೇಳಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಸಾದರ ಮೀಸಲು ವಿಚಾರಕ್ಕೆ ಸಂಬಂಧಿಸಿದಂತೆ ವಾಸ್ತವ ಸಂಗತಿಗಳೇನೆಂಬ ಬಗ್ಗೆ ಹಿಂದುಳಿದ ಆಯೋಗದ ಅಧ್ಯಕ್ಷರಾದ ಡಾ. ಸಿ.ಎಸ್. ದ್ವಾರಕಾನಾಥ್‌ರೊಂದಿಗೆ 'ಲಂಕೇಶ್' ನಡೆಸಿದ ಸಂದರ್ಶನ ಇಲ್ಲಿದೆ.

ಲಂಕೇಶ್:

ಸರ್ ಲಿಂಗಾಯತ ಸಾದರಿಗೆ ಮೀಸಲು ಸೌಲಭ್ಯ ನೀಡುವ ಬಗ್ಗೆ ವಿವಾದ ಏಕಾಯಿತು?

ದ್ವಾರಕಾನಾಥ್:

ಆಯೋಗದ ಗಮನಕ್ಕೆ ತಾರದೆ ಸಮಾಜ ಕಲ್ಯಾಣ ಇಲಾಖೆಯ ಅಧೀನ ಕಾರ್ಯದರ್ಶಿಯೊಬ್ಬರು ಇಂಥ ಆದೇಶ ಹೊರಡಿಸಿ ಗೊಂದಲಕ್ಕೆ ಕಾರಣರಾದರು.

ಸಾದರಿಗೆ ಮೀಸಲು ಸೌಲಭ್ಯ ಪಡೆಯುವ ಅರ್ಹತೆ ಇಲ್ಲವಾ?

* ಇದನ್ನು ಹಾಗೆ ಸರಳೀಕರಿಸಿ ನೋಡಬಾರದು. ಯಾವುದೇ ಸಮುದಾಯ ಅಥವಾ ಜಾತಿಗಳನ್ನು ಕ್ಯಾಟಗರಿ 1, 2 ಹಾಗೂ 3 ಯೊಳಗೆ ಸೇರಿಸುವಾಗ ಕೆಲವೊಂದು ನಿಯಮಾವಳಿರುತ್ತವೆ. ಆ ನಿಯಾಮಗಳ ಪ್ರಕಾರ ಇವೆಲ್ಲಾ ನಡೆಯಬೇಕಾಗುತ್ತದೆ.

ಸಾದರ ಜಾತಿಯವರು ಸದ್ಯಕ್ಕೆ ಜನರಲ್ ಮೆರಿಟ್‌ನಲ್ಲಿ ದ್ದಾರೆಯೇ ವಿನಃ 21 ಲಿಂಗಾಯತ ಉಪಜಾತಿಗಳಿರುವ 3B ಯೊಳಗೂ ಈ ಸಮುದಾಯ ಇಲ್ಲ, ಅಂದರೆ ಸಾದರು 2A ಇರಲಿ 3B ಯೊಳಗೂ ಇಲ್ಲ.

ಇದನ್ನು ಸ್ವಲ್ಪ ವಿವರಿಸಿ ಹೇಳುತ್ತೀರಾ?

* ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರಧಾನವಾಗಿ 3 ಕ್ಯಾಟಗರಿಗಳಿವೆ.

ಅದರಲ್ಲಿ ಕ್ಯಾಟಗರಿ 1 ರಲ್ಲಿ ಅಲೆಮಾರಿ ಜನಾಂಗವೂ ಸೇರಿದಂತೆ ಪರಿಶಿಷ್ಟ ಜಾತಿಗಳ ಸ್ಥಿತಿಗತಿಗೆ ಹತ್ತಿರವಿರುವ ಒಟ್ಟು 95 ಜಾತಿಗಳಿವೆ. ಇವರಿಗೆ ಶೇ. 5 ರಷ್ಟು ಮೀಸಲಾತಿ ನಿಗಧಿಯಾಗಿದೆ.

ಅದೇ ರೀತಿ ಕ್ಯಾಟಗರಿ 2A ನಲ್ಲಿ ಒಟ್ಟು 102 ಜಾತಿಗಳಿವೆ. ಇದರಲ್ಲಿ ಸಂಖ್ಯೆಯಲ್ಲಿ ಹೆಚ್ಚಿರುವ ಕುರುಬರು, ಈಡಿಗರು, ದೇವಾಂಗ, ವಿಶ್ವಕರ್ಮ ಮುಂತಾದ ಜಾತಿಯವರಿದ್ದಾರೆ. ಅದೇ ರೀತಿ ದುರ್ಬಲರಾದ ಕ್ಷೌರಿಕರು, ಅಗಸರು ಮುಂತಾದ ಜಾತಿಗಳೂ ಸೇರಿವೆ. ಇವರು ಒಟ್ಟು ಶೇ 15% ಮೀಸಲಾತಿ ಪಾಲನ್ನು ಹೊಂದಿದ್ದಾರೆ.

ಇನ್ನು 2Bಯಲ್ಲಿ ಕೇವಲ ಮುಸ್ಲಿಮರಿದ್ದು, ಅವರಿಗೆ 4% ಮೀಸಲು ಸೌಲಭ್ಯವಿದೆ.

ಈ 2Aನಲ್ಲಿ ಸಾದ ಜಾತಿಯವರು ಮೊದಲಿಂದಲೂ ಇದ್ದಾರಲ್ಲವೆ?

* ನೋಡಿ ಅದು ಹಾಗಲ್ಲ, 2A ಕ್ಯಾಟಗರಿಯಲ್ಲಿ



ಸಾದರು ಎಂಬ ಜಾತಿ ಇದೆಯಾದರೂ ಅವರು ಲಿಂಗಾಯತರಲ್ಲ, ಸಾದರಲ್ಲಿ ಹಿಂದೂ ಸಾದರು ಮತ್ತು ಲಿಂಗಾಯತ ಸಾದರೆಂಬ ಎರಡು ವಿಭಿನ್ನ ಜಾತಿಗಳಿವೆ. ಹಿಂದೂ ಸಾದರು ಕೋಲಾರ, ಬೆಂಗಳೂರು, ತುಮಕೂರು, ಮೈಸೂರು ಗ್ರಾಮಾಂತರ ಪ್ರದೇಶಗಳಲ್ಲಿದ್ದು ಪ್ರಧಾನವಾಗಿ ಕೃಷಿ ಅವಲಂಬಿತರಾಗಿದ್ದು ವೈಷ್ಣವ ಮತದ ಪ್ರಭಾವ ಹೊಂದಿದ್ದಾರೆ.

ಮೊದಲಿನಿಂದಲೂ ಎಲ್ಲಾ ಆಯೋಗಗಳು ಇವರನ್ನು 2A ಕ್ಯಾಟಗರಿಯಲ್ಲಿ ಸೇರಿಸಿವೆ.


ಇನ್ನು ಲಿಂಗಾಯತ ಸಾದರು ದಾವರಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು ಮುಂತಾದೆಡೆ ಹೆಚ್ಚಾಗಿ ನೆಲೆಸಿದ್ದು ಶೈವ ಮತಾನುಯಾಯಿಗಳಾಗಿದ್ದಾರೆ. ಹಿಂದೂ ಸಾದರಿಗೂ ಲಿಂಗಾಯತ ಸಾದರಿಗೂ ಸಾಮಾಜಿಕ-ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಲ್ಲಿ ಬಹಳ ವ್ಯತ್ಯಾಸಗಳಿವೆ.

ಲಿಂಗಾಯತ ಸಾದರು ಹಾಲಿ ಯಾವ ಕ್ಯಾಟಗರಿಗೆ ಸೇರುತ್ತಾರೆ?

* ಜನರಲ್ ಮೆರಿಟ್‌ಗೆ.

ತಮ್ಮನ್ನು 2A ಕ್ಯಾಟಗರಿಗೆ ಸೇರಿಸಿ ಎಂಬ ಅವರ ಬೇಡಿಕೆ ನ್ಯಾಯ ಸಮ್ಮತವೆ?

ಗಣಿ ಸಮೀಕ್ಷೆ ತಡೆಯಲು ರೆಡ್ಡಿಗಳ ಹರಸಾಹಸ



"ಬಳ್ಳಾರಿಯ ಗಣಿಕಾರಿಕೆ ಪ್ರದೇಶದಲ್ಲಿ ಗಡಿ ಸಮೀಕ್ಷೆಗೆ ನಮ್ಮ ವಿರೋಧ ಇಲ್ಲ, ನಾಳೆಯೇ ಕೇಂದ್ರ ಸರ್ಕಾರ ಗಡಿ ಸಮೀಕ್ಷೆ ಕೈಗೊಳ್ಳಲಿ" ಎಂದು ಹೇಳಿಕೆ ನೀಡುತ್ತಲೇ ರೆಡ್ಡಿ ಸಹೋದರರು ಜಂಟಿ ಸಮೀಕ್ಷೆ ಸರಿಯಾಗಿ ನಡೆಯದಂತೆ ನೋಡಿಕೊಳ್ಳಲು ಯತ್ನಿಸುತ್ತಿದ್ದಾರೆ. ಸಮೀಕ್ಷೆಯಲ್ಲಿ ಭಾಗವಹಿಸಲಿರುವ ರಾಜ್ಯದ ಅಧಿಕಾರಿಗಳನ್ನೆಲ್ಲಾ ಬುಕ್ ಮಾಡಿಕೊಂಡು, ಹೇಗೆ ಸಮೀಕ್ಷೆಯ ದಿಕ್ಕು ತಪ್ಪಿಸಬೇಕೆಂಬ ಪಾಠ ಆರಂಭಿಸಿದ್ದಾರೆ.

ಮೊದಲಿಗೆ ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯೊಂದಿಗಿನ ತಮ್ಮ ವ್ಯಾವಹಾರಿಕ ಸಂಬಂಧ ಬಳಸಿಕೊಂಡು ಜಂಟಿ ಸಮೀಕ್ಷೆ ನಡೆಯದಂತೆ ನೋಡಿಕೊಳ್ಳಲು ರೆಡ್ಡಿ ಸಹೋದರರು ಮುಂದಾಗಿದ್ದರು. ಆದರೆ ಇವರು ರಾಜ್ಯದಲ್ಲಿ ಆಡಿದ ರಾಜಕೀಯ ಆಟಗಳಿಂದ ಬೇಸತ್ತಿದ್ದ ಕಾಂಗ್ರೆಸ್ ಹೈಕಮಾಂಡ್ ಆಂಧ್ರದ ಮುಖ್ಯಮಂತ್ರಿಯ ಮಾತಿಗೆ ಒಂದಿಷ್ಟೂ ಬೆಲೆ ನೀಡದೇ ರೆಡ್ಡಿಗಳ ವಿರುದ್ಧ ಅರಣ್ಯ ಮತ್ತು ಪರಿಸರ ಇಲಾಖೆಯ ಹಾಗೂ ಭಾರತೀಯ ಸರ್ವೆ ಇಲಾಖೆಯ ಅಧಿಕಾರಿಗಳನ್ನು ಛೂ ಬಿಟ್ಟಿತ್ತು.

ಇದರಿಂದ ಭಯಬಿದ್ದ ರೆಡ್ಡಿ ಸಹೋದರರು ಮುಖ್ಯಮಂತ್ರಿ ಯಡ್ಡಿಗೆ ಶರಣಾಗಿದ್ದು, ಈಗ ಅವರ ಆಶ್ರಯದಲ್ಲಿಯೇ ರಕ್ಷಣೆ ಪಡೆಯಲು ಹೊರಟಿದ್ದಾರೆ. ಹೀಗಾಗಿ "ಯಡ್ಡಿಯೇ ನಮ್ಮ ನಾಯಕ, ಇವರ ನೇತೃತ್ವದಲ್ಲಿ ಮುಂದೆ 40 ವರ್ಷ ಆಡಳಿತ ನೀಡಿದರೂ ನಮ್ಮ ಬೆಂಬಲ ಇದೆ" ಎಂದೆಲ್ಲಾ ಜನ ಮರುಕಪಡುವಂತೆ ಮಾತನಾಡಲಾರಂಭಿಸಿದ್ದಾರೆ.

ರೆಡ್ಡಿಗಳ ಕೊರಳಿಗೆ ಉರುಳಾಗಲಿರುವ ಜಂಟಿ ಸಮೀಕ್ಷೆ ಸರಿಯಾಗಿ ನಡೆಯಬೇಕೆಂದರೆ ಗಣಿಗಾರಿಕೆಗೆ ಅನುಮತಿ ನೀಡಿದ ನಕ್ಷೆಯು ಗ್ರಾಮ ನಕ್ಷೆಯೊಂದಿಗೆ ಹೊಂದಾಣಿಕೆಯಾಗಬೇಕು. ಗಡಿ ಗ್ರಾಮಗಳ ನಕ್ಷೆಯು ಜಿಲ್ಲಾ ನಕ್ಷೆಯೊಂದಿಗೆ, ನಂತರ ಅದು ಅಂತರ್‌ರಾಜ್ಯ ನಕ್ಷೆಯೊಂದಿಗೆ ಸರಿಯಾಗಿ ಹೊಂದಾಣಿಕೆಯಾಗಬೇಕು. ನಕ್ಷೆ ಹೊಂದಾಣಿಕೆಯಾದ ನಂತರವಷ್ಟೇ ಗಡಿ ಗುರುತುಗಳನ್ನು ಪತ್ತೆ ಹಚ್ಚಿ ಚೈನು ಅಳೆದು ಸಮೀಕ್ಷೆ ನಡೆಸಲು ಸಾಧ್ಯ. ಹಳೆಯ ನಕ್ಷೆಗಳನ್ನು ಇಟ್ಟುಕೊಂಡು ಈ ಸಮೀಕ್ಷೆ ನಡೆಸಲು ಸಾಧ್ಯವಿದ್ದರೂ, ಕೆಲವೆಡೆ ಅರಣ್ಯ ಪ್ರದೇಶದಲ್ಲಿ ಬದಲಾವಣೆಗಳಾಗಿರುವುದರಿಂದ, ಗಣಿಗಾರಿಕೆ ನಡೆಯುತ್ತಿರುವುದರಿಂದ ಸಮೀಕ್ಷೆಯ ದಿಕ್ಕು ತಪ್ಪುವ ಸಾಧ್ಯತೆಗಳಿವೆ. ಹೀಗಾಗಿ ಗಣಿ ಪ್ರದೇಶದ ನಕ್ಷೆಯೂ ಈ ಸಮೀಕ್ಷೆಗೆ ಅಗತ್ಯವಾಗಿದೆ.

ಭಾರತೀಯ ಸರ್ವೆ ಇಲಾಖೆಯ ಅಧಿಕಾರಿಗಳು ಈಗ ಸರಿಯಾದ ನಕ್ಷೆಗಳನ್ನು ಒದಗಿಸುವಂತೆ ರಾಜ್ಯದ ಅಧಿಕಾರಿಗಳ ಬೆನ್ನು ಬಿದ್ದಿದ್ದಾರೆ. ರೆಡ್ಡಿ ಸಹೋದರರ ಒತ್ತಡದಿಂದಾಗಿ ಮೀನ-ಮೇಷ ಎಣಿಸುತ್ತಿದ್ದ ರಾಜ್ಯದ ಅಧಿಕಾರಿಗಳೀಗ, ರೆಡ್ಡಿ ಸಹೋದರರನ್ನು ರಕ್ಷಿಸಲು ನಕ್ಷೆಗಳನ್ನೆಲ್ಲಾ ಹೇಗೆ ಬದಲಾಯಿಸಬೇಕೆಂದು ತಲೆಕೆಡಿಸಿಕೊಂಡು ಕುಳಿತಿದ್ದಾರೆ.

ರೆಡ್ಡಿ ಸಹೋದರರು ತಮಗೆ ಶರಣಾಗಿರುವುದರಿಂದ ಸ್ವತಃ ಮುಖ್ಯಮಂತ್ರಿ ಯಡ್ಡಿಯೇ ಸಮೀಕ್ಷೆಯ ದಿಕ್ಕು ತಪ್ಪಿಸಲು ಏನೇನು ಮಾಡಬೇಕೆಂದು ರಾಜ್ಯದ ಅಧಿಕಾರಿಗಳಿಗೆ ಸೂಚನೆ ನೀಡಲಾರಂಭಿಸಿದ್ದಾರೆ. ಉನ್ನತ ಮೂಲಗಳ ಪ್ರಕಾರ ಈಗಾಗಲೇ ಗಣಿಗೆ ಅನುಮತಿ ನೀಡಿದ ಪ್ರದೇಶದ ನಕ್ಷೆ ಮತ್ತು ಗ್ರಾಮ ನಕ್ಷೆಗಳು ಒಂದಕ್ಕೊಂದು ಹೊಂದಾಣಿಕೆಯಾಗುತ್ತಿಲ್ಲ, ಗಣಿಗಾರಿಕೆಗೆ ಅನುಮತಿ ಪಡೆಯುವಾಗಲೇ ದುಡ್ಡು ಕೊಟ್ಟು ನಕ್ಷೆ ಬದಲಾಯಿಸಿಕೊಂಡಿರುವ ಗಣಿಧಣಿಗಳು, ಈಗ ಅಧಿಕಾರಿಗಳ ಮಂಡೆಬಿಸಿ ಹೆಚ್ಚಿಸಿದ್ದಾರೆ.

ಆದರೆ ಏನಾದರೂ ಮಾಡಿ, ನಕ್ಷೆಗಳನ್ನು ಒಂದಿಷ್ಟು ಸರಿಪಡಿಸಿ ಭಾರತೀಯ ಸರ್ವೇ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ನೀಡಲೇಬೇಕಾಗಿದೆ. ಏಕೆಂದರೆ ರಾಜ್ಯ ಹೈಕೋರ್ಟ್ ಆದೇಶದ ಪ್ರಕಾರ ಭಾರತೀಯ ಸರ್ವೇ ಇಲಾಖೆಯ ನೇತೃತ್ವದಲ್ಲಿಯೇ ಈ ಸಮೀಕ್ಷೆ ನಡೆಯಬೇಕಾಗಿದೆ.

ರೆಡ್ಡಿ ಸಹೋದರರಿಗೆ ತಮ್ಮ ಕೋಟ್ಯಂತರ ರೂ. ಮೌಲ್ಯದ ಗಣಿಯನ್ನು ಉಳಿಸಿಕೊಳ್ಳಲು ಮತ್ತು ತಾವು ಇದುವರೆಗೆ ನಡೆಸಿದ ಅಕ್ರಮಗಳನ್ನು ಮುಚ್ಚಿಹಾಕಲು ಈಗಿರುವ ಅವಕಾಶ ಇಲ್ಲಿ ಮಾತ್ರ. ಹೀಗಾಗಿಯೇ ರಾಜ್ಯ ಸರ್ಕಾರಕ್ಕೆ ಅವರು ಶರಣಾಗಿರುವುದು.

ದಿಕ್ಕು ತಪ್ಪಿಸ ಹೊರಟಿದ್ದರು!

ಕರ್ನಾಟಕ-ಆಂಧ್ರ ಗಡಿಯಲ್ಲಿ ಜಂಟಿ ಸಮೀಕ್ಷೆ ನಡೆಯುವುದನ್ನು ತಪ್ಪಿಸಲು ಏನೆಲ್ಲಾ ರಾಜಕೀಯ ತಂತ್ರ ಅನುಸರಿಸಿದ ರೆಡ್ಡಿ ಸಹೋದರರು ಅದರಿಂದ ಏನೂ ಮಾಡಲಾಗದಿದ್ದಾಗ ಭಾರತೀಯ ಸರ್ವೇ ಇಲಾಖೆಯ ಅಧಿಕಾರಿಗಳನ್ನು ದಿಕ್ಕು ತಪ್ಪಿಸಲು ಯತ್ನಿಸಿದರು.

ಈ ಸರ್ವೇ ಮಾಡಿದರೆ ನ್ಯಾಯಾಂಗ ನಿಂದನೆ ಮಾಡಿದಂತಾಗುತ್ತದೆ, ಸರ್ವೇ ನಡೆಸಿದ್ದೇ ಆದಲ್ಲಿ ಮೊಕದ್ದಮೆ ಹೂಡುವುದಾಗಿ ಭಾರತೀಯ ಸರ್ವೇ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆದು ಎಚ್ಚರಿಕೆಯನ್ನೂ ನೀಡಿದರು. ಓಬಳಾಪುರಂ ಮೈನಿಂಗ್ ಕಂಪನಿಯ ಅಧಿಕೃತ ಲೆಟರ್ ಹೆಡ್ ಬಳಸಿಯೇ ಈ ಪತ್ರ ಬರೆಯಲಾಗಿತ್ತು.

ಆದರೆ ಕೇಂದ್ರದಿಂದ ಸ್ಪಷ್ಟ ಸೂಚನೆ ಪಡೆದಿದ್ದ ಸರ್ವೇ ಇಲಾಖೆಯ ಅಧಿಕಾರಿಗಳು ಈ ಪತ್ರಕ್ಕೆ ಸೊಪ್ಪು ಹಾಕಿರಲಿಲ್ಲ. ಸುಪ್ರೀಂ ಕೋರ್ಟ್, ಆಂಧ್ರಪ್ರದೇಶ ಮತ್ತು ಕರ್ನಾಟಕ ಹೈಕೋರ್ಟ್ ಹಾಗೂ ಕೇಂದ್ರ ಪರಿಸರ ಮತ್ತು ಅರಣ್ಯ

▶▶▶

ಗ್ಗೆ ಸಮಗ್ರ ಅಧ್ಯಯನ ನಡೆಯಬೇಕಾಗುತ್ತದೆ. ಒಬ್ಬ ಅಧಿಕಾರಿ ಅಥವಾ ರಾಜಕಾರಣಿಯ ಯಿಂದ ಆಗುವಂತಾದ್ದಲ್ಲ. ಒಂದು ಸಮು ವನ್ನು ಮೀಸಲು ಸೌಲಭ್ಯದ ಚೌಕಟ್ಟಿಗೆ ಗ ನಮ್ಮ ಸಂವಿಧಾನದ ರೀತಿ ನೀತಿ ಹಾಗೂ ಂಕೋರ್ಟಿನ ನಿರ್ದೇಶನದ ನಿಯಮಗಳನ್ನು ಆಯೋಗದ ಶಿಫಾರಸ್ಸಿನ ಮೇರೆಗೆ ಸರ್ಕಾರ ವಹಿಸಬೇಕಾಗುತ್ತದೆ.

ಜೆಗೆ ಲಿಂಗಾಯತ ಉಪಜಾತಿಗಳವರು ಸಲು ಸೌಲಭ್ಯಕ್ಕಾಗಿ ಹೆಚ್ಚು ಯುಸುತ್ತಿರುವಂತೆ ಕಾಣುತ್ತಿದೆ ಯಲ್ಲ?

ಂಗ್ಗೆ ನಾನು ಕಾಮೆಂಟ್ ಮಾಡುವುದಿಲ್ಲ. ಇಲ್ಲಿ ಒಂದು ವಿಚಾರ. ಪಡಿಸಬಹುದಾಗಿದೆ. ಲಿಂಗಾಯತ ದಾಯದೊಳಗೆ ಅಂದಾಜು 40 ಜಾತಿಗಳಿದ್ದು ಅವುಗಳ ಪೈಕಿ ಬಣಜಿಗ, ಇತ್ಯಾದಿ ಸುಮಾರು 21 ಉಪಜಾತಿಗಳನ್ನು ರಷ್ಟು ಮೀಸಲಾತಿ ಇರುವ 3Bಗೆ ರಾಗಿದೆ. ಉಳಿದಂತೆ ಪಂಚಮಸಾಲಿ, ಸಾದರು, ಲಿಂಗಾಯತರು ಯಾವ ಲಿಸ್ಟ್‌ನಲ್ಲೂ ಲ್ಲ. ಆದರೆ ಇತ್ತೀಚೆಗೆ ಪಂಚಮಸಾಲಿಗಳನ್ನು ವು 3B ಕ್ಯಾಟಗರಿಗೆ ಸೇರಿಸಿದೆ. ಆನಂತರ ಬಣಜಿಗರು, ಲಾಳಗೊಂಡರು ಮುಂತಾದ ಜಾತಿಗಳನ್ನು 3Bಗೆ ಸೇರಿಸಿದ್ದಾರೆ.

ಗೊಂದಲಗಳಿಗೆ ಶಾಶ್ವತ ಪರಿಹಾರ ಏನು?

ಸಾದರಿಗೆ ಸೇರಬೇಕಾದ 3A ಮೀಸಲು ವನ್ನು ಹಾಲಿ ಜನರಲ್ ಮೆರಿಟ್‌ನಲ್ಲಿರುವ ಯುತ ಸಾದರು ಪಡೆಯಲು ಯತ್ನಿಸುವುದು ಬಾಹಿರ. ಇನ್ನು ಇದಕ್ಕೆ ಶಾಶ್ವತ ಪರಿಹಾರ ರೆ ಕರ್ನಾಟಕದ ಪ್ರತಿ ಜಾತಿ, ಜನಾಂಗಗಳ ಖ್ಯಾಧಾರಿತ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸೆನ್ಸಸ್ ನಡೆಸುವುದೇ ಆಗಿದೆ.

ಟಕ ಹಿಂದುಳಿದ ವರ್ಗಗಳ ಶಾಶ್ವತ ಗವು ಇಡೀ ದೇಶದಲ್ಲೇ ಮೊದಲ ಬಾರಿಗೆ ಸಮೀಕ್ಷೆ ನಡೆಸಲು ತಯಾರಾಗುತ್ತಿದೆ. ನಮಗೆ ಈ ಬಗೆಗೆ ಸಮಗ್ರ ಮಾಹಿತಿ ಗಿಬಿಟ್ಟರೆ ಎಲ್ಲರಿಗೂ ಸಾಮಾಜಿಕ ನ್ಯಾಯ ಸಮಾನ ಅವಕಾಶ ನೀಡಬೇಕೆಂಬ ನದ ಆಶಯ ಈಡೇರಿಸುವತ್ತ ಒಂದು ದ ಮುನ್ನಡೆಯಾಗುತ್ತದೆ. ■

ಆದೇಶದಂತೆಯೇ ಈ ಸಮೀಕ್ಷೆ ತ್ತದೆ. ಹೀಗಾಗಿ ನೀವು ಬೆದರಿಸಿದ ಮಾತ್ರಕ್ಕೆ ತಗೊಳಿಸುವುದಿಲ್ಲ ಎಂದು ತಿರುಗೇಟು ರ್ವೆ ಇಲಾಖೆ ಅಧಿಕಾರಿಗಳು ಸರ್ವೇ ಪದ್ಧತಿಯನ್ನು ಮುಂದುವರೆಸಿದ್ದಾರೆ.

ಗೆ ಮುನ್ನವೇ ನಿರೀಕ್ಷಣಾ ಜಾಮೀನು!

ಸರ್ಕಾರ ನಾಳೆಯಿಂದಲೇ ಬೇಕಾದರೆ ಡಸಲಿ. ನಮ್ಮ ವಿರೋಧವಿಲ್ಲ" ಎಂದು. ರೆಡ್ಡಿ ಸಹೋದರರು ಇದರ ಜೊತೆಗೆ ಮಾತನ್ನು ಸೇರಿಸುತ್ತಿದ್ದಾರೆ. "ಸಮೀಕ್ಷೆಗೆ ತಂತ್ರಜ್ಞಾನ ಇದ್ದು ಅದನ್ನು ಬಳಸಿ ಕೇಂದ್ರ ಕ್ಷೆ ಮಾಡಲಿ. ಅದಕ್ಕೆ ನಮ್ಮ ಸಂಪೂರ್ಣ ಮುತ್ತದೆ" ಎನ್ನುತ್ತಿದ್ದಾರೆ.

ನಡೆಸಲು ಜಿಪಿಎಸ್‌ನಂತಹ ಅತ್ಯಾಧುನಿಕ ರುವುದು ನಿಜ. ಆದರೆ ಅದನ್ನು ಬಳಸಿ ಮಾಡಲು ಇನ್ನೂ ನಮ್ಮ ವ್ಯವಸ್ಥೆ ಇದು ಗೊತ್ತಿದ್ದರೂ ಸಚಿವ ಜನಾರ್ಧನರೆಡ್ಡಿ ಳಿಕೆ ನೀಡುತ್ತಿದ್ದಾರೆ.

ಳೆ ಈಗ ನಡೆಯಲಿರುವ ಸಮೀಕ್ಷೆಯು ವರದಿ ನೀಡಿದಲ್ಲಿ ಆಗ ಸಮೀಕ್ಷೆಯೇ ದಿರಲಿಲ್ಲ ಎಂದು ಆರೋಪಿಸಲು ರೆಡ್ಡಿ ಸಿದ್ಧತೆ ನಡೆಸಿದ್ದು ಹೀಗಾಗಿಯೇ ಈಗ ಆಧುನಿಕ ತಂತ್ರಜ್ಞಾನ ಬಳಕೆಯ ಡುತ್ತಿದ್ದಾರೆ. ಇದೊಂದು ರೀತಿಯಲ್ಲಿ ೋರಬೇಳುವ ಮುನ್ನವೇ ನಿರೀಕ್ಷಣಾ ಗೆದುಕೊಳ್ಳುವ ಪ್ರಯತ್ನ!


ಈ ಜಾತಿ ಸಮೀಕ್ಷೆ ರೆಡ್ಡಿ ಸಹೋದರರ ಷ್ಟು ಕೆದಿಸಿದೆ ಎಂಬುದು ಇದರಿಂದ

● ವರದಿಗಾರ

'ಓ ಈಳಂ'ನಲ್ಲೇನಿದೆ...?

(ಶ್ರೀಲಂಕಾದ ಸೇನೆ LTTE ಯ ಮೇಲೆ ನಡೆಸಿದ ನಾಲ್ಕನೇ ಯುದ್ಧದಲ್ಲಿ ಅದರ ಮಿಲಿಟರಿ ಶಕ್ತಿಯನ್ನು ಸಂಪೂರ್ಣವಾಗಿ ದಮನಿಸಿ ಅದರ ನಾಯಕ ಪ್ರಭಾಕರನ್‌ರನ್ನು ಕೊಂದು ಹಾಕಿದೆ. ಆದರೆ ದೂರದ ಇರಾಕ್ ಹಾಗೂ ಅಫ್ಘಾನಿಸ್ತಾನದಲ್ಲಿ ನಡೆಯುವ ಮಾನವ ಹಕ್ಕು ದೌರ್ಜನ್ಯಗಳ ಬಗ್ಗೆ ಕಣ್ಣೀರಿಡುವ ಈ ನಾಡಿನ ಪ್ರಜಾತಂತ್ರವಾದಿಗಳು ನಮ್ಮ ಕಾಲದಲ್ಲೇ ನಮ್ಮ ಹತ್ತಿರದಲ್ಲೇ ನಡೆಯುತ್ತಿರುವ ಶ್ರೀಲಂಕಾ ತಮಿಳರ ಆಶೋತ್ತರಗಳ ಕಗ್ಗೊಲೆ ಬಗ್ಗೆ ಅರ್ಥಮಾಡಿಕೊಳ್ಳಲು ಯತ್ನಿಸಿದ್ದು ಬಹಳ ಕಡಿಮೆ. ಲಂಕೇಶ್ ಪ್ರಕಾಶನ ಪ್ರಭಾಕರನ್ ಪರವೂ ಅಲ್ಲ, LTTE ಯ ಪರವೂ ಅಲ್ಲ. ಪ್ರತ್ಯೇಕ ಈಳಂ ಸಾಧಿಸುವ ಯುದ್ಧದಲ್ಲಿ LTTE ಕೂಡ ಸರ್ವಾಧಿಕಾರಿ ಮಿಲಿಟರಿ ಸಂಘಟನೆಯಾಗಿ ಪರಿವರ್ತನೆಯಾಗಿ ಶ್ರೀಲಂಕಾ ಸರ್ಕಾರದ ಮಿರರ್ ಇಮೇಜ್ ಆಗಿಬಿಟ್ಟಿತೆಂಬುದು ಎಲ್ಲರೂ ಬಲ್ಲರು. LTTE ಯ ತಪ್ಪುಗಳೇನೇ ಇದ್ದರೂ ಅಲ್ಲಿನ ತಮಿಳರ ನ್ಯಾಯಯುತ ಹೋರಾಟವನ್ನು ಬಗ್ಗುಬಡೆಯಲು ಶ್ರೀಲಂಕಾ ಸರ್ಕಾರ ಭಾರತದ ಮತ್ತು ವಿಶ್ವದ ಎಲ್ಲಾ ಸಾಮ್ರಾಜ್ಯಶಾಹಿ ಶಕ್ತಿಗಳ ಬೆಂಬಲದೊಂದಿಗೆ ನಡೆಸಿದ ಕ್ರೂರ ದಮನವನ್ನೇನೂ ಮುಚ್ಚಿಹಾಕುವುದಿಲ್ಲ. LTTE ಯು ನಡೆಸಿದ ರಾಜೀವ್ ಗಾಂಧಿಯ ಹತ್ಯೆಯ ವಿವರಗಳ ಹೊರತಾಗಿ ಕನ್ನಡದಲ್ಲಿ ತಮಿಳು ಈಳಂ ಬೇಡಿಕೆಯ ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆಗಳನ್ನು, ಶ್ರೀಲಂಕಾ ತಮಿಳರ ಆಶೋತ್ತರಗಳಿಗೆ ದ್ರೋಹ ಬಗೆಯುವಲ್ಲಿ ಭಾರತದ ಮತ್ತು ಇತರ ಶಕ್ತಿಗಳ ಪಾತ್ರವನ್ನು ಮತ್ತು LTTE ಯ ಮಿತಿ ಮತ್ತು ಶಕ್ತಿಗಳನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನವಾಗಿಲ್ಲ. ಆದ್ದರಿಂದಲೇ ಲಂಕೇಶ್ ಪ್ರಕಾಶನ 'ಓ ಈಳಂ' ಪುಸ್ತಕವನ್ನು ಹೊರತರುತ್ತಿದೆ. ಅದರ ಒಂದು ಅಧ್ಯಾಯದ ಆಯ್ದ ಭಾಗವನ್ನು ನಿಮಗಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ)





"20ನೇ ಶತಮಾನದ ಸೈನಿಕ ಕಾರ್ಯಾಚರಣೆಗಳನ್ನು ಪಟ್ಟಿ ಮಾಡುವಾಗ ಮಿಲಿಟರಿ ವಿಶ್ಲೇಷಣಾಕಾರರು ನಾಲ್ಕು ದುರಂತ ಯುದ್ಧಗಳನ್ನು ಪಟ್ಟಿ ಮಾಡುತ್ತಾರೆ: ಅಮೆರಿಕ ಸೈನ್ಯ ವಿಯೇಟ್ನಾಂನಲ್ಲಿ, ಚೀನಾದ ಸೈನ್ಯ ಕಾಂಬೋಡಿಯದಲ್ಲಿ, ಸೋವಿಯಟ್ ಸೈನ್ಯ ಅಫಘಾನಿಸ್ತಾನದಲ್ಲಿ ಹಾಗೂ ಭಾರತದ ಸೈನ್ಯ ಶ್ರೀಲಂಕಾದಲ್ಲಿ ನಡೆಸಿದ ಯುದ್ಧಗಳು. ಇವು ದುರಂತ ಯುದ್ಧಗಳು... ಯಾಕೆಂದರೆ ಈ ನಾಲ್ಕೂ ರಾಷ್ಟ್ರಗಳು ವಿಸ್ತಾರದಲ್ಲಿ, ಜನಸಂಖ್ಯೆಯಲ್ಲಿ, ಆರ್ಥಿಕತೆಯಲ್ಲಿ ಹಾಗೂ ಎಲ್ಲದಕ್ಕಿಂತ ಮುಖ್ಯವಾಗಿ ಮಿಲಿಟರಿ ಶಕ್ತಿಯಲ್ಲಿ ಅವುಗಳಿಂದ ದಾಳಿಗೊಳಗಾದ ದೇಶಗಳಿಗಿಂತ ಎಷ್ಟೋ ಪಾಲು ಬಲಿಷ್ಠವಾಗಿದ್ದಂಥವುಗಳು. ಆದರೂ, ಆ ಬಲಾಬಲದಲ್ಲಿ ಕಡಿಮೆಯಿರುವ, ಸಾಮರ್ಥ್ಯದಲ್ಲಿ ದುರ್ಬಲವಾಗಿರುವ, ತರಬೇತಿಯಲ್ಲಿ ನುರಿತಿರದ ಶತ್ರುಗಳೊಂದಿಗೆ ಹೀನಾಯವಾಗಿ ಸೋತು ಮನೆ ಸೇರಿದವು.

ಈ ನಾಲ್ಕೂ ಬಲಿಷ್ಠ ದೇಶಗಳು ಯುದ್ಧ ಪ್ರಾರಂಭವಾಗುವ ಮುನ್ನವೇ ತಮ್ಮ ಶತ್ರುಗಳನ್ನು ಚೆನ್ನಾಗಿ ಅರಿತಿದ್ದವು. ಆದರೂ ಆ ಶತ್ರುಗಳ ಶಕ್ತಿಸಾಮರ್ಥ್ಯಗಳ ಬಗ್ಗೆ ಕೆಳ ಅಂದಾಜು ಮಾಡಿದ್ದವು. ಹಿಂದೆಂದೂ ಕಾಣದಂತ ಶ್ರೀಮಂತ ಅನುಭವಗಳನ್ನು ಕಂಡವು. ರಣರಂಗದಿಂದ ಸೋತು ಕಾಲ್ತೆಗೆದ ಮೇಲೆ ಮತ್ತೆಂದೂ ಅಲ್ಲಿಗೆ ಹೋಗದಂತೆ ಶಪಥ ಮಾಡಿ ಹೋದವು.

ನಿರ್ದಿಷ್ಟವಾಗಿ LTTE ಮತ್ತು IPKF ನಡುವಿನ ಯುದ್ಧದ ವಿಚಾರಕ್ಕೆ ಬರುವುದಾದರೆ ಅದು ಅಮೆರಿಕನ್ನರು ವಿಯೆಟ್ನಾಮ್‌ನಲ್ಲಿ, ಸೋವಿಯಟ್ಟರು ಅಫಘಾನಿಸ್ತಾನದಲ್ಲಿ ಹಾಗೂ ಚೀನಾದವರು ಕಾಂಬೋಡಿಯದಲ್ಲಿ ನಡೆಸಿದ ಯುದ್ಧಗಳಿಗಿಂತ ಭಿನ್ನವಾಗಿತ್ತು.

ಮುಂದೆ ಯಾವ ಶತ್ರುವಿನೊಂದಿಗೆ ಯುದ್ಧ ಮಾಡಬೇಕಿತ್ತೋ ಅದೇ ಶತ್ರುವಿಗೆ ಈ ಹಿಂದೆ ಭಾರತೀಯ ಸೇನೆ ಮತ್ತು ಗೂಢಚರ್ಯ ಸಂಸ್ಥೆ RAW ತರಬೇತಿ ಕೊಟ್ಟಿದ್ದವು. ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿಯವರ ಸರ್ಕಾರಗಳೇ ತಮಿಳುನಾಡಿನಲ್ಲಿ ನೂರಾರು ಸೈನಿಕ ತರಬೇತಿ ಶಿಬಿರಗಳನ್ನು ಏರ್ಪಡಿಸಿ LTTEಯ ತಮಿಳು ಹುಲಿಗಳನ್ನು ಭೀಷಣ ಕದನಕ್ಕೆ ತಯಾರು ಮಾಡಿದ್ದವು. ಹೀಗಾಗಿ, ಭಾರತೀಯ ಸೈನ್ಯದ ಮನಸ್ಥಿತಿ, ಯುದ್ಧತಂತ್ರ, ಶಸ್ತ್ರಾಸ್ತ್ರಗಳು ಮುಂತಾದವುಗಳ ಬಗ್ಗೆ LTTE ಹುಲಿಗಳಿಗೆ ಚೆನ್ನಾಗಿ ಗೊತ್ತಿತ್ತು. ಆದರೆ, ಭಾರತೀಯ ಸೇನೆಗೆ LTTEಯ ಈ ವಿಚಾರಗಳನ್ನು ಕುರಿತಂತೆ ಗೊತ್ತಿದ್ದುದು ತೀರಾ ಕಡಿಮೆ. "ಪ್ರಭಾಕರನ್ ಮತ್ತವನ ತಮಿಳು ಹುಲಿಗಳು ಕೇವಲ ನಗರ ಗೆರಿಲ್ಲಾ ಯುದ್ಧದಲ್ಲಿ ಪಳಗಿದ್ದಾರೆಯೇ ಹೊರತು ಗ್ರಾಮೀಣ ಪ್ರದೇಶದ ಗುಡ್ಡಗಾಡುಗಳಲ್ಲಿ, ಕಾಡುಮೇಡುಗಳಲ್ಲಿ ಗೆರಿಲ್ಲಾ ಯುದ್ಧ ಮಾಡುವ ಕೌಶಲ್ಯ ಅವರಿಗಿಲ್ಲ" ಎಂಬುದು ಭಾರತೀಯ ಗೂಢಚರ್ಯ ಸಂಸ್ಥೆ RAWನ ತಿಳುವಳಿಕೆಯಾಗಿತ್ತು. ಇದನ್ನಾಧರಿಸಿಯೇ ಭಾರತೀಯ ಸೇನೆ LTTE ಮೇಲೆ ಯುದ್ಧ ಸಾರಿತ್ತು. ಈ ತಿಳುವಳಿಕೆಯೇ ಸಂಪೂರ್ಣ ತಪ್ಪಾಗಿತ್ತು. ಗ್ರಾಮೀಣ ಗೆರಿಲ್ಲಾ ಯುದ್ಧತಂತ್ರದಲ್ಲಿ ಅತ್ಯುತ್ತಮ ತರಬೇತಿ ಹೊಂದಿದ ಭಾರತದ ಸೈನಿಕರಿಗೂ LTTE ಎರಡು ವರ್ಷಗಳ ಕಾಲ ಚಳ್ಳೆಹಣ್ಣು ತಿನ್ನಿಸಿ ಕಳಿಸಿತು."

"1987ರ ಅಕ್ಟೋಬರ್ ೧೧ರಂದು ರಾತ್ರಿ ಒಂದು ಗಂಟೆಗೆ ನಾಲ್ಕು ಎಂಐ ಹೆಲಿಕ್ಯಾಪ್ಟರ್‌ಗಳು ಪ್ಯಾರಾ ಕಮ್ಯಾಂಡೋಗಳನ್ನು ಇಳಿಸಲು ಪ್ರಾರಂಭಿಸಿದಂತೆಯೇ LTTE ಹುಲಿಗಳು ಅವರ ಮೇಲೆ ಗುಂಡಿನ ಮಳೆಗರೆಯಲಾರಂಭಿಸಿದರು. ವಾಸ್ತವದಲ್ಲಿ ಕಮ್ಯಾಂಡೋಗಳು ಇಳಿಯುವುದಕ್ಕಾಗಿಯೇ ಅವರು ಕಾಯುತ್ತಿದ್ದರು. ಮೂರು ಹೆಲಿಕ್ಯಾಪ್ಟರ್‌ಗಳು ತಮಿಳು ಹುಲಿಗಳ ಗುಂಡಿಗೆ ಬಲಿಯಾದವು. ತಮಿಳು ಹುಲಿಗಳು ಎಷ್ಟು ಬುದ್ಧಿವಂತರಾಗಿದ್ದರೆಂದರೆ ಪ್ರಭಾಕರನ್‌ನನ್ನು ಹಿಡಿಯುವುದಕ್ಕಾಗಿ IPKF ರೂಪಿಸಿದ ಇಡೀ ಯೋಜನೆಯನ್ನು IPKF ಟೆಲಿಕಮ್ಯೂನಿಕೇಶನ್ ಮೂಲಕವೇ ಸಂಪೂರ್ಣವಾಗಿ ತಿಳಿದುಕೊಂಡಿದ್ದರು! ಬೆಳಗಿನ ಜಾವದ ಹೊತ್ತಿಗೆ ಸಿಖ್ ಯೋಧರ ಕಡೆಯಿಂದ ಬರುತ್ತಿದ್ದ ಗುಂಡಿನ ಮೊರೆತ ನಿಂತುಹೋಯಿತು. ಮೂವತ್ತು ಸಿಖ್ ಯೋಧರ ಪೈಕಿ ಕೇವಲ ಮೂವರು ಬದುಕಿದ್ದರು. ಅವರಲ್ಲಿ ಇಬ್ಬರನ್ನು ತಮಿಳು ಹುಲಿಗಳು ಕೊಂದು ಹಾಕಿ, ಗಾಯಗೊಂಡು ಮದ್ದುಗುಂಡುಗಳಿಲ್ಲದೇ ಉಳಿದಿದ್ದ ಒಬ್ಬನನ್ನು ಬಂಧಿಸಿದರು.


ಇದು ತಮಿಳು ಹುಲಿಗಳೊಂದಿಗೆ ಭಾರತೀಯ ಸೇನೆ ನಡೆಸಿದ ಮೊದಲ ಜಟಾಪಟಿ. ಭಾರತೀಯ ಸೇನೆಯ ಈ ಯೋಧರು ಶ್ರೀಲಂಕಾ ನೆಲದ ಮೇಲೆ ಕಾಲಿಟ್ಟ ಕೇವಲ ಹನ್ನೆರಡು ತಾಸುಗಳೊಳಗೆ ಹೆಣವಾಗಿ ಬಿದ್ದಿದ್ದರು. ಸತ್ತವರಲ್ಲಿ ಅವರ ಕಮ್ಯಾಂಡಿಂಗ್ ಆಫೀಸರ್ ಮೇಜರ್ ಬೀರೇಂದ್ರ ಸಿಂಗ್ ಕೂಡ ಸೇರಿದ್ದರು. ಪ್ರಭಾಕರನ್‌ನನ್ನು ಹಿಡಿಯುವ ಮಿಷನ್ ಸಂಪೂರ್ಣವಾಗಿ ವಿಫಲಗೊಂಡಿತು. ಇದು IPKFಗೆ ತಮಿಳು ಹುಲಿಗಳು ಮಾಡಿದ ಮೊದಲ ಗಾಯ." ■

ಯಾಗದ ಕುದುರೆ ಸೋಮಣ್ಣ, ಆರತಿ ಎತ್ತುವೆ ಬಾರಣ್ಣ ಣsss...




ವಿಜಯನಗರದ ವೀರಪುತ್ರ, ಮಣ್ಣಲ್ಲೂ ಎಣ್ಣೆ ಗಿಂಜುವ ಮಹಾನ್ ಕಿಲಾಡಿ ಸೋಮಣ್ಣನನ್ನು ಬಿಜೆಪಿಗೆ ಎಳಕೊಂಡರೆ ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಬೆಂಗಳೂರನ್ನು ಹಿಡಿದುಬಿಡಬಹುದೆಂಬ ಯಡ್ಡಿಯ ದುರಾಸೆ ಕೊನೆಕೊನೆಗೆ ಬಿಜೆಪಿಗೇ ಮುಳುವಾಗುವ ಎಲ್ಲಾ ಲಕ್ಷಣಗಳೂ ನಿಚ್ಚಳವಾಗಿವೆ. ಬಿಜೆಪಿಗೆ ಕಾಲಿಟ್ಟ ದಿನದಿಂದಲೇ ಸೋಮಣ್ಣನ ಅವಸಾನವೂ ಶುರುವಾಗಿದೆ. ಮೊದಲಿದ್ದ ಮಾಸ್ ಲೀಡರ್ ವರ್ಚಸ್ಸು ಮುಗಿದು ಹೋಗಿದೆ. ಹಿಂದಿದ್ದ ನಿಷ್ಠಾವಂತ ಬೆಂಬಲಿಗರ್ಯಾರೂ ಈಗಿಲ್ಲ. ಜೊತೆಗುಳಿದ ಯಾರಿಗೂ ಒಳ್ಳೆಯ ಹೆಸರಿಲ್ಲ. ಎಂಜಲು ಕಾಸಿಗೆ ಮುಂದೆ ಜೈ ಕೂಗುವವರೂ ಕೂಡ ಹಿಂದಿನಿಂದ ಹಿಡಿಶಾಪ ಹಾಕುತ್ತಾರೆ.

ಕೇಡುಗಾಲಕ್ಕೆ ನಾಯಿಯೂ ಮೊಟ್ಟೆ ಇಡಬಹುದಾದರೆ ಬಿಜೆಪಿಯ ಅವಸಾನಕ್ಕೆ ಒಬ್ಬ ಸೋಮಣ್ಣನೇ ಸಾಕಲ್ಲವೆ?




ವಿಜಯನಗರದ ವೀರಪುತ್ರ, ಮಣ್ಣಲ್ಲೂ ಎಣ್ಣೆ ಗಿಂಜುವ ಮಹಾನ್ ಕಿಲಾಡಿ ಸೋಮಣ್ಣನನ್ನು ಬಿಜೆಪಿಗೆ ಎಳಕೊಂಡರೆ ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಬೆಂಗಳೂರನ್ನು ಹಿಡಿದುಬಿಡಬಹುದೆಂಬ ಯಡ್ಡಿಯ ದುರಾಸೆ ಕೊನೆಕೊನೆಗೆ ಬಿಜೆಪಿಗೇ ಮುಳುವಾಗುವ ಎಲ್ಲಾ ಲಕ್ಷಣಗಳೂ ನಿಚ್ಚಳವಾಗಿವೆ. ಬೆಂಗಳೂರಿನ ವಿಜಯನಗರ ಮತ್ತು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಗಳ ಲೋಕಲ್ ಬಿಜೆಪಿ ನಾಯಕರೇ ಸೋಮಣ್ಣನ ವಿರುದ್ಧ ತಿರುಗಿಬಿದ್ದಿರುವುದು. ಈ ಭಾಗದ ಮೂಲ ಬಿಜೆಪಿ ಕಾರ್ಯಕರ್ತರೆಲ್ಲ ಇಂಥ ರೆಬೆಲ್ ಲೀಡರ್‌ಗಳ ಬೆನ್ನಿಗೆ ನಿಂತಿರುವುದು ಮತ್ತು ಯಾರೆಲ್ಲ ಆಪತ್ಕಾಲದಲ್ಲಿ ಸೋಮಣ್ಣನ ಬೆನ್ನಿಗಿರಿದರೋ ಅಂಥವರೇ ಸದ್ಯ ಸೋಮಣ್ಣನ ಆಪ್ತವಲಯದಲ್ಲಿರುವುದು ಕೇವಲ ಸೋಮಣ್ಣನ ಕೇಡುಗಾಲಕ್ಕಷ್ಟೇ ಅಲ್ಲ ಬಿಜೆಪಿಯ ಅವನತಿಗೂ ಅಪಶಕುನದಂತಿದೆ.




ಬೃಹತ್ ಬೆಂಗಳೂರಿನ 198 ವಾರ್ಡುಗಳ ಪೈಕಿ ಕನಿಷ್ಠ ನಲವತ್ತಾದರೂ ಸೋಮಣ್ಣನ ಕಾರಣಕ್ಕೇ ಬಿಜೆಪಿಯ ವಶವಾಗುತ್ತವೆ. ಮಿಕ್ಕಂತೆ ಅಶೋಕ್ ಮತ್ತು ಕಟ್ಟಾ ಸೇರಿಕೊಂಡು ತಲಾ ಇಪ್ಪತ್ತು ವಾರ್ಡುಗಳಲ್ಲಿ ಬಿಜೆಪಿಯನ್ನು ಗೆಲ್ಲಿಸಿಕೊಟ್ಟರೆ ಅಲ್ಲಿಗೆ ಎಂಬತ್ತು ಕೌನ್ಸಿಲರ್‌ಗಳಾಗುತ್ತಾರೆ, ಇನ್ನು ಸುರೇಶ್‌ಕುಮಾರ್, ಕರಂದ್ಲಾಜೆ, ಲಿಂಬಾವಳಿ, ನಂದೀಶ್ ರೆಡ್ಡಿ, ಸತೀಶ್ ರೆಡ್ಡಿ, ವಿಶ್ವನಾಥ್, ರವಿಸುಬ್ರಹ್ಮಣ್ಯ, ವಿಜಯ್‌ಕುಮಾರ್, ರಘು, ಹೇಮಚಂದ್ರ ಸಾಗರ್ ಇತ್ಯಾದಿ ಬಿಜೆಪಿ ಶಾಸಕರೆಲ್ಲ ಕನಿಷ್ಠ ತಲಾ ಮೂರರರಂತೆ ಬಿಜೆಪಿ ಕೌನ್ಸಿಲರ್‌ಗಳನ್ನು ಗೆಲ್ಲಿಸಿದರೂ ಅದೇ ಮೂವತ್ತಾಗುತ್ತದೆ.... ಅಲ್ಲಿಗೆ ನೂರಾಹತ್ತು ಸ್ಥಾನಗಳಲ್ಲಿ ಬಿಜೆಪಿ ಗೆದ್ದು ಬೆಂಗಳೂರು ಬಿಜೆಪಿಯ ವಶವಾಗುತ್ತದೆ. ಕೇವಲ ವಿಜಯನಗರ ಮತ್ತು ಗೋವಿಂದರಾಜನಗರ ವಷ್ಟೇ ಅಲ್ಲದೆ ಪಕ್ಕದ ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಚಾಮರಾಜಪೇಟೆ, ಬಸವನಗುಡಿ ಮತ್ತು ರಾಜರಾಜೇಶ್ವರಿ ನಗರ ಕ್ಷೇತ್ರಗಳಲ್ಲೂ ಸೋಮಣ್ಣ ಕೈಚಳಕ ತೋರಿಸುತ್ತಾನೆ, ಬೆಂಗಳೂರಿನ ಮಟ್ಟಿಗೆ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳನ್ನು ನಾಮಾವಶೇಷ ಮಾಡಬೇಕೆಂದರೆ, ತನ್ನ ವಿರುದ್ಧ ಕತ್ತಿ ಮಸೆಯುತ್ತಿರುವ ಗಣಿ ರೆಡ್ಡಿಗಳನ್ನು ಬಗ್ಗುಬಡಿಯಬೇಕೆಂದರೆ ಅದಕ್ಕೆಲ್ಲ ಸೋಮಣ್ಣನೇ ಸರಿ ಎಂಬ ಯಡ್ಡಿಯ ಭ್ರಮೆ ಬಹುಶಃ ಮುಂಬರುವ ಪಾಲಿಕೆ ಚುನಾವಣೆಯಲ್ಲೇ ಮಣ್ಣು ಪಾಲಾಗುವ ಸೂಚನೆಗಳಿವೆ.

ಬಿಜೆಪಿಗೆ ಕಾಲಿಟ್ಟ ದಿನದಿಂದಲೇ ಸೋಮಣ್ಣನ ಅವಸಾನವೂ ಶುರುವಾಗಿದೆ. ಮೊದಲಿದ್ದ ಮಾಸ್ ಲೀಡರ್ ವರ್ಚಸ್ಸು ಮುಗಿದು ಹೋಗಿದೆ. ಹಿಂದಿದ್ದ ನಿಷ್ಠಾವಂತ ಬೆಂಬಲಿಗರ್ಯಾರೂ ಈಗಿಲ್ಲ. ಜೊತೆಗುಳಿದ ಯಾರಿಗೂ ಒಳ್ಳೆಯ ಹೆಸರಿಲ್ಲ. ಎಂಜಲು ಕಾಸಿಗೆ ಮುಂದೆ ಜೈ ಕೂಗುವವರೂ ಕೂಡ ಹಿಂದಿನಿಂದ ಹಿಡಿಶಾಪ ಹಾಕುತ್ತಾರೆ. ಮಗ ಅರುಣ್ ಸೋಮಣ್ಣನನ್ನು ರಾಜಕೀಯಕ್ಕೆ ತಂದದ್ದು, ಜಾತಿಗೆ ಗಂಟುಬಿದ್ದು ಕುಲಗೆಟ್ಟಿದ್ದು, ಕೊನೆಕೊನೆಗೆ ಬಾಡೂಟಕ್ಕೂ ಹೇಸದಷ್ಟು ಅಧಃಪತನಕ್ಕಿಳಿದದ್ದು ಸೋಮಣ್ಣನ ಅವನತಿಯ ಸಂಕೇತಗಳಷ್ಟೆ.

ಮುಂಬರುವ ಪಾಲಿಕೆ ಚುನಾವಣೆಯನ್ನು ಗುರಿಯಿಟ್ಟೇ ಮುಜರಾಯಿ ಮತ್ತು ವಸತಿಯಂಥ ಪುಷ್ಕಳ ಖಾತೆಯನ್ನು ದಯಪಾಲಿಸಿದ ಮುಖ್ಯಮಂತ್ರಿ ಯಡ್ಡಿ ಬಹುಶಃ ವಿಜಯನಗರದ ವಸ್ತುಸ್ಥಿತಿ ಗೊತ್ತಿರಲಿಕ್ಕಿಲ್ಲ. ಇಲ್ಲಿ ಸೋಮಣ್ಣನನ್ನು ಮಣ್ಣು ಮುಕ್ಕಿಸಲು ಕಾಂಗ್ರೆಸ್ ಮತ್ತು ಮೂಲ ಬಿಜೆಪಿಗಳೆರಡೂ ಕೈಜೋಡಿಸಿಬಿಟ್ಟಿವೆ. ನಿನ್ನೆ ಮೊನ್ನೆಯ ತನಕ ವಿಜಯಗನರದ ಬಿಜೆಪಿಗೆ ಅಧಿಪತಿಯಂತಿದ್ದ ಅಶ್ವತ್ಥನಾರಾಯಣ ಹೇಳಿ ಕೇಳಿ ಸೋಮಣ್ಣನ ಕಡು ವಿರೋಧಿ. ಜಾತಿಯಲ್ಲಿ ಒಕ್ಕಲಿಗ. 2004 ರ ಚುನಾವಣೆಯಲ್ಲಿ ಇನ್ನೇನು ಸೋಮಣ್ಣನನ್ನು ಸೋಲಿಸೇಬಿಟ್ಟ ಎಂಬಂತಿದ್ದ ಅಶ್ವತ್ಥನಾರಾಯಣ ಹೀನಾಯವಾಗಿ ಸೋತು ಕಣ್ಣೀರಿಟ್ಟದ್ದನ್ನು ಕಂಡು ಮರುಗಿದ್ದು ಸೋಮಣ್ಣನ ಮತ್ತೊಬ್ಬ ದುಷ್ಮನ್ ಲೇಔಟ್ ಕೃಷ್ಣಪ್ಪ, ತನ್ನೆಲ್ಲಾ ಸಂಪಾದನೆಯನ್ನು ಚುನಾವಣೆಯಲ್ಲಿ ಕಳೆದು ಬರಿಗೈಯಾಗಿದ್ದ ಅಶ್ವತ್ಥನಾರಾಯಣನನ್ನು ಕರೆದು 'ನೋಡಯ್ಯಾ ನೀನು ನಮ್ ಒಕ್ಕಲಿಗರೋನು. ಅಳಬಾರ್ದು.....' ಎಂದಿದ್ದೇ 25 ಲಕ್ಷದ ಗಂಟು ಕೊಟ್ಟರು.



ಋಣಕ್ಕೆ ಬಿದ್ದ ಅಶ್ವತ್ಥನಾರಾಯಣ ಬಿಜೆಪಿಯಲ್ಲಿದ್ದೂ ಲೋಕಸಭಾ ಚುನಾವಣೆಯಲ್ಲಿ ಅನಂತ್‌ಕುಮಾರ್ ವಿರುದ್ಧ ಕಣಕ್ಕಿಳಿದಿದ್ದ ಲೇಔಟ್ ಕೃಷ್ಣಪ್ಪನವರಿಗೆ ನೆರವಾದ. ಇದರ ಜಾಡು ಹಿಡಿದ ಸೋಮಣ್ಣ ಕಾಂಗ್ರೆಸ್ಸಿನಲ್ಲಿದ್ದೂ ಬಿಜೆಪಿಯ ಅನಂತ್ ಜೊತೆ ಕೈಜೋಡಿಸಿಬಿಟ್ಟ. ಗೆದ್ದ ಅನಂತ್‌ಕುಮಾರ್‌ಗೆ ಮೊದಲೇ ಅಶ್ವತ್ಥನಾರಾಯಣ ಮೇಲೆ ಮುನಿಸಿತ್ತಲ್ಲ; ವಿಜಯನಗರ ಎರಡು ವಿಧಾನಸಭಾ ಕ್ಷೇತ್ರವಾಗಿ ಸೋಮಣ್ಣ ಪಕ್ಕದ ಗೋವಿಂದರಾಜ ನಗರಕ್ಕೆ ವಲಸೆ ಹೋಗಿದ್ದನ್ನು ಕಾದು ಅಶ್ವತ್ಥನಾರಾಯಣನಿಗೆ ಮತ್ತೆ ವಿಜಯನಗರಕ್ಕೆ ಟಿಕೆಟ್ ಕೊಟ್ಟು ಬಿಟ್ಟರು!



ಈ ಬಾರಿ ವಿಜಯನಗರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಲೇಔಟ್ ಕೃಷ್ಣಪ್ಪನವರ ವಿರುದ್ಧ ಅಶ್ವತ್ಥನಾರಾಯಣ ಸೋಸುವುದುಂಟೆ? 'ಏಂತರೆ ಸೋಮಣ್ಣನ ವಿರುದ್ಧವೇ ನಿಲ್ತೀನಿ. ಯಾವುದೇ ಕಾರಣಕ್ಕೂ ಲೇಔಟ್ ಕೃಷ್ಣಪ್ಪನವರ ವಿರು... ನಾನು ಫೈಟ್ ಮಾಡಲ್ಲ' ಎಂದ. ಅಶ್ವತ್ಥನಾರಾಯ... ವಿಜಯನಗರಕ್ಕೆ ಬದಲು ಗೋವಿಂದರಾಜ ನಗರಕ್ಕೆ ಟಿಕೆ... ಬೇಕೆಂದು ಹಠಕ್ಕೆ ಬಿದ್ದು ಬಿಜೆಪಿ ಕಚೇರಿಯ ಮೇ... ದಾಳಿ ಮಾಡಿಸಿದ್ದ. ಇತ್ತ ಗೋವಿಂದರಾಜ ನಗರಕ್ಕೆ ಬಿ... ಟಿಕೆಟ್ ಗಿಟ್ಟಿಸಿದ ರವೀಂದ್ರ ಸೋಮಣ್ಣನ ಭುಜಬ... ವಿರುದ್ಧ ಬಸವಳಿದು ಸೋತಿದ್ದ. ಲೇಔಟ್ ಕೃಷ್ಣಪ್ಪನ... ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿದ್ದ ಪ್ರಮೀಳಾ ನೇಸರ್ಗಿ... ಅಶ್ವತ್ಥ ನಾರಾಯಣನ ಸಪ್ಪೋರ್ಟು ಸಿಕ್ಕಿದ್ದರೆ ಏನಾಗುತ್ತಿತ್ತೋ...

ಆದರೆ ಅಶ್ವತ್ಥನಾರಾಯಣನಿಗೆ ಕೃಷ್ಣಪ್ಪನ... ಋಣವೇ ದೊಡ್ಡದಾಯಿತು. ಲೇಔಟ್ ಕೃ... ಮತ್ತು ಸೋಮಣ್ಣ ಇಬ್ಬರೂ ಕಾಂಗ್ರೆಸ್ಸೇ ಆದರ... ಎಮ್ಮೆಲ್ಲೆಗಳಾಗಿ ಗೆದ್ದರೂ ಹಾವು ಮುಂಗುಸಿಗಳ... ಜಿದ್ದು ಸಾಧಿಸುವುದನ್ನು ನಿಲ್ಲಿಸಲಿಲ್ಲ. ಈ... ಸೋಮಣ್ಣ ಬಿಜೆಪಿಗೆ ಬಂದಿದ್ದಾನೆ, ಮಂತ್ರಿಯ... ಆಗಿದ್ದಾನೆ. ಹಾಗಂಥ ಮೂಲ ಬಿಜೆಪಿಯವ... ಸೋಮಣ್ಣನ ಬೆನ್ನಿಗೆ ನಿಂತಿಲ್ಲ. ಸೋಮ... ಬಿಜೆಪಿಗೆ ಬರುವುದನ್ನು ತಾರಾಮಾರಾ ವಿರೋಧಿಸಿ... ಅಶ್ವತ್ಥನಾರಾಯಣನ ಜೊತೆ ಈಗ ಗೋವಿಂದರಾಜನಗ... ರವೀಂದ್ರನೂ ಕೈಜೋಡಿಸಿದ್ದಾನೆ. ಈ ಸಲದ ಪಾ... ಚುನಾವಣೆಯಲ್ಲಿ ಗೋವಿಂದರಾಜನಗ... ಒಂಭತ್ತು ವಾರ್ಡುಗಳು ಮತ್ತು ವಿಜಯನಗ... ಎಂಟು ವಾರ್ಡುಗಳಲ್ಲಿ ತಂತಮ್ಮ ಬೆಂಬ... ರಿಗೇ ಟಿಕೆಟ್ ಕೊಡಬೇಕೆಂಬುದು ರವೀಂ... ಮತ್ತು ಅಶ್ವತ್ಥನಾರಾಯಣರ ಪಟ್ಟು. ಆ... ಸೋಮಣ್ಣನ ಜೊತೆ ಬಿಜೆಪಿಗೆ ಬಂದ ಮೂ... ಕಾಂಗ್ರೆಸ್ ಪುಢಾರಿಗಳೆಲ್ಲರೂ ಕೌನ್ಸಿಲರ್‌ಗಳಾಗ... ದುರಾಸೆಯಿಟ್ಟೇ ಬಂದವರು. ಈ ಪ... ಯಾರಿಗೇ ಸೋಮಣ್ಣ ಕೈಕೊಟ್ಟರೂ ಖಂ... ತಿರುಗಿ ಬೀಳುತ್ತಾರೆ. ಹಾಗೊಮ್ಮೆ ತನ್ನೆಲ್ಲಾ ಚೇಲಾಗ... ಒಂದೊಂದು ವಾರ್ಡಿಗೆ ಬಿಜೆಪಿ ಟಿಕೆಟ್ ಕೊಡಿಸಿದನೆಂ... ಮೂಲ ಬಿಜೆಪಿ ಕಾರ್ಯಕರ್ತರು ರೊಚ್ಚಗೇಳುತ್ತಾರೆ.

ಇದು ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತಿರು...

ಚೇಲಾಗಳ ಕಚ್ಚಾಟವೂ ಪಾಲಿಕೆ ಚುನಾವಣೆ ಎಂಬ ಬಲಿಪೀಠವೂ

ವಿಜಯನಗರದ ಎಂಟಕ್ಕೆ ಎಂಟೂ ವಾರ್ಡುಗಳಲ್ಲಿ ಬಿಜೆಪಿ ಗೆದ್ದು ಪಕ್ಕದ ಗೋವಿಂದರಾಜನಗರದ ಒಂಭತ್ತೂ ವಾರ್ಡುಗಳನ್ನು ಗೆದ್ದು ಬಿಟ್ಟರೆ ಅಲ್ಲಿಗೆ ಸೋಮಣ್ಣ ಒಬ್ಬನೇ ಹದಿನೇಳು ಕೌನ್ಸಿಲರ್‌ಗಳನ್ನು ಗೆಲ್ಲಿಸಿದಂತಾಗುತ್ತದೆ ಎಂಬ ಲೆಕ್ಕಾಚಾರ ಯಡ್ಡಿಯ ತಲೆ ಹೊಕ್ಕಿದೆ.

ಇದಲ್ಲದೇ ಚಾಮರಾಜಪೇಟೆಯ ರಾಯಪುರಂ, ಪಾದರಾಯನಪುರ, ಜೆಜೆನಗರ ಮತ್ತು ಆಜಾದ್ ನಗರ ವಾರ್ಡುಗಳಿಗೂ ಸೋಮಣ್ಣ ಕೈಹಾಕಿದ್ದಾನೆ. ಆಜಾದ್ ನಗರಕ್ಕೆ ಸೋಮಣ್ಣನ ಶಿಷ್ಯ ಮಾಜಿ ಕಾಂಗ್ರೆಸ್ ಕೌನ್ಸಿಲರ್ ಬಿ.ಟಿ. ಶ್ರೀನಿವಾಸ್ ಮೂರ್ತಿಯೇ ಬಿಜೆಪಿ ಅಭ್ಯರ್ಥಿಯಾಗುತ್ತಾನೆ. ರಾಯಪುರಂ ವಾರ್ಡಿಗೆ ಮಾಜಿ ಕೌನ್ಸಿಲರ್ ಕೇಶವಮೂರ್ತಿ ಅಥವಾ ಸೋಮಣ್ಣನ ಹಳೇ ಶಿಷ್ಯ ರಾಧಾಕೃಷ್ಣ ನಿಲ್ಲಬಹುದು. ಪಕ್ಕದ ಜೆಜೆನಗರ ಮತ್ತು ಪಾದರಾಯನಪುರಗಳು ಹೇಳಿಕೇಳಿ ಮುಸ್ಲಿಂ ಏರಿಯಾಗಳು.

ಸೋಮಣ್ಣನ ಏತರ್‌ನಾಕ್ ತಲೆ ಹೇಗೆ ಕೆಲಸ ಮಾಡುತ್ತದೆಯೆಂದರೆ ಇಲ್ಲಿ ಮುಸ್ಲಿಮರೇ ನಿಲ್ಲದ ಹಾಗೆ ಅದನ್ನು ಎಸ್.ಸಿ. ಮೀಸಲಾತಿಗೊಳಪಡಿಸಿಬಿಟ್ಟರೆ? ತನ್ನ ಇನ್ನೊಬ್ಬ ಎದುರಾಳಿ ಮಾಜಿ ಉಪಮೇಯರ್ ಪುಟ್ಟರಾಜುವಿಗೆ ಅಮರಜ್ಯೋತಿ ನಗರವೆಂಬ ವಾರ್ಡೇ ಇಲ್ಲದಂತೆ ಮಾಡಿಬಿಟ್ಟರೆ? ಗೋವಿಂದರಾಜನಗರ ವಾರ್ಡಿನ ಕೌನ್ಸಿಲರ್ ಜೆ. ಕೃಷ್ಣಪ್ಪ ಚುನಾವಣೆಗೆ ನಿಲ್ಲದಂತೆ ಜಾತಿ ಮೀಸಲಾತಿಯನ್ನೇ ಬದಲಿಸಿಬಿಟ್ಟರೆ?

ಈ ಬಾರಿಯ ವಾರ್ಡ್ ಪುನರ್ ವಿಂಗಡಣೆಯಲ್ಲಿ ಇಂಥ ಎಲ್ಲಾ ಕಾರಸ್ಥಾನಗಳನ್ನೂ ಸೋಮಣ್ಣ ಮಾಡಿ ಮುಗಿಸಿದ್ದಾನೆ. ಗೋವಿಂದರಾಜನಗರದ ಒಂಭತ್ತು ವಾರ್ಡುಗಳ ಪೈಕಿ ಸದ್ಯ ಸೋಮಣ್ಣನ ಜೊತೆಗಿರುವ ನೆಲಗಳ್ಳಿ ಶಾಂತಕುಮಾರಿ ಮತ್ತು ಮಾರೇನಹಳ್ಳಿಯ ಪಿಳ್ಳರಾಜುಗೆ ಮೀಸಲಾತಿಯಿಂದ ಹಿಡಿದು ಪರಿಯಾ



ಯಾದರೂ ದಾಸೇಗೌಡ ಮತ್ತು ಭಾಗ್ಯಮ್ಮ ಎಂಬಬ್ಬರು ಬಿಜೆಪಿ ನಿಷ್ಠರು ಅಡ್ಡಗಾಲಿಡುತ್ತಿದ್ದಾರೆ.

ಪಕ್ಕದ ನಾಯಂಡಹಳ್ಳಿ ವಾರ್ಡಿಗಾಗಿ ಕುಪ್ಪಂ ಗಣೇಶನ ಹಳೇ ರೌಡಿಯೊಬ್ಬ ಜೆಡಿಎಸ್ ತೊರೆದು ಮತ್ತೆ ಸೋಮಣ್ಣನ ಕಾಲು ಹಿಡಿದಿದ್ದಾನೆ. ನಿನ್ನೆ ಮೊನ್ನೆಯ ತನಕ ಕುಪ್ಪಂ 'ವಿಂಗಡಣೆಯ ತನಕ ಸೋಮಣ್ಣ ನೆರವಾಗಿದ್ದಾನೆ. ಕೈಗಾರಿಕಾ ನಗರದ ಕೌನ್ಸಿಲರ್ ಕಾಂಗ್ರೆಸ್ಸಿನ ಶ್ರೀನಿವಾಸ್ ವಿರುದ್ಧ ಸೋಮಣ್ಣನ ಪರ ಮಾಜಿ ಕೌನ್ಸಿಲರ್ ಗಂಗಭೈರಯ್ಯ, ಹಳೇ ಬಿಜೆಪಿ ಕ್ರಿಮಿ ತಿಮ್ಮಯ್ಯ, ರಾಗಿ ಮಿಷನ್ ಕಟ್ಟೆ ಮಂಡಳ ಬಿಜೆಪಿ ಅಧ್ಯಕ್ಷ ರವಿಕುಮಾರ್ ಮುಂತಾದ ಹಿಂಡೇ ಇದೆ. ಈ ಪೈಕಿ ಯಾರೇ ಒಬ್ಬರಿಗೆ ಬಿಜೆಪಿ ಟಿಕೆಟ್ ಸಿಕ್ಕರೂ ಮಿಕ್ಕ ಮೂವರೂ ಕತ್ತಿ ಮಸೆಯುವುದು ಗ್ಯಾರಂಟಿ. ಚಂದ್ರಾಲೇಔಟಿಗೆ ತನ್ನ ನೆಚ್ಚಿನ ಬಂಟ ವೆಂಕಟೇಶನನ್ನು ಗೆಲ್ಲಿಸಬೇಕೆಂಬ ಉಮೇದು ಸೋಮಣ್ಣನಿಗಿದೆ

ಸೋಮಣ್ಣನ ವಿರುದ್ಧ ಹಲ್ಲುಕಡಿಯುತ್ತಿದ್ದ, ತನ್ನನ್ನು ಜೈ... ಹಾಕಿಸಿದ್ದೂ ಅಲ್ಲದೇ ಇದೇ ಆಘಾತಕ್ಕೆ ಸಿಲುಕಿ ಮಗ... ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ ಹಳೇಗು... ಸೋಮಣ್ಣನನ್ನು ಮುಗಿಸುವುದೇ ತನ್ನ ಬದುಕಿನ ಗ... ಎಂಬಂತಿದ್ದವನು ಈಗ ಬಿಜೆಪಿಗೆ ಬಂದಿದ್ದಾನೆಂ... ಸೋಮಣ್ಣ ಇನ್ನೆಂಥಾ ಬ್ಲಾಕ್‌ಮೇಲ್ ಮಾಡಿರಬೇಡ...


ಕುಪ್ಪಂ ಗಣೇಶನನ್ನು ನಾಯಂಡಹಳ್ಳಿ ವಾಡಿ... ನಿಲ್ಲಿಸಿದರೂ ಆತನ ಕುಖ್ಯಾತಿಯ ಮುಂದೆ ಜೆಡಿಎಸ್... ಮುನಿರಾಜುವೇ ನಿರುಪ್ರದವಿ ಅಭ್ಯರ್ಥಿಯಾಗುತ್ತಾ... ಮುನಿರಾಜು ಮಾವ ಚನ್ನರಾಮ... ಕೂಡ ಇಲ್ಲಿ ಬಿಜೆಪಿ ಟಿಕೆಟ್ ಆಕಾಂ... ಹಾಗೊಮ್ಮೆ ಕುಪ್ಪುಗೆ ಸೋಮಣ್ಣ ಟಿಕೆ... ಕೊಟ್ಟನೆಂದರೆ ಸದ್ಯ ತಾನೂ ಸೋಮಣ್ಣ... ಚೇಲಾ ಎಂದುಕೊಳ್ಳುವ ಚನ್ನರಾಮ... ರೊಚ್ಚಿಗೆದ್ದು ಮುನಿರಾಜು ಬೆಂಬ... ನಿಲ್ಲುತ್ತಾನೆ.

ಇನ್ನು ಅಗ್ರಹಾರ ದಾಸರಹಳ್ಳಿ... ಮಟ್ಟಿಗೆ ಮಂತ್ರಿ ರಾಮಚಂದ್ರೇಗೌ... ಮಗ ಗಿರೀಶ್ ಗೌಡ ಬಿಜೆಪಿ ಅಭ್ಯ... ಯಾಗಬಹುದು. ಆತನನ್ನು ಗೆಲ್ಲಿಸ... ಹೊಣೆ ಕೂಡ ಸೋಮಣ್ಣನ ತಲೆ... ಬೀಳುತ್ತದೆ. ಆದರೆ ಈಗಾಗಲೇ ಮು... ಸಪ್ಪ ಮತ್ತು ರೇಮಣ್ಣ ಎಂಬಬ್ಬರು ಶಿಷ್ಯರಿಗೆ ಕೌನ್ಸಿ... ಮಾಡುತ್ತೇನೆಂದು ಸೋಮಣ್ಣ ಹೂವಿಟ್ಟಿದ್ದಾನೆ. ಆದ... ಸಿಟ್ಟಿಗೇಳದೇ ಇರುತ್ತಾರಾ? ಪಟ್ಟೇಗಾರ ಪಾಳ್ಯ ವಾರ್ಡಿ... ಮಾಜಿ ಕೌನ್ಸಿಲರ್ ಚನ್ನಪ್ಪ, ನಾಗಣ್ಣ ಮತ್ತು ಬೆಟ್ಟೇಗೌ... ಎಂಬ ಮೂವರು ಶಿಷ್ಯರನ್ನು ಸೋಮಣ್ಣ ಎತ್ತಿ ಕಟ್ಟಿದ್ದಾ...

ಅಪ್ಪ ನೌಟಂಕಿ ಮಗ ಪಾಖಂಡಿ

ಯಡ್ಡಿ ಕಟ್ಟಿದ ಲಿಂಗಾಯತ ಸಾಮ್ರಾಜ್ಯಕ್ಕೆ ಮುಂದೊಮ್ಮೆ ತಾನೇ ಉತ್ತರಾಧಿಕಾರಿಯೆಂಬ ಭ್ರಮೆಯೊಂದು ಸೋಮಣ್ಣನ ತಲೆ ಹೊಕ್ಕಿದೆ. ಅದಕ್ಕೆ ತಕ್ಕಂತೆ ಮುಜರಾಯಿ ಖಾತೆ ಸಿಕ್ಕ ಮೇಲಂತೂ ಲಿಂಗಾಯತ ಮಠಮಾನ್ಯಗಳೆಲ್ಲ ಸೋಮಣ್ಣನ ಮನೆಮುಂದೆ ಅರ್ಜಿ ಹಿಡಿದು ನಿಂತು ಬಿಟ್ಟಿವೆ. ಇವತ್ತಲ್ಲಾ ನಾಳೆ ಬಿಜೆಪಿಗೆ ಸೆಡ್ಡು ಹೊಡೆದು ಯಡ್ಡಿ ಪ್ರತ್ಯೇಕ ಪಕ್ಷ ಕಟ್ಟುವುದಾದರೆ ಯಡ್ಡಿಯ ನಂತರದ ಲಿಂಗಾಯತ ಉತ್ತರಾಧಿಕಾರಿ ನಾನಲ್ಲದೇ ಇನ್ಯಾರು?

ಇಂಥ ಭ್ರಮೆಗೆ ಬಿದ್ದ ಸೋಮಣ್ಣ ಮಾಡಿದ ಮತ್ತೊಂದು ಅನಾಹುತವೆಂದರೆ ಯಡ್ಡಿ ಮಗ ರಾಘವೇಂದ್ರನನ್ನು ರಾಜಕೀಯಕ್ಕಿಳಿದಂತೆ ತನ್ನ ಮಗ ಅರುಣ್ ಸೋಮಣ್ಣನನ್ನು ಅಖಾಡಕ್ಕಿಳಿಸಿದ್ದು. ಮೊದಲ ಮಗ ನವೀನ್ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನಲ್ಲಿರುವಾಗಲೇ ಭಾನಗಡಿ ಮಾಡಿಕೊಂಡಿದ್ದು ಬಿಟ್ಟರೆ ಯಾವತ್ತೂ ರಾಜಕೀಯಕ್ಕೆ ಕೈಯಿಟ್ಟವನಲ್ಲ. ಆದರೆ ದ್ವಿತೀಯ ಪುತ್ರ ಅರುಣ್ ಮಹಾ ಪಾಖಂಡಿ. ವರಸೆಯಲ್ಲಿ ಅಪ್ಪನನ್ನೇ ಮೀರಿಸಬಲ್ಲ ಕಿಲಾಡಿ. ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ಎಂಬಿಬಿಎಸ್ ಮುಗಿಸುವ ಹೊತ್ತಿಗಾಗಲೇ ಪುಂಡರ ಪಡೆಯೊಂದನ್ನು ಕಟ್ಟಿಕೊಂಡಿದ್ದ. ಈಗ ಅದೇ ಪುಂಡರ ತಂಡ ಅರುಣನ ಜೊತೆ ರೌಂಡಿಂಗ್ ಶುರು ಹಚ್ಚಿಕೊಂಡಿದೆ. ಸಾಲದ್ದಕ್ಕೆ ವಿಪರೀತ ಜಿಪುಣ ಬೇರೆ. ಇವತ್ತಲ್ಲಾ ನಾಳೆ ಸೋಮಣ್ಣನಿಂದ ವಿಜಯನಗರಕ್ಕೆ ಮುಕ್ತಿಯೆಂದು ಕಾಯುತ್ತಿದ್ದ ಜನಕ್ಕೆ ಸೋಮಣ್ಣನಿಗಿಂತಲೂ ಖತರ್‌ನಾಕ್ ಮಗ ಗಂಟುಬಿದ್ದನೆಂದರೆ ಏನಾಗಬೇಡ?



…ೀಮಣ್ಣನ ಪರಿ. ಪಾಲಿಕೆ ಚುನಾವಣೆಯಲ್ಲೇನಾದರೂ …ೀಮಣ್ಣನ ಕೈ ಮೇಲಾಯಿತೆಂದರೆ ಮೊದಲು ಬಂಡೇಳು…ು ಆತನ ಕಡುವೈರಿ ಅಶ್ವತ್ಥನಾರಾಯಣ. ಆತನ …ತೆ ಗೋವಿಂದ ರಾಜನಗರದ ಬಿಜೆಪಿ ನಾಯಕ …ಂದ್ರನೂ ಕೈಜೋಡಿಸುತ್ತಾನೆ. ಸೋಮಣ್ಣನ ಪಕ್ಕಾ …ಗಳಾದ ಈ ಇಬ್ಬರೂ ನಾಯಕರಿಗೆ ಲೇಔಟ್ …ಪ್ಪನವರ ಜೊತೆ ನಂಟಿದೆ. ಸಹಜವಾಗೇ ವಿಜಯನಗರ …ತ್ತು ಗೋವಿಂದರಾಜನಗರದ ಮೂಲ ಬಿಜೆಪಿ …ರ್ಯಕರ್ತರು ಕಾಂಗ್ರೆಸ್ಸಿನ ಲೇಔಟ್ ಕೃಷ್ಣಪ್ಪನವರ ಜೊತೆ …ೋಡಿಸುತ್ತಾರೆ.

…ಅಲ್ಲಿಗೆ ಮೂಲ ಬಿಜೆಪಿಗಳು ಮತ್ತು ಕಾಂಗ್ರೆಸ್ …ದಾಗಿ ಸೋಮಣ್ಣನ …ುದ್ಧ ತಿರುಗಿಬಿದ್ದರೆಂದರೆ …ಭಾಗದ ಒಬ್ಬೇ ಒಬ್ಬ …ಜೆಪಿ ಅಭ್ಯರ್ಥಿ ಕೂಡ …ಲ್ಲುವುದು ಕಷ್ಟ. ಇದು …ು …ವಣೆಗೆಯಾದರೆ …ಲ್ಲೊಂದೆಡೆ ಸೋಮಣ್ಣನ ಪಾಪವೇ ಆತನನ್ನು …ಗಿಬಿಡುತ್ತದೆ.



…ಪ್ರತಿಯೊಂದು ವಾರ್ಡಿಗೂ ಕಮ್ಮಿಯೆಂದರೂ …ರ್ನಾಲ್ಕು ಪುಡಿ ಲೀಡರುಗಳನ್ನು ಹುಟ್ಟುಹಾಕಿ 'ನೀನೇ …ುದಿನ ಕೌನ್ಸಿಲರ್ ಕಣೋ.....' ಎಂದು ಸೋಮಣ್ಣ …ಬಿಸಿದ್ದಾನೆ. ಒಂದು ವಾರ್ಡಿಗೆ ಯಾರಿಗಂಥ ಟಿಕೆಟ್ …ಡುತ್ತಾನೆ? ಯಾರೇ ಒಬ್ಬನಿಗೆ ಟಿಕೆಟ್ ಸಿಕ್ಕಿ ಮಿಕ್ಕವರಿಗೆ …ೋಸವಾಯಿತೆಂದರೆ ಅಂಥವರೂ ರೊಚ್ಚಿಗೆದ್ದು …ಮಣ್ಣನ ವಿರುದ್ಧ ಕತ್ತಿ ಮಸೆಯುತ್ತಾರೆ. ಇದಲ್ಲದೇ …ವಿರುದ್ಧ ತಿರುಗಿಬಿದ್ದ ಮಾಜಿ ಡೆಪ್ಯೂಟಿ ಮೇಯರ್ …ರಾಜು, ಗೋವಿಂದರಾಜನಗರದ ಮಾಜಿ ಕೌನ್ಸಿಲರ್ …ಕೃಷ್ಣಪ್ಪನಂಥವರಿಗೆ ಮೊದಲೇ ಸೋಮಣ್ಣನ ಮೇಲೆ ಜಿದ್ದಿದೆ. ಮಿತ್ರರಿಗಿಂತಲೂ ಶತ್ರುಗಳ ಪಡೆಯೇ ಹೆಚ್ಚಿರುವಾಗ ಸೋಮಣ್ಣನ ಕಿಲಾಡಿ ಬುದ್ಧಿ ಹೇಗೇ ತಾನೇ ನಡೆಯಲು ಸಾಧ್ಯ?

ಸೋಮಣ್ಣ ತಾನೇ ತೋಡಿಕೊಂಡ ಗುಂಡಿಗೆ ಬೀಳುತ್ತಿದ್ದಾನೆ. ಆವತ್ತಿನಿಂದಲೂ ಸೋಮಣ್ಣ ಬೆಳೆಸುತ್ತಾ ಬಂದದ್ದು ಪುಡಿ ರೌಡಿಗಳು, ಭೂಕಂಟಕರು, ದಗಲುಬಾಜಿಗಳನ್ನೆ. ವಿಜಯನಗರಕ್ಕೆ ಕೌನ್ಸಿಲರ್ ಆಗಿದ್ದ ರವೀಂದ್ರ ಹೇಳಿಕೇಳಿ ಪಾತಕಿ ಅತ್ತಿಕುಪ್ಪೆಯ ಶಿವಪ್ಪ ಪಕ್ಕಾ ನೆಲಗಳ್ಳ. ಆರ್‌ಪಿಸಿ ಲೇಔಟಿನ ಮೋಟುಬೆಳ್ಳು ಜೈರಾಮ್ ಒಂದಾನೊಂದು ಕಾಲಕ್ಕೆ ಖತರ್‌ನಾಕ್ ರೌಡಿಯಾಗಿದ್ದ. ಮೂಡಲಪಾಳ್ಯದ ಶಾಂತಕುಮಾರಿ ಹುಟ್ಟಾ ನೆಲಗಳ್ಳಿ. ಬನ್ನಿಪೇಟೆಯ ಬಿಟಿಎಸ್ ನಾಗ ಹಳೇರೌಡಿ. ಸ್ವಂತ ಬುದ್ಧಿಯಾಗಲಿ, ಒಳ್ಳೆಯ ಹೆಸರಾಗಲಿ ಇಲ್ಲದ ಇಂಥ ಧೂರ್ತರನ್ನು ಕಂಡಿದ್ದೇ ಓಟು ಹಾಕುವವರೂ ಕ್ಯಾಕರಿಸಿ ಉಗಿಯುತ್ತಾರೆ.

ಸೋಮಣ್ಣ ಯಾವ ಮುಖ ಹೊತ್ತು ಪಾಲಿಕೆ ಚುನಾವಣೆಗೆ ಕೈಯಿಡುತ್ತಾನೆ? ವಿಜಯನಗರದ ಬಿಜೆಪಿ ಶಾಸಕ ಅಶ್ವತ್ಥನಾರಾಯಣನ ತಮ್ಮ ಕಿಟ್ಟಿ ಈಗಾಗಲೇ ಕಾಂಗ್ರೆಸ್ ಸೇರಿ ಲೇಔಟ್ ಕೃಷ್ಣಪ್ಪನವರ ಬಂಟನಾಗಿರುವುದೊಂದೇ ಸಾಕು. ಈ ಬಾರಿಯ ಪಾಲಿಕೆ ಚುನಾವಣೆಯಲ್ಲಿ ಮೂಲ ಬಿಜೆಪಿಗಳು ಮತ್ತು ಕಾಂಗ್ರೆಸ್ ಒಂದಾಗಿ ಸೋಮಣ್ಣನನ್ನು ಮಣ್ಣು ಮುಕ್ಕಿಸುತ್ತವೆ ಎಂಬುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

ನಲವತ್ತಲ್ಲ ಕೇವಲ ನಾಲ್ಕು ಕೌನ್ಸಿಲರ್‌ಗಳನ್ನೂ ಗೆಲ್ಲಿಸಲಾಗದ ಸೋಮಣ್ಣನಿಗಿಂತ ಬಿಜೆಪಿಗೆ ಬೇರೆ ಶತ್ರುಗಳು ಬೇಕೆ?

●

…ಮಾರೇನಹಳ್ಳಿಗೆ ಮಾಜಿ ಕೌನ್ಸಿಲರ್ ಪಿಳ್ಳರಾಜುವೇ …ಪಿ ಅಭ್ಯರ್ಥಿಯಾದರೂ ಆತನ ವಿರುದ್ಧ …ಸ್ವಾಮಿಗೌಡ, ಜಗ್ಗನ ಅಣ್ಣಕುಮಾರ, ಲಕ್ಕಪ್ಪ ಎಂಬ …ಮಣ್ಣನ ಶಿಷ್ಯರು ಬಿಜೆಪಿ ಟಿಕೆಟ್ಟಿಗೆ ಕ್ಯೂ ನಿಂತಿದ್ದಾರೆ. …ಡಬ್ಲ್ಯೂ ಲೇಔಟ್ ಎಂಬ ಹೊಸ ವಾರ್ಡಿಗೆ …ಮಣ್ಣನ ಬಂಟರಾದ ಚಿಕ್ಕತಿಮ್ಮಯ್ಯ ಮತ್ತು ವಾಗೀಶ …ಬ್ಬರು ಕಚ್ಚಾಡುತ್ತಿದ್ದಾರೆ. ಗೋವಿಂದರಾಜನಗರ …ಗೆ ಕಾಂಗ್ರೆಸ್ಸಿನ ಜಿ. ಕೃಷ್ಣಪ್ಪ ನಿಲ್ಲದ ಹಾಗೆ …ಾತಿಯನ್ನೇ ಬದಲಿಸಿದ್ದು ಕಾಂಗ್ರೆಸ್ ಕಾರ್ಯಕರ್ತರನ್ನು …ಸಿದೆ.

… ಒಂಭತ್ತೂ ವಾರ್ಡುಗಳಲ್ಲಿ ಪ್ರತಿ ವಾರ್ಡಿಗೂ …ನಾಲ್ಕು ಮಂದಿ ಚೇಲಾಗಳನ್ನು ಎತ್ತಿ ಕಟ್ಟಿ ನಿನ್ನನ್ನೇ …ರ್ ಮಾಡ್ತೀನಿ ಎಂದು ತನಗೆ ದುಡಿಸಿಕೊಂಡ …ಮಣ್ಣ ಈಗ ಯಾರಿಗಂಥ ಟಿಕೆಟ್ ಕೊಡಿಸುತ್ತಾನೆ? … ಕಿತ್ತಾಡುವ ಸೋಮಣ್ಣನ ಚೇಲಾಗಳ ಪೈಕಿ ಒಬ್ಬ …ರ್ಥಿಯಾದನೆಂದರೆ ಮಿಕ್ಕವರೇ ಆತನ ಕಾಲೆಳೆಯುತ್ತಾರೆ.

…ನ್ನು ವಿಜಯನಗರದ ಎಂಟು ವಾರ್ಡುಗಳಲ್ಲೂ …ಮಣ್ಣನದು ಇದೇ ಹಣೆಬರಹ. ಆರ್‌ಪಿಸಿ ಲೇಔಟಿಗೆ …, ಆನಂದ, ಸಚ್ಚಿ, ಗಣೇಶ್ ಶಾನಭಾಗ್ ಮತ್ತು … ಭಟ್ ಎಂಬ ನಾಲ್ಕರು ಚೆಡ್ಡಿಗಳ ಮಧ್ಯೆ …ಹಣಿಯಿದೆ. ಟ್ರಾವೆಲ್ಸ್ ಆನಂದನನ್ನು ಬಿಟ್ಟರೆ …ರೆಲ್ಲ ಹುಟ್ಟಾ ಚಡ್ಡಿಗಳು. ಹೊಸಹಳ್ಳಿ ವಾರ್ಡಿಗಾಗಿ …ರಾಜು, ಚೀಕರಿ ಖದೀಮ ಅಯ್ಯಂಗಾರಿ ಕೇಶವ, …ಸ್ವಾಮಿ ಮೋಟಾ ರಮೇಶ ಕುಸ್ತಿಗೆ ಬಿದ್ದಿದ್ದಾರೆ. …ಕ್ಕ ಅಯ್ಯಂಗಾರಿ ಕೇಶವ ಈಗಾಗಲೇ ವಿಜಯ… ಅರ್ಧ ಡಜನ್ ರೌಡಿಗಳು ಮತ್ತು ಪಂಟರ… ಕಟ್ಟಿಕೊಂಡು ರೌಂಡಿಂಗ್ ಆರಂಭಿಸಿದ್ದಾನೆ.

ವಿಜಯನಗರಕ್ಕೇನಾದರೂ ಕೇಡಿ ರವೀಂದ್ರನಿಗೆ ಟಿಕೆಟ್ ಸಿಕ್ಕಿತೆಂದರೆ ಮೂಲ ಬಿಜೆಪಿಯ ಟೊಮಾಟೋ ಚಂದ್ರು ಉಲ್ಟಾ ಹೊಡೆಯುತ್ತಾನೆ. ಬಾಪೂಜಿ ನಗರಕ್ಕೆ ಸೋಮಣ್ಣನ ಹಳೇ ಶಿಷ್ಯ ವೆಂಕಟಸ್ವಾಮಿಯೇ ಅಭ್ಯರ್ಥಿಯಾಗಬಹುದು. ಹಾಗಾದರೆ ಕತ್ತು ಕುಯ್ಯಲು ಟೀವಿ ಕೃಷ್ಣ ಅಣಿಯಾಗಿದ್ದಾನೆ.

ಅತ್ತಿಕುಪ್ಪೆಗೆ ಕೌನ್ಸಿಲರ್ ಆಗಿದ್ದ ಶಿವಪ್ಪನನ್ನು ಪಕ್ಕದ ಗಾಂಧಿನಗರದ ಬನ್ನಿಪೇಟೆಗೆ ಹಾಕಿ, ಅಲ್ಲಿ ತನ್ನ ಕಡುವೈರಿ ಅಶ್ವತ್ಥನಾರಾಯಣನನ್ನು ನಿಲ್ಲಿಸುವ ಹುನ್ನಾರ ಸೋಮಣ್ಣನದ್ದು. ಕೆಂಪಾಪುರ ಅಗ್ರಹಾರಕ್ಕೆ ಮಾಜಿ ಕನ್ನಡ ಹೋರಾಟಗಾರ ಶಿವರಾಮ್, ಗಾಳಿ ಆಂಜನೇಯ ವಾರ್ಡಿಗೆ ನೆಚ್ಚಿನ ಬಂಟ ಲಕ್ಷ್ಮೀನಾರಾಯಣ, ದೀಪಾಂಜಲಿ ನಗರಕ್ಕೆ ಸೋಮಶೇಖರ್ ನಿಂತರೆ ಅಂಥಾ ಪ್ರತಿಸ್ಪರ್ಧಿಗಳಿಲ್ಲ ಎಂಬುದನ್ನು ಬಿಟ್ಟರೆ ಮಿಕ್ಕೆಲ್ಲಾ ವಾರ್ಡುಗಳಲ್ಲಿ ಸೋಮಣ್ಣ ಹುಟ್ಟು ಹಾಕಿದ ಪುಡಿ ಲೀಡರುಗಳೇ ಕಚ್ಚಾಡಿ ಕಾಂಗ್ರೆಸ್ಸಿಗೆ ನೆರವಾಗುತ್ತಾರೆ.

ಮಹಾಲಕ್ಷ್ಮಿ ಲೇಔಟಿನ ಮೂರು ವಾರ್ಡುಗಳು, ರಾಜಾಜಿನಗರದ ಕಾಮಾಕ್ಷಿಪಾಳ್ಯ ಬಸವೇಶ್ವರನಗರ ಮತ್ತು ಶಿವನಹಳ್ಳಿ ವಾರ್ಡುಗಳು ಮತ್ತು ರಾಜರಾಜೇಶ್ವರಿ ನಗರದ ಮೂರು ವಾರ್ಡುಗಳಿಗೆ ಸೋಮಣ್ಣನೇನಾದರೂ ಕೈ ಇಟ್ಟನೆಂದರೆ ಅಲ್ಲಿನ ಲೋಕಲ್ ಬಿಜೆಪಿ ಕಾರ್ಯಕರ್ತರೇ ಸೋಮಣ್ಣನ ಅಭ್ಯರ್ಥಿಗಳ ವಿರುದ್ಧ ಕಾರಸ್ಥಾನ ನಡೆಸುತ್ತಾರೆ. ಸೋಮಣ್ಣನ ಎಲ್ಲಾ ವಿರೋಧಿಗಳು ಕೈಜೋಡಿಸುವುದು ಅನಿವಾರ್ಯವಾಯಿತೆಂದರೆ ಈ ಸಲದ ಪಾಲಿಕೆ ಚುನಾವಣೆಯೆಂಬುದು ಸೋಮಣ್ಣನ ಬಲಿಪೀಠವಲ್ಲದೇ ಮತ್ತೇನು? ■

ನನಗ ಎಪ್ಪತ್ತಾದದ್ದು ನನಗೇ ಗುರತಿಲ್ರೀ

ಧಾತ್ತೇರಿ

▸ ಯಾಹೂ

ಬೆಂಪಾರಿಗೆ ಎಪ್ಪತ್ತು! ನಂಬುವುದೇ ಕಷ್ಟ. ಅವರ ಬಂಡಾಯ, ಕಿಲಾಡಿ ಮತ್ತು ಕಿಡಿಗೇಡಿತನಕ್ಕೆ ಎಪ್ಪತ್ತು ತುಂಬಲು ಸಾಧ್ಯವಿಲ್ಲ, ಅದು ಬಂಡಾಯ ಮತ್ತು ನವ್ಯದ ನಡುಕಾಲದಲ್ಲೇ ನಿಂತಿರಬೇಕು ಅನ್ನಿಸಿತು. ಆದರೂ ಅವರನ್ನು ಮಾತನಾಡಿಸಿ ಒಂದು ಹಾರೈಕೆ ಮಾತೇಳುವುದು ನಮ್ಮ ಕರ್ತವ್ಯವಲ್ಲವೆ. ಫೋನ್ ಮಾಡಿದ್ರೆ ಸಿಕ್ಕೇಬಿಟ್ರು.

"ಹಲೋ, ನಮಸ್ಕಾರ ಸಾರ್, ನಾನು ಯಾಹೂ."

"ಯಾಹು ಅಂದ್ರ ಗೌರಿ ಲಂಕೇಶ್‌ದಾಗ ಬರೀತಿರಲ್ಲ ಅವರ ಹೌದಿಲ್ಲೋ?"

"ಹೌದು ಸಾರ್."

"ನಿಮ್ಮ ಹೆಸರೇನ್ರಿ?"

"ಯಾಹೂ ಅಂತ ಸಾರ್?"

"ಅದು ಖರೆರಿ, ತಂದಿ ತಾಯಿ ಇಟ್ಟ ಹೆಸರಿಲ್ಲೇನು?"

"ಅದು ಕರಿಯಕ್ಕೆ ಚನ್ನಾಗಿಲ್ಲ ಅಂತ ಗೌರಿ ಮೇಡಂ ಯಾಹೂ ಅಂತ ಇಟ್ಟವರೆ ಸಾ."

"ಅಂಗೇನ. ಯದಕ ಫೋನ್ ಮಾಡಿರಿ ಹೇಳ್ರಲ್ಲ?"

"ಯಪ್ಪತ್ತು ವರ್ಷಾಯ್ತಂತಲ್ಲ ಸಾರ್ ನಿಮಗೆ?"

"ಅನಂತಮೂರ್ತಿಗಾಗ್ಗೆ ಎಪ್ಪತ್ತಾರಾತು ಗೊತ್ತೇನ?"

"ಅವುರು ಎಪ್ಪತ್ತಾರಕ್ಕಿಂತ್ಲೂ ಜಾಸ್ತಿಯಾದಂಗೆ ಕಾಣ್ತಾರೆ. ಆದ್ರೆ ನೀವು ಮಾತ್ರ ಇನ್ನು ಐವತ್ತಾರು ವರ್ಷದಂಗೆ ಕಾಣ್ತಿರಿ. ಇದರ ಗುಟ್ಟೇನು ಸಾರ್?"

"ಇದರಾಗ ಗುಟ್ಟೇನು ಬಂತ್ರಿ. ನನ್ನ ಮಾತುಕತಿ, ಬರವಣಿಗೆ, ನಡವಳಿಕೆ ಇವೇನಾದಾವು ಇವುಕೂ, ನನ್ನ ವಯಸಿಗೂ ಸಂಬಂಧಿಲ್ರಿ, ನಮ್ಮ ದೇಶದಾಗ ಒಂದೊಂದು ವಯೋಮಾನಕ್ಕೆ ಒಂದೊಂದು ನಡವಳಿಕೆ ಇರಾಕಬೇಕು, ಅಂತ ಹೇಳಿ ನಿಯಮ ಮಾಡ್ಯಾರ. ಅದನ್ನ ಮುರಕೊಂಡ ಹೋದ್ರೆ ನಾವು ಆರಾಮಿರತೇವಿ, ಅಷ್ಟ."

"ನೀವೀಗ ಯಾವುದನ್ನ ಮುರದಿದ್ದಿರಿ ಸಾರ್?"

"ಅರವತ್ತರ ಅರಳುಮರಳು ಮುರುದು ಹತ್ತು ವರ್ಷಾತು."

"ಈ ಎಪ್ಪತ್ತು ವರ್ಷದಲ್ಲಿ ಹಿಂತಿರುಗಿ ನೋಡಿದ್ರೆ ಏನನಸ್ತದೆ ಸಾರ್?"

"ಭಾಳ ಮಂದಿ ಸಾವಿಗೆ ಸಂತಾಪ ಬರದೇನಿ. ಇನ್ನ ರಗಡಿ ಮಂದಿಗೆ ಬರಿಬೇಕಲ್ಲಪ್ಪಾ ಅನಸತೈತಿ."

"ನೀವು ಸಂತಾಪ ಬರಿಯೋ ಮಂದಿ ಬಹಳ ಜನ ಉಳಿದಿಲ್ಲವಲ್ಲ ಸಾರ್?"

"ಏ, ಭಾಳ ಮಂದ್ಯದಾರ. ಪುರೋಹಿತರ ಪೈಕಿನೆ ಒಂದು ಡಜನ್ ಅದಾರ. ರಾಜಕಾರಣದಾಗ ಮೂರು ನಾಕು ಮಂದಿ ಅದಾರ. ಸಾಹಿತ್ಯ ಲೋಕದಾಗ ಆಯುಸ್ಸು ಮುಗಿಸಿ ಹೋಗೋ ಮಂದಿಗಿಂತ ಲಬಕ್ಕನ ಹೋಗೋ ಮಂದಿ ಭಾಳದಾರ."

"ಅದರಲ್ಲೂ ಬಂಡಾಯದೋರು ಬೇಗ ಹೋಗ್ತಾರಲ್ಲ ಸಾರ್?"

"ಹೌದ್ರಿ. ನವ್ಯೋದಯದವರು ಪಿಂಚಣಿ ತೊಗಂಡು ಆರಾಮಗಿದ್ದಾಗ್ಲೆ ನವ್ಯದವುರು, ಬಂಡಾಯದವರು ಕೂಡೇ ಹೊಂಟ ಹೋದರ್ರಿ."

"ಸಾಹಿತ್ಯ ಲೋಕದಲ್ಲಿ ನವ್ಯೋದಯ, ಪ್ರಗತಿಶೀಲ, ನವ್ಯ, ಬಂಡಾಯ ಅಂತ ಕೆಲವು ಕಾಲಘಟ್ಟಗಳವಲ್ಲಾ ಸಾರ್. ನಿಮ್ಮ ಬರವಣಿಗೆ, ಹೋರಾಟ, ಯಾವ ಘಟ್ಟದಲ್ಲಿ ತೀವ್ರವಾಗಿತ್ತು, ಸಾರ್?"

"ನೋಡಿ ಇವರೆ, ನಾವು ಯಾವ ಕಾಲಘಟ್ಟದಾಗೂ ಎರಡೂ ಕಾಲಿಟ್ಟವರಲ್ಲ, ಒಂದೊಂದೇ ಕಾಲಿಟ್ಟು ಹಿಂದ ತಗದೇವಿ."

"ಯಾಕ್ ಸಾರ್?"

"ಯಾಕ ಅಂದ್ರ, ಒಂದು ಲೇಬಲ್ ಹಚಗೊಂಡು ಬರಿಯಾಕೂದಂದ್ರ, ನನಗಾಗುದಿಲ್ರಿ. ಮೊದಲಿಕ ನವ್ಯೋದಯದವರು ಬರಿಯಕತ್ತಿದ್ರು. ಅವುರಿಗೆ ಆಗ ಲೇಬಲ್ ಇರಲಿಲ್ಲ. ಆ ನಮ್ಮ ವಿಮರ್ಶಕರಿಗೆ ಯಂಗೋ ಏನೊ ನವ್ಯೋದಯದವರು ಅನ್ನೊ ಲೇಬಲ್ ಸಿಕ್ತು. 'ಏ ನಮಗ ಲೇಬಲ್ ಸಿಕ್ತು' ಅಂತ್ಹೇಳಿ ಬರದು ಬರದು ಸುಸ್ತಾದರ್ರಿ."

"ಅದ್ರು ಇವತ್ತಿಗೂ ಅವರನ್ನ ಓದಬವುದಲ್ಲ ಸಾರ್."

"ಕೆಲವು ಮಂದಿನ್ನ ಓದಬವುದು ಅಷ್ಟರಿ. ಇನ್ನ ಕೆಲವು ಮಂದಿ ಪುಸ್ತಕ ತೊಗಂಡು ಸಂತಾಪ ಸೂಚನೆ ಮಾಡಿ ಮುಂದ ಹೋಗಬವುದು."

"ಆ ತರ ಬರದಿರೋರು ಪ್ರಗತಿಶೀಲರಲ್ಲವ ಸಾರ್?"

"ಪ್ರಗತಿಶೀಲರು ಬರಕೊಂಡೆ ಬದುಕ್ತೇವಿ ಅಂತ ಹೊಂಟರ್ರಿ. ಅದಕ ಅಂಗ ಬರದಾರ. ಪಾಪ ಮೊದಲಕ್ಕ ತಮ್ಮ ಸುತ್ತಮುತ್ತ ಕಾಣೊ ಸಮಾಜ ಕುರುತು ಬರದ್ರು. ಅದು ಖಾಲಿ ಆತು. ಆನಂತರ ಗಟಾರ ಜೀವನ ಬರಿಬೇಕು ಅಂತ ಹೊಂಟರ್ರಿ. ಅನುಭವದ ಸಲುವಾಗಿ ಗಟಾರಕ್ಕೋದ್ರು, ವಳ್ಳಿ ಬರಲಿಲ್ಲವ್ರುರು. 'ಏ ಇಲ್ಲಿ ಭಾಳ ಆರಾಮೈತಿ' ಅಂತ ಅಲ್ಲೇ ಉಳುದ್ರು."

"ಅಲ್ಲಿಂದ ಅಂಗೇ ಹೊಂಟೋದರಲ್ಲ?"

"ಹೌದ್ರಿ. ಇನ್ನ ನವ್ಯದವರಿಗೆ ಅನಾಥಪ್ರಜ್ಞೆ ಅಮರಿಕೊಂತು. ಏನು ನೋಡಿದ್ರೂ ಚಂದ ಕಾಣ್ತಿರಲಿಲ್ಲ ಅವ್ರುರಿಗೆ. ಆದ್ರಿಂದ ಒಳಗೋದ್ರು, ವಳ್ಳಿ ಬರಲಿಲ್ಲವ್ರುರು. ನಾವ್ಯೊಂದಿಷ್ಟು ಮಂದಿ ಹೊರಬಂದು ಬಂಡಾಯದ ಕಡೆ ಹೊಂಟವಿ."

"ಅಂಗಾದ್ರೆ ನಿಮ್ಮ ಬಂಡಾಯ ಮಧ್ಯಂತರದ್ದ ಸಾರ್?"

"ಇಲ್ರೀ. ಬಂಡಾಯ ನನ್ನ ಮನೋಧರ್ಮ. ನಾ ಪೆನ್ನ ತೊಗಂಡ ಕೂಡಲೇ ಹೊರಬಂದಿದ್ದೆ ಬಂಡಾಯ. ಧಾರವಾಡದಾಗ ಬೇಂದ್ರೆ, ಜೋಶಿ ಮತ್ತವರ ಬಳಗ, ಆನಂತರ ಸಿ.ಪ. ಶೆಟ್ಟಿ, ಗಿರಡ್ಡಿ, ಮಾಕು, ದೇಕು, ಗೋಕಾಕ್ ಇವರ ವಿರುದ್ಧ ನನ್ನ ಬಂಡಾಯ ಎಂದೂ ಇದ್ದದ್ದೆ. ಅದಕ ನೋಡ್ರಿ ಎಮರ್ಜೆನ್ಸಿಲಿ ನಾ ಒಬ್ಬವನೇ ಜೇಲಿಗೆ ಹೋದದ್ದು."

"ಆಗ ಇಡೀ ಧಾರವಾಡ ಖುಷಿಪಡ್ತಂತಲ್ಲಾ ಸಾರ್?"

"ನಾ ಹೊರಬಂದಾಗ ಅಷ್ಟೇ ಬೇಸರಾತು ಅವುರಿಗೆ."

"ಜೈಲಲ್ಲಿ ನೀವು ಆರೆಸೆಸ್ಸಿನವರ ಜೊತೆಗಿದ್ರಂತೆ?"

"ಜೈಲಂದ್ರ ಮುಗಿತಲ್ರಿ. ಅದು ಪಬ್ಲಿಕ್ ಪಡಖಾನಿ ಇದ್ದಂಗ. ಅಲ್ಲಿಗೆ ದರವ್ರೊಬ್ಬರೂ ಬರತಾರ. ಅಂಗ ಚೆಡ್ಡಿ ಹುಡ್ರು ಬಂದಿದ್ರು. ಕೆಲವುರು ನಾ ಆರೆಸ್ಸೆಸ್ಸಲ್ಲ ಅಂತ ಅಳಾಕತ್ತಿದ್ರು."

"ಆದ್ರಿವತ್ತು ಯಂಗೆ ನಗ್ತರ ನೋಡಿ ಸಾರ್."


"ಇಲ್ಲಿ ಯಾರ ನಗೂನೂ ಶಾಶ್ವತ ಅಲ್ಲರೀ. ಒಂದು ಕಾಲಕ್ಕ ಕಾಂಗ್ರೆಸ್‌ನವರು ಅಂದ್ರೆ ಮಂದಿ ಹೆದರತಿದ್ದರಿ. ಆದ್ರ ಇವತ್ತು ಕಾಂಗ್ರೆಸ್ಸಿನವರು ಅಂದ್ರ ಒಂದೀಟು ದುಬ್ಬಕ್ಕರದು ಹೋಯೇನು ಅಂತ ಕೇಳೂ ಮಟ್ಟಕ್ಕವಾರ. ಅಂಗ ಈ ಚೆಡ್ಡಿಗಳ ನಗು ಎದೂರಪ್ಪ ಲಗಾಟ ಹೊಡದ ನಂತರ ಹಿಂಗೇ ಇರತ್ತೆ ಅಂತ ಹೇಳಾಕ ಬರೂದಿಲ್ಲ."


"ಇದೊಂತರ ಹತಾಶೆ ಮುಚ್ಚಿಡೋ ಅಭಿಪ್ರಾಯದಂಗೆ ಇದೆಯಲ್ಲ ಸಾರ್."

"ಹತಾಶೆ ಅನ್ನೊದು ನನ್ನ ಸನೇಕ ಸುಳದಿಲ್ಲರಿ. ಹತಾಶೆ ಏನಾರ ನನಗೆ ಇದ್ದಿದ್ರೆ ನನ್ನ ಅರವತ್ತನೇ ವರ್ಷದ ಅದ್ದೂರಿಯಿಂದ ಆಚರಿಸೊ ಏರ್ಪಾಡು ಮಾಡತಿದ್ದೆ."

"ಹೌದ ಸಾರ್?"

"ಹೌದ್ರಿ. ನನಗೆ ಕೆಲವರ ನೋಡಿದ ಕೂಡ್ಲೆ ಬ್ಯಾಸರ ಆಗ್ತೈತಿ. ಚಡ್ಡಿಗಳ ನೋಡಿದ್ರೆ, ಪುರೋಹಿತರ ನೋಡಿದ್ರೆ, ಪೊಲೀಸರ ನೋಡಿದ್ರೆ, ಇನ್ನು ಕೆಲವರದಾರ ಅವರನ್ನ ನೋಡಿದ್ರೆ, ಅವರ ಬರದದ್ದನ್ನ ಓದಿದ್ರೆ ನನ್ನ ಬ್ಯಾಸರ ಆಗ್ತೈತಿ. ಅದಕ ನೋಡ್ರಿ ನನಗೆ ಎಪ್ಪತ್ತಾದದ್ದು ನನಗೇ ಗುರತಾಗಲಿಲ್ಲ." ■





ನಾಡಿನ ದೌರ್ಭಾಗ್ಯವೋ, ಕನ್ನಡಿಗರ ಕರ್ಮವೋ? ಅಂತೂ ಯಡ್ಡಿ ಒಡೆತನದ ಬಿಜೆಪಿ ಸರ್ಕಾರ ಬಳ್ಳಾರಿಯ ಗಣಿಕಳ್ಳ ಮಂತ್ರಿಗಳ ಮೇಲಿದ್ದ ಅರ್ಧ ಡಜನ್ ಕ್ರಿಮಿನಲ್ ಕೇಸುಗಳನ್ನು ವಾಪಸ್ಸು ಪಡೆದು, ಜೊತೆಗೆ ಮೂರು ಕಳ್ಳ ಗಣಿಗಳಿಗೆ ಎಂ.ಎಲ್. ಅಂದರೆ ಮೈನಿಂಗ್ ಲೈಸೆನ್ಸ್ ನೀಡುವ ಮೂಲಕ ಬಳ್ಳಾರಿ ಪಾತಕಿಗಳಿಗೆ ಮಣಿದಂತಾಗಿದೆ. ಗಣಿರೆಡ್ಡಿಗಳು ಬೇನಾಮಿಯಾಗಿ ಕೈ ಹಾಕಿದ್ದ ಬಳ್ಳಾರಿ ರಕ್ಷಿತಾರಣ್ಯದ ವ್ಯಾಪ್ತಿಗೆ ಬರುವ ಈ ಮೂರು ಕಳ್ಳ ಗಣಿಗಳ ಸಮಗ್ರ ವಿವರಗಳಿನ್ನೂ ಬಯಲಾಗಬೇಕಿದೆ.

ರಾ. ಸೋಮನಾಥ್

ಗಣಿಕಳ್ಳರಿಗೆ ಕ್ಲೀನ್ ಚಿಟ್

ಯಡಿಯೂರಪ್ಪ ನಮ್ಮ ಪ್ರಶ್ನಾತೀತ ನಾಯಕರು. ಬಿಜೆಪಿ ಇನ್ನು ನಾಲ್ಕು ವರ್ಷವಲ್ಲ ನಲವತ್ತು ವರ್ಷಗಳ ಕಾಲ ಅಧಿಕಾರದಲ್ಲಿರುತ್ತದೆ. ಈ ಬಗ್ಗೆ ಯಾವುದೇ ಅನುಮಾನ ಬೇಡ...!


ನಿನ್ನೆ ಮೊನ್ನೆಯತನಕ ತಮ್ಮ ಸೋಮಶೇಖರ ರೆಡ್ಡಿಯನ್ನು ಛೂ ಬಿಟ್ಟು ಮುಖ್ಯಮಂತ್ರಿ ಯಡ್ಡಿಯ ವಿರುದ್ಧ ವಾಚಾಮಗೋಚರ ಬೈಸುತ್ತಿದ್ದ ಗಣಿಕಳ್ಳ ಜನಾರ್ದನ ರೆಡ್ಡಿಯ ಬಾಯಿಯಿಂದ ಜೂನ್ 24ರ ಬುಧವಾರದಂದು ಹೊರ ಬಿದ್ದ ನುಡಿಮುತ್ತುಗಳಿವು. ಅಲ್ಲಿಗೆ ಆರು ದಿನಗಳ ಹಿಂದೆ ಅಂದರೆ ಜೂನ್ 18ರ ಗುರುವಾರ ಜರುಗಿದ ಯಡ್ಡಿ ಸಚಿವ ಸಂಪುಟ ಸಭೆಯು ಎಸಗಿದ ಕುಚೋದ್ಯಕ್ಕೂ ಈಗ ಗಣಿ ರೆಡ್ಡಿಯ ಬಾಯಿಯಿಂದ ಹೊರಬಿದ್ದ 'ಪರಮಸತ್ಯ'ಕ್ಕೂ ಇರುವ ಕೊಳಕು ಸಂಬಂಧ ಎಂಥವರಿಗೂ ಅರ್ಥವಾಗಲೇಬೇಕು.

ನಾಡಿನ ದೌರ್ಭಾಗ್ಯವೋ, ಕನ್ನಡಿಗರ ಕರ್ಮವೋ? ಅಂತೂ ಯಡ್ಡಿ ಒಡೆತನದ ಬಿಜೆಪಿ ಸರ್ಕಾರ ಬಳ್ಳಾರಿಯ ಗಣಿಕಳ್ಳ ಮಂತ್ರಿಗಳ ಮೇಲಿದ್ದ ಅರ್ಧ ಡಜನ್ ಕ್ರಿಮಿನಲ್ ಕೇಸುಗಳನ್ನು ವಾಪಸ್ಸು ಪಡೆದು, ಜೊತೆಗೆ ಮೂರು ಕಳ್ಳ ಗಣಿಗಳಿಗೆ ಎಂ.ಎಲ್. ಅಂದರೆ ಮೈನಿಂಗ್ ಲೈಸೆನ್ಸ್ ನೀಡುವ ಮೂಲಕ ಬಳ್ಳಾರಿ ಪಾತಕಿಗಳಿಗೆ ಮಣಿದಂತಾಗಿದೆ. ಗಣಿರೆಡ್ಡಿಗಳು ಬೇನಾಮಿಯಾಗಿ ಕೈ ಹಾಕಿದ್ದ ಬಳ್ಳಾರಿ ರಕ್ಷಿತಾರಣ್ಯದ ವ್ಯಾಪ್ತಿಗೆ ಬರುವ ಈ ಮೂರು ಕಳ್ಳ ಗಣಿಗಳ ಸಮಗ್ರ ವಿವರಗಳಿನ್ನೂ ಬಯಲಾಗಬೇಕಿದೆ. ಆದರೆ ಗಣಿಕಳ್ಳರ ಮೇಲಿದ್ದ ಕ್ರಿಮಿನಲ್ ಕೇಸುಗಳಿದ್ದವಲ್ಲ; ಅದ್ಯಾವುದೂ ರೈತರ ಸಮಸ್ಯೆಗಳ ವಿರುದ್ಧವಾಗಲಿ, ನೆಲ-ಜಲದ ಉಳಿವಿಗಾಗಲಿ, ಶೋಷಿತರ ಪರ ನ್ಯಾಯಕ್ಕಾಗಿ ನಡೆಸಿದ ಹೋರಾಟದಲ್ಲಿ ಪೊಲೀಸರು ಹಾಕಿದ ಕೇಸುಗಳಾಗಿರಲಿಲ್ಲ.

ಧರಣಿ, ಪ್ರತಿಭಟನೆ ನಡೆಸಿ ಪೊಲೀಸರು ಹಾಕಿದ ಕೇಸು ಹೊತ್ತು ಇವತ್ತಿಗೂ ಕೋರ್ಟು, ಜೈಲೆನ್ನದೇ ಅಲೆಯುತ್ತಿರುವ ರೈತ, ದಲಿತ, ಕನ್ನಡಪರ ಕಾರ್ಯಕರ್ತರೇ ನಾಚುವಂತೆ ಬಳ್ಳಾರಿ ಪಾತಕಿಗಳ ಅರ್ಧ ಡಜನ್ ಕ್ರಿಮಿನಲ್ ಕೇಸುಗಳನ್ನು ಯಡ್ಡಿ ಸರ್ಕಾರ ಹಿಂತೆಗೆದುಕೊಂಡಿದೆ.

ಈ ಪೈಕಿ ಮೊದಲನೇ ಕೇಸೇ ಓಬಳಾಪುರಂ ಕಾಡಿಗೆ ನುಗ್ಗಿ ಸುಗ್ಗಲಮ್ಮ ದೇವಸ್ಥಾನವನ್ನು ನೆಲಸಮಗೊಳಿಸಿದ ಕ್ರಿಮಿನಲ್ ಕೇಸು. 2006ರಲ್ಲಿ ಕರ್ನಾಟಕದ ಗಡಿಯ ಓಬಳಾಪುರಂ ಕಾಡಿನಲ್ಲಿದ್ದ ಸುಗ್ಗಲಮ್ಮ ದೇವಸ್ಥಾನದ ಮೇಲೆ ಬುಲ್ಡೋಜರ್ ನುಗ್ಗಿಸಿ ಧ್ವಂಸಗೊಳಿಸಿದ ಜನಾರ್ದನ ರೆಡ್ಡಿ ಗ್ಯಾಂಗ್ ವಿರುದ್ಧ ಅಕ್ಕಪಕ್ಕದ ಗ್ರಾಮಸ್ಥರೇ ಬಳ್ಳಾರಿ ಗ್ರಾಮಾಂತರ ಪೊಲೀಸರಿಗೆ ದೂರು ಕೊಡುತ್ತಾರೆ. ಮೊದಲು ದೂರುಕೊಟ್ಟವನು ಲಂಬಾಣಿಗರ ಮುಂಗ್ಯಾ ನಾಯಕ್.

ಗಡಿಯೇ ಸ್ಪಷ್ಟವಾಗಿಲ್ಲದ ಕಾರಣ ಮೊದಲು ಕೇಸು ದಾಖಲು ಮಾಡಿಕೊಂಡ ಪೊಲೀಸರು ಓಬಳಾಪುರಂ ಮೈನಿಂಗ್ ಕಂಪೆನಿಯ ಮಾಲೀಕರ ಪೈಕಿ ಒಬ್ಬನಾದ ನಾರಾಯಣ ರೆಡ್ಡಿಯನ್ನು ಮೊದಲ ಆರೋಪಿಯನ್ನಾಗಿಸಿ ಎಫ್‌ಐಆರ್ ದಾಖಲಿಸಿದ್ದಾರೆ. ಜೊತೆಗೆ ಗಾಲಿ ಜನಾರ್ದನ ರೆಡ್ಡಿ ಮತ್ತು ಓಬಳಾಪುರಂ ಮೈನಿಂಗ್ ಕಂಪೆನಿಯ ಮತ್ತೊಬ್ಬ ಪಾಲುದಾರನಾದ ಆಂಧ್ರದ ರಾಯದುರ್ಗದ ಶಾಸಕ ರಾಮಚಂದ್ರ ರೆಡ್ಡಿಯನ್ನೂ ಆರೋಪಿಗಳನ್ನಾಗಿ ಸೇರಿಸಿದ್ದಾರೆ. ಬಿ. ಶ್ರೀರಾಮುಲು ಕೂಡಾ ಈ ಕೇಸಿನ ಆರೋಪಿಗಳಲ್ಲೊಬ್ಬ.



ಇವತ್ತಿಗೂ ಬಳ್ಳಾರಿಯ ನ್ಯಾಯಾಲಯದಲ್ಲಿರುವ ಈ ಕೇಸನ್ನು ಮೊನ್ನಿನ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಯಡ್ಡಿ ಸರ್ಕಾರ ವಾಪಸ್ಸು ಪಡೆದಿದೆ. ಅದಕ್ಕೆ ಮುಖ್ಯಮಂತ್ರಿಯೇ ಕೊಟ್ಟ ಕಾರಣವೆಂದರೆ ಈ ಸುಗ್ಗಲಮ್ಮ ದೇವಸ್ಥಾನ ಆಂಧ್ರದ ಗಡಿಯೊಳಕ್ಕೆ ಬರುತ್ತದೆಯಾದ್ದರಿಂದ ಇದಕ್ಕೂ ಕರ್ನಾಟಕಕ್ಕೂ ಏನೇನೂ ಸಂಬಂಧವಿಲ್ಲ!

ಹಾಗಿದ್ದರೆ ಬಳ್ಳಾರಿ ಗ್ರಾಮಾಂತರ ಪೊಲೀಸರು ಎಫ್‌ಐಆರ್ ಹಾಕಿದ್ದೇಕೆ? ಕರ್ನಾಟಕ ಮತ್ತು ಆಂಧ್ರದ ಗಡಿಯ ಜಂಟಿ ಸರ್ವೆಯೇ ನಡೆಯದೇ ಅದನ್ನು ಆಂಧ್ರಕ್ಕೆ ಸೇರಿದ್ದೆಂದು ಯಾವ ಆಧಾರದ ಮೇಲೆ ಮುಖ್ಯಮಂತ್ರಿ ನಿರ್ಧರಿಸುತ್ತಾರೆ? ಹಾಗೊಮ್ಮೆ ಸುಗ್ಗಲಮ್ಮ ದೇವಸ್ಥಾನ ಆಂಧ್ರಕ್ಕೆ ಸೇರಿದ್ದೆಂದು ಕರ್ನಾಟಕವೇ ಪ್ರತಿಪಾದಿಸುವುದಾದರೆ ಕೇಸನ್ನು ಸಂಬಂಧಪಟ್ಟ ಆಂಧ್ರದ ಪೊಲೀಸ್ ಠಾಣೆಗೆ ವರ್ಗಾಯಿಸಬೇಕೇ ಹೊರತು ಅದನ್ನು ವಾಪಸ್ಸು ಪಡೆಯಲು ಕರ್ನಾಟಕ ಸರ್ಕಾರಕ್ಕೆ ಯಾವ ಹಕ್ಕಿದೆ?

ಸುಗ್ಗಲಮ್ಮ ದೇವಸ್ಥಾನದ ಪ್ರಕರಣ ಒತ್ತಟ್ಟಿಗಿರಲಿ, ಜೂನ್ 18ರ ಸಂಪುಟ ಸಭೆ ಹಿಂಪಡೆದ ಎರಡನೇ ಕೇಸಿದೆಯಲ್ಲ; ಅದರಲ್ಲಿ ಆರೋಗ್ಯ ಮಂತ್ರಿ ರೌಡಿ ಶ್ರೀರಾಮುಲುವೇ ಮೊದಲ ಆರೋಪಿ. ಬಳ್ಳಾರಿಯ ಕೌಲಬಜಾರ್ ಪೊಲೀಸ್ ಠಾಣೆಯ ಎಫ್‌ಐಆರ್ ನಂಬರ್ 0112ರ ಪ್ರಕಾರ ದಿನಾಂಕ 13-07-1997ರಂದು ಬಿ. ನಾಗರಾಜ್ ಎಂಬ ವ್ಯಕ್ತಿಯ ಮನೆಗೆ ನುಗ್ಗಿ ಮಾರಕ ಆಯುಧದಿಂದ ಮಾರಣಾಂತಿಕ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ ಕೇಸು. ಐಪಿಸಿ ಸೆಕ್ಷನ್‌ಗಳಾದ 143, 147, 148, 324, 506, 504 ನಂಥ ಗಂಭೀರ ಪ್ರಕರಣಗಳಿರುವ ಈ ಕೇಸನ್ನು ಮುಖ್ಯಮಂತ್ರಿಯೇ ನಿಂತು ವಾಪಸ್ಸು ಪಡೆಯುತ್ತಾರೆಂದರೆ ಏನರ್ಥ?



ಇದಲ್ಲದೇ ಸರ್ಕಾರ ವಾಪಸ್ಸು ಪಡೆದ ಮತ್ತೊಂದು ಕೇಸು ಮಾರಕ ಆಯುಧ ಬಳಸಿ ಹಲ್ಲೆ ನಡೆಸಿದ ಗೂಂಡಾಗಿರಿಗೆ ಸಂಬಂಧಪಟ್ಟದ್ದು. ಕೌಲ್ ಬಜಾರ್ ಪೊಲೀಸ್ ಠಾಣೆಯ ಎಫ್‌ಐಆರ್ ನಂಬರ್ 0300 ಪ್ರಕಾರ ದಿನಾಂಕ 4-09-2000ರಂದು ಸರಿಸುಮಾರು ಹದಿನೈದು ಜನರ ಗ್ಯಾಂಗ್ ಕಟ್ಟಿಕೊಂಡು ಕೃಷ್ಣಾರೆಡ್ಡಿಯ ಮನೆಗೆ ನುಗ್ಗಿದ ಶ್ರೀರಾಮುಲು ಭಯಾನಕ ದಾಳಿ ನಡೆಸಿದ್ದ. ಕೌಲ್‌ಬಜಾರ್ ಪೊಲೀಸರು ಆವತ್ತು ಶ್ರೀರಾಮುಲು ಮತ್ತಾತನ ಗ್ಯಾಂಗ್‌ಅನ್ನು ಬಂಧಿಸಿ ಲಾಕಪ್ಪಿಗೆ ಹಾಕಿದ್ದರು.

ಇದು ಗೂಂಡಾಗಿರಿಯಲ್ಲದೇ ಮತ್ತೇನಲ್ಲ. ಯಾವ ಪುರುಷಾರ್ಥಕ್ಕೆ ಯಡ್ಡಿ ಸರ್ಕಾರ ಇಂಥ ಹೀನ ಕ್ರಿಮಿನಲ್ ಕೇಸನ್ನು ವಾಪಸ್ಸು ಪಡೆಯುತ್ತದೆ? ಇದೇನು ಜನಪರ ಹೋರಾಟವೇ? ಅಥವಾ ನ್ಯಾಯಕ್ಕಾಗಿ ನಡೆಸಿದ ಪ್ರತಿಭಟನೆಯೇ?

ಆವತ್ತಿನ ಮೊಯ್ಲಿಯೆಲ್ಲಿ ಇವತ್ತಿನ ಯಡ್ಡಿಯೆಲ್ಲಿ?

ಮೊಯ್ಲಿ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಆರೋಗ್ಯ ಮಂತ್ರಿಯಾಗಿದ್ದ ಎಚ್.ಎಂ. ರೇವಣ್ಣನವರ ಮೇಲೂ ಸಣ್ಣದೊಂದು ಕ್ರಿಮಿನಲ್ ಕೇಸಿತ್ತು. ಅದು ಎಂಥಾ ಕ್ಷುಲ್ಲಕ ಕೇಸೆಂದರೆ ಚುನಾವಣಾ ಸಂಬಂಧಿ ಗಲಾಟೆಯೊಂದರಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮಾಡಿದ ತಪ್ಪಿಗೆ ಅನ್ಯಾಯವಾಗಿ ರೇವಣ್ಣನವರ ಹೆಸರನ್ನು ಆಗ ಬಿಜೆಪಿ ಶಾಸಕರಾಗಿದ್ದ ಮಾಗಡಿ ಬಾಲಕೃಷ್ಣರ ಬೆಂಬಲಿಗರು ಸೇರಿಸಿಬಿಟ್ಟಿದ್ದರು.

ಮತಗಟ್ಟೆಯೊಂದಕ್ಕೆ ನುಗ್ಗಿ ಮತಪತ್ರಗಳನ್ನು ಸುಟ್ಟುಹಾಕಿದ ಕೇಸದು. ಪ್ರಕರಣ ಕ್ಷುಲ್ಲಕವೇ ಆದರೂ ಕೇಸು ಕೇಸೆ. ಇದನ್ನೇ ಮುಂದಿಟ್ಟುಕೊಂಡು ಮಂತ್ರಿಯೊಬ್ಬರ ಮೇಲೆ ಕ್ರಿಮಿನಲ್ ಕೇಸಿದೆಯಾದ್ದರಿಂದ ರೇವಣ್ಣ ರಾಜೀನಾಮೆ ಕೊಡಬೇಕೆಂದು ಆವತ್ತು ಬಿಜೆಪಿ ನಾಯಕರಾಗಿದ್ದ ಇದೇ ಯಡಿಯೂರಪ್ಪ ಬೊಬ್ಬೆಯಿಟ್ಟರು.





ಇವತ್ತಿನ ಯಡ್ಡಿಯಂತಾಗಲಿ ಬಿಜೆಪಿಯಂತಾಗಲಿ ಆವತ್ತು ಮುಖ್ಯಮಂತ್ರಿಯಾಗಿದ್ದ ಮೊಯ್ಲಿ ಲಜ್ಜೆಗೆಟ್ಟಿದ್ದರೆ ಕ್ಯಾಬಿನೆಟ್ ಸಭೆ ಸೇರಿ ರೇವಣ್ಣನವರ ಮೇಲಿದ್ದ ಕ್ರಿಮಿನಲ್ ಕೇಸನ್ನು ವಾಪಸ್ಸು ಪಡೆಯಬಹುದಿತ್ತು. ಮೊಯ್ಲಿ ಹಾಗೆ ಮಾಡದೇ ತಮ್ಮ ಶಿಷ್ಯ ರೇವಣ್ಣನ ರಾಜೀನಾಮೆ ಪಡೆದು ಆದರ್ಶ ಮೆರೆದರು.

ಆವತ್ತಿದ್ದ ಕಾಂಗ್ರೆಸ್ ಸರ್ಕಾರವೆಲ್ಲಿ? ಮುಖ್ಯಮಂತ್ರಿ ಮೊಯ್ಲಿಯೆಲ್ಲಿ? ಈಗಿನ ರಾಮಭಕ್ತರ ಬಿಜೆಪಿ ಸರ್ಕಾರದ ಆದರ್ಶವೆಲ್ಲಿ? ಸಣ್ಣ ಕ್ರಿಮಿನಲ್ ಕೇಸಿಗೆ ಮಂತ್ರಿಗಿರಿಯನ್ನೇ ತೊರೆದ ರೇವಣ್ಣನಿಗಿಂತಲೂ ಸಾವಿರ ಪಟ್ಟು ಕ್ರಿಮಿನಲ್‌ಗಳಾದ ಶ್ರೀರಾಮುಲು, ಜನಾರ್ದನ ರೆಡ್ಡಿ, ಸೋಮಶೇಖರ ರೆಡ್ಡಿ ಇತ್ಯಾದಿಗಳು ಮಂತ್ರಿಗಳಾಗುವುದಿರಲಿ, ಹಾಗೆ ನೋಡಿದರೆ ಬಿಜೆಪಿ ಸದಸ್ಯರಾಗುವುದಕ್ಕೂ ಲಾಯಕ್ಕಿರಬಾರದಿತು

ನಿಜಕ್ಕೂ ಬಿಜೆಪಿ ಒಂದು ತತ್ವನಿಷ್ಠ ನೈತಿಕತೆಯ ಪ್ರತಿಪಾದಕ ಪಕ್ಷವಾಗಿದ್ದರೆ ಗಣಿ ರೆಡ್ಡಿಗಳಾಗಲಿ, ಶ್ರೀರಾಮುಲು ಆಗಲಿ ಮಂತ್ರಿಗಳಾಗಬಾರದಿತ್ತು. ನಾಚಿಕೆಗೇಡೆಂದರೆ ಎರಡು ಡಜನ್ ಕ್ರಿಮಿನಲ್ ಕೇಸುಗಳಿರುವ, ರೌಡಿ ಪಟ್ಟಿಯಲ್ಲಿರುವವನನ್ನೇ ಮಂತ್ರಿ ಮಾಡಿ ಆತನ ಮೇಲಿದ್ದ ಹೀನ ಕೇಸುಗಳನ್ನೇ ವಾಪಸ್ಸು ಪಡೆಯುವ ಬಿಜೆಪಿಗೆ ಕಾನೂನು ಸುವ್ಯವಸ್ಥೆಯ ಬಗ್ಗೆ ಮಾತಾಡುವ ಯಾವ ನೈತಿಕ ಹಕ್ಕಿದೆ?

ಆವತ್ತು ಎಚ್.ಎಂ. ರೇವಣ್ಣನವರ ರಾಜೀನಾಮೆಗೆ ಒತ್ತಾಯಿಸಿ ಮೊಯ್ಲಿ ವಿರುದ್ಧ ಬೊಬ್ಬೆ ಇಟ್ಟಿದ್ದ ಯಡಿಯೂರಪ್ಪನವರಾಗಲಿ, ಆದರ್ಶ ಮಾತಾಡುವ ಈಶ್ವರಪ್ಪ, ರಾಮಚಂದ್ರಗೌಡ, ಶಂಕರಮೂರ್ತಿಯಂಥವರೇಕೆ ಬಾಯಿ ಮುಚ್ಚಿ ಕೂತಿದ್ದಾರೆ? ಪಾರ್ಲಿಮೆಂಟಿನ ಮೇಲೆ ದಾಳಿ ಮಾಡಿದ ಅಫ್ಜಲ್ ಗುರುಗೆ ನೇಣು ಹಾಕಬಹುದಾದರೆ ಡಜನ್ನುಗಟ್ಟಲೇ ಅಮಾಯಕರನ್ನು ಕತ್ತರಿಸಿದ ಶ್ರೀರಾಮುಲುಗೆ ಕನಿಷ್ಠ ಜೈಲು ಶಿಕ್ಷೆಯಾದರೂ ಬೇಡವೆ?

ಎಡ್ಡಿ ಸಂಪುಟ ವಾಪಸ್ಸು ಪಡೆದ ನಾಲ್ಕನೇ ಕೇಸಿನಲ್ಲೂ ಶ್ರೀರಾಮುಲುವೇ ಮೊದಲ ಆರೋಪಿ. ಬಜಾರ್ ಪೊಲೀಸ್ ಠಾಣೆಯ ಎಫ್ಐಆರ್ ನಂಬರ್ ರ ಪ್ರಕಾರ ದಿನಾಂಕ 14-4-2002ರಂದು ವ್ವಣ್ಣ ಎಂಬ ಕಾಂಗ್ರೆಸ್ ಕೌನ್ಸಿಲರ್‌ನನ್ನು ಬಳ್ಳಾರಿಯ ಗೇಟ್ ಬಳಿ ಅಡ್ಡಗಟ್ಟಿ ಮಾರಕ ಆಯುಧದಿಂದ ಯತ್ನಿಸಿದ್ದಾನೆ. ಶ್ರೀರಾಮುಲು ಸೇರಿದಂತೆ ಇತರೇ ಂದಿ ರೌಡಿಗಳ ಮೇಲೆ ಅಕ್ರಮಕೂಟ, ಕೊಲೆಯತ್ನ, ಹಲ್ಲೆ, ರಕ್ತಪಾತ, ಕೊಲೆ ಬೆದರಿಕೆ ಇತ್ಯಾದಿ ಗಳು ದಾಖಲಾಗಿರುವ ಈ ಕೇಸನ್ನೂ ಯಡ್ಡಿ ಲಜ್ಜೆಗೆಟ್ಟು ವಾಪಸ್ಸು ಪಡೆದಿದೆ.

ಗೆ ಸರ್ಕಾರ ಹಿಂಪಡೆದ ಐದನೇ ಕೇಸಿನಲ್ಲೂ ಮುಲುವೇ ಮೊದಲ ಆರೋಪಿ. ಕೌಲ್‌ಬಜಾರ್ ಸ್ ಠಾಣೆಯ ಎಫ್ಐಆರ್ ನಂ. 0004ರ ತವೆಂದರೆ, 2005ರ ಜನವರಿ ಹತ್ತರಂದು ಯಾಗಿದ್ದ ಶ್ರೀರಾಮುಲು ಹತ್ತುಮಂದಿಯ ಗ್ಯಾಂಗ್ ಷೇಕ್ ಇಸ್ಮಾಯಿಲ್ ಮೊಹಮದ್ ಭಾಷಾರ ಬಾಗಿಲನ್ನು ಮುರಿದು ನುಗ್ಗಿದ್ದೇ ಮಾರಕ ಧದಿಂದ ಹಲ್ಲೆ ನಡೆಸಿ ಮನೆಯಲ್ಲಿಟ್ಟಿದ್ದ ಪಾತ್ರೆ ಸಾಮಾನುಗಳನ್ನೆಲ್ಲ ರಸ್ತೆಗೆಸೆಯುತ್ತಾನೆ.


ಲುಗು ಸಿನಿಮಾ ಒಂದರ ಹುಸಿಬಿಸಿ ದೃಶ್ಯದಂತಿರುವ ರಣ ನಡೆದಾಗ ಶ್ರೀರಾಮುಲು ಎಮ್ಮೆಲ್ಲೆಯಾಗಿದ್ದ. ಬ್ಬ ಶಾಸಕ ಎಂಬ ಪರಿವೆ ಕೂಡ ಇಲ್ಲದೇ ಗಿರಿಗಿಳಿದ ಶ್ರೀರಾಮುಲು ವಿರುದ್ಧ ಇಂಥ ಕೇಸನ್ನು ಜವಾಬ್ದಾರಿಯುತ ಮುಖ್ಯಮಂತ್ರಿಯಾಗಿ ಯಡ್ಡಿ ಪಡೆಯಬಹುದಾ? ಹೋಗಲಿ ಯಡ್ಡಿ. ದ ಯಾವೊಬ್ಬ ಮಂತ್ರಿಗೂ ನಾಚಿಕೆಯಾಗಲಿಲ್ಲವೇ?

ಟವೆಂದರೆ ಯಡ್ಡಿ ಸಂಪುಟ ವಾಪಸ್ಸು ಪಡೆದ ಮುಲು ವಿರುದ್ಧದ ಪ್ರತಿಯೊಂದು ಕೇಸೂ ಕ್ರಿಮಿನಲ್ ಪ್ರತಿ ಕೇಸಿನಲ್ಲೂ ಮಾರಕ ಆಯುಧ ಬಳಸಿದ್ದಾನೆ. ವ್ವಾನೆ. ಪೆಟ್ಟು ತಿಂದವರೆಲ್ಲರ ರಕ್ತ ಹರಿದಿದೆ. ಮುಲು ಜೈಲಿಗೂ ಹೋಗಿ ಬಂದಿದ್ದಾನೆ. ಾದವರೆಲ್ಲ ತಿಂಗಳಾನುಗಟ್ಟಲೇ ಆಸ್ಪತ್ರೆಯಲ್ಲಿ ದೆ. ಈ ಪೈಕಿ ಬಳ್ಳಾರಿಯ ಬ್ರೂಸ್‌ಪೇಟೆ ಪೊಲೀಸ್ ಎಫ್ಐಆರ್ ನಂ. 0209ರ ಪ್ರಕಾರ ದಿನಾಂಕ —2001ರಂದು ಮುಂಡ್ಲೂರು ದಿವಾಕರ ಬಾಬು ಮಂಡ್ಲೂರು ನಾರಾಯಣರಾವ್ ಎಂಬಾತನನ್ನು ಮು ನಗರ ಸಭಾ ಕಚೇರಿಯಲ್ಲೇ ಶ್ರೀರಾಮುಲು ಥಳಿಸುತ್ತದೆ. ಸಾಲದಕ್ಕೆ ಚಿಟ್ಟಿಯ ಕಾರನ್ನು ಸೆಬ್ಬಿಸಿ ಕಚೇರಿಯಲ್ಲಿದ್ದ ಕುರ್ಚಿಗಳನ್ನೇ ವಾಗಿ ಬಳಸಿ ಇಡೀ ಕಚೇರಿಯನ್ನೇ ಧ್ವಂಸಗೊಳಿಸಿದೆ.

ಬರಿ, ಡಕಾಯಿತಿ, ಕೊಲೆಯತ್ನ, ಅಕ್ರಮಕೂಟ ಹೀನಾತಿಹೀನ ಕ್ರಿಮಿನಲ್ ಸೆಕ್ಷನ್‌ಗಳಿರುವ ಕೇಸಿದು. ನ ರೆಡ್ಡಿಯ ತಮ್ಮ ಸೋಮಶೇಖರ ರೆಡ್ಡಿ ಮತ್ತು ಐವರು ಕೌನ್ಸಿಲರ್‌ಗಳ ಜೊತೆ ಸೇರಿ ಶರ್ಮಾ ದಲಿತ ಕೌನ್ಸಿಲರ್ ಮೇಲೆ ಹಲ್ಲೆ ನಡೆಸಿ ಕೊಲೆ ಹಾಕಿದ್ದು (ಎಫ್ಐಆರ್ ನಂ 0210 ಬಜಾರ್ ಪೊಲೀಸ್ ಠಾಣೆ) 2004ರ ನಿಷೇಧಾಜ್ಞೆ ಸಿ ದಾಂಧಲೆ ನಡೆಸಿದ್ದು (ಎಫ್ಐಆರ್ ನಂ. ಬ್ರೂಸ್‌ಪೇಟೆ ಪೊಲೀಸ್ ಠಾಣೆ) ಕಳೆದ ವಿಧಾನಸಭಾ ಣೆಯಲ್ಲಿ ದಿನಾಂಕ 18-04-2008ರಂದು ಾಡ್ ಮನೆ ಮೇಲೆ ರೌಡಿ ಗ್ಯಾಂಗ್ ಸಮೇತ ಡೆಸಿದ್ದು, ಅನಿಲ್ ಲಾಡ್ ಮನೆ ಕಿಟಕಿ ಗಾಜು ಅವರ ಮೂರು ಕಾರುಗಳಿಗೆ ಬೆಂಕಿ ಹಚ್ಚಿದ್ದು ಆರ್ ನಂ.0043 ದಿನಾಂಕ 18-04-2008 ಬಜಾರ್ ಪೊಲೀಸ್ ಠಾಣೆ) ಇತ್ಯಾದಿಗಳೆಲ್ಲ ರು ಅನ್ಯಾಯವಾಗಿ ಹಾಕಿದ ಕೇಸುಗಳಾ? ಅಥವಾ ದ ವಿರುದ್ಧ ನಡೆಸಿದ ಹೋರಾಟಗಳಾ?

ತ್ರಿ ಕೇಸನ್ನು ವಾಪಸ್ಸು ಪಡೆದಿಲ್ಲ ಎಂಬುದನ್ನು ದಂಡ ಸಂಹಿತೆಯ ರಾಬರಿ, ಡಕಾಯಿತಿ, ತ್ನ, ಕೊಲೆಬೆದರಿಕೆ, ಮಾರಣಾಂತಿಕ ಹಲ್ಲೆ, ಗಿರಿ, ದೊಂಬಿ ಇತ್ಯಾದಿ ಎಲ್ಲಾ ಗಂಭೀರ ಪ್ರಕರಣಗಳನ್ನೂ ಯಡ್ಡಿ ಸರ್ಕಾರ ವಾಪಾಸ್ಸು . ಪ್ರಶ್ನೆಯೆಂದರೆ ಕ್ರಿಮಿನಲ್ ಓರ್ವ ಾದನೆಂದರೆ ಆತನಿಗೆ ಶಿಕ್ಷೆಯೇ ಇಲ್ಲವೇ? ಮಾನ್ಯನೊಬ್ಬ ಅಪರಾಧವೆಸಗಿದರೆ ಅದು ವಾಗುವುದಾದರೆ, ಹಾಗೇ ಅಪರಾಧವೆಸಗುತ್ತಲೇ ಮಂತ್ರಿಯಾಗಿಬಿಟ್ಟರೆ ಆತನ ಮೇಲಿರುವ ಕ್ರಿಮಿನಲ್ ಎಲ್ಲ ಸರ್ಕಾರ ವಾಪಸ್ಸು ಪಡೆಯಬಹುದಾ?

ಗಳು ಕ್ರಿಮಿನಲ್‌ಗಳನ್ನೆಲ್ಲ ಬಂಧಿಸುವುದಕ್ಕಾಗಲಿ, ಹಾಕುವುದಕ್ಕಾಗಲಿ ಇನ್ನು ಮುಂದೆ ಬಿಜೆಪಿ ಯಾವ ಅಧಿಕಾರವಿದೆ? ಬಿಜೆಪಿಗಳ ದೃಷ್ಟಿಯಲ್ಲಿ ಾ ಪುರುಷೋತ್ತಮ ಶ್ರೀರಾಮಚಂದ್ರನಿಗೂ ರೌಡಿ ಶ್ರೀರಾಮುಲುಗೂ ಯಾವುದೇ ವ್ಯತ್ಯಾಸವೇ?



ಚಾಣಕ್ಯ ಭಾರಧ್ವಾಜ್!

ಕರ್ನಾಟಕದ ರಾಜ್ಯಪಾಲರಾಗುವ ಮೊದಲು ಈ ಎಚ್.ಆರ್. ಭಾರಧ್ವಾಜ್ ಎಂಬ ಹರಿಯಾಣ ರಾಜ್ಯದ ಕಾಂಗ್ರೆಸ್ ಮನುಷ್ಯ ಎಲ್ಲೆಲ್ಲಿದ್ದ ಏನೇನು ಮಾಡಿದ್ದರೆಂಬ ಡೀಟೆಲ್ಸ್ ಈ ಸಂದರ್ಭದಲ್ಲಿ ಪರಿಶೀಲನೆಗೆ ಅರ್ಹವಾಗಿದೆ.

ಈಗ 72 ವಯಸ್ಸಿನ ಭಾರಧ್ವಾಜ್ 1982 ರಿಂದ ಇವತ್ತಿನವರೆಗೂ ಕಾಂಗ್ರೆಸ್ ಪಕ್ಷದಿಂದ ರಾಜ್ಯಸಭಾ ಸದಸ್ಯನಾಗಿದ್ದಾತ. ಮೊದಲಿಗೆ ಕಾನೂನು ಮತ್ತು ಸಂಸದೀಯ ಖಾತೆ, ನಂತರ ಯೋಜನಾ ಖಾತೆ ಕೊನೆಗೆ ಇತ್ತೀಚಿನವರೆಗೂ ಕಾನೂನು, ನ್ಯಾಯಾಂಗ ಹಾಗೂ ಕಂಪನಿ ವ್ಯವಹಾರಗಳ ಸಚಿವರಾಗಿದ್ದರು. ಭಾರಧ್ವಾಜ್ ಮೂಲತಃ ವಿವಾದಗಳ ರಾಜಕಾರಣಿ. ತನ್ನ ಕಾಂಗ್ರೆಸ್ ಹೈಕಮಾಂಡ್ ನಿಷ್ಠೆ ತೋರಿಸಲು ಸಿಬಿಐ ಬಂದ್ ಮಾಡಿಸಿದ್ದ ಬೋಫೋರ್ಸ್ ಹಗರಣದ ಆರೋಪಿ ಒಟ್ಟೊವಿಯೋ ಕಟ್ರೋಚಿಯ ಎರಡು ಬ್ಯಾಂಕ್ ಖಾತೆಗಳನ್ನು ಅವನಿಗೇ ಬಿಡಿಸಿಕೊಟ್ಟಿದ್ದರು.

ಇದು ನಡೆದದ್ದು ತೀರಾ ಇತ್ತೀಚೆಗೆ 2009ರ ಮಾರ್ಚ್‌ನಲ್ಲಿ!

ಇನ್ನೊಮ್ಮೆ ಈತ ಕಾನೂನು ಮಂತ್ರಿಯಾಗಿದ್ದಾಗಲೇ ಆಗಿನ ಮುಖ್ಯ ಚುನಾವಣಾ ಕಮಿಷನರ್ ಇನ್ನೊಬ್ಬ ಕಮಿಷನರ್ ನವೀನ್ ಚಾವ್ಲಾ ವಿರುದ್ಧ ಕೆಲ ಆರೋಪ ಹೊರಿಸಿ ದೂರು ನೀಡಿದ್ದರು. ಈ ನವೀನ್ ಚಾವ್ಲಾ ಮೇಲೆ ಮೊದಲಿನಿಂದಲೂ ಕಾಂಗ್ರೆಸ್ ಪರ ಎಂಬ ಆರೋಪಗಳಿವೆ. ಆದರೆ ಭರಧ್ವಾಜ್ ಚಾವ್ಲಾ ವಿರುದ್ಧ ಕ್ರಮ ಕೈಗೊಳ್ಳದೆ ಚುನಾವಣಾ ಕಮಿಷನರ್ ವಿರುದ್ಧವೇ ಟೀಕೆ ಮಾಡಿದ್ದರು. ಇನ್ನೊಮ್ಮೆ ಅಲಹಾಬಾದ್ ಹೈಕೋರ್ಟಿನ ನ್ಯಾಯಾಧೀಶ ಶ್ರೀವಾಸ್ತವ ಎಂಬಾತ ಭಗವದ್ಗೀತೆಯನ್ನು 'ರಾಷ್ಟ್ರಶಾಸ್ತ್ರ' ಎಂದು ಘೋಷಿಸುವಂತೆ ಸಲಹೆ ನೀಡಿದ್ದಾಗ ಕಾನೂನು ಸಚಿವನಾಗಿದ್ದ ಭಾರದ್ವಾಜ್ ಅದನ್ನು ಖಂಡಿಸಿ, ಗೇಲಿ ಮಾಡಿದ್ದರು.

ಅಂದರೆ ಭಾರಧ್ವಜ್ ಆಳದಲ್ಲಿ ಕಾಂಗ್ರೆಸ್ ನಿಷ್ಠೆ ಹಾಗೂ ಬಿಜೆಪಿಯ ಹಿಂದೂತ್ವದ ಅಜೆಂಡಾ ಬಗ್ಗೆ ಖಚಿತ ವಿರೋಧವಿದೆ ಎಂದಾಯಿತು. ಇನ್ನು ಮುಂದೆ ರೆಡ್ಡಿಯ ಭಿನ್ನಮತವೋ ಇಲ್ಲಾ ಸಂಘ ಪರಿವಾರದ ಹಿಂದೂತ್ವ ಅಜೆಂಡಾದ ಗಲಭೆಗಳೇನಾದರೂ ಸಂಭವಿಸಿದರೆ ಭರಧ್ವಾಜ್ ಸುಮ್ಮನೆ ಕುಳಿತಿರಲಾರರು ಎಂಬುದು ಸ್ಪಷ್ಟ. ರಾಮೇಶ್ವರ ಠಾಕೂರ್ ರಾಜ್ಯಪಾಲನಾಗಿದ್ದಾಗ ಬಿಜೆಪಿಗಳು ಚರ್ಚ್‌ಗಳ ಮೇಲೆ ದಾಳಿ ನಡೆಸಿ, ದೊಂಬಿ ಮಾಡಿದರೂ ಠಾಕೂರ್ ಯಾವುದೇ ಕ್ರಮ ತೆಗೆದುಕೊಳ್ಳದೆ ನಿಷ್ಕ್ರಿಯರಾಗಿದ್ದರ ಬಗ್ಗೆ ಕಾಂಗ್ರೆಸ್ ಹೈಕಮಾಂಡ್‌ಗೆ ಅಸಮಾಧಾನವಾಗಿತ್ತಂತೆ. ಈ ಠಾಕೂರ್ ಕಳೆದ ಡಿಸೆಂಬರ್‌ನಿಂದಲೂ ಸೋನಿಯಾ ಭೇಟಿಗಾಗಿ ಅಪಾಯಿಂಟ್‌ಮೆಂಟ್ ಕೇಳುತ್ತಿದ್ದರೂ ಅವಕಾಶ ನಿರಾಕರಿಸಿ ಈಗ ಬೇರೆಡೆಗೆ ಓಡಿಸಿದ್ದಾರೆ.


ಈ ಭಾರಧ್ವಾಜ್, ಠಾಕೂರ್ ಥರದ ಮನುಷ್ಯನಲ್ಲ- ಯಡ್ಡಿಗೂ ಇದು ಅರ್ಥವಾಗಿದೆ.

ಯಡ್ಡಿ ಮೇಲೆ ಭಾರಧ್ವಾಜ್ ಬಾಂಬ್

ಎಲ್ಲೋ, ಏನೋ ಯಡವಟ್ಟಾಗುತ್ತಿದೆ. ಇನ್ನೇನು ಭಿನ್ನಮತೀಯರ ಕಾಟ ನಿಂತು ಹೋಯಿತು ಅಂತಾ ನಿರಾಳವಾಗಿ ಶೋಭಾ ಕರಂದ್ಲಾಜೆ ಜೊತೆ ಕುಳಿತು ಸರ್ಕಾರಿ ಸಂಸಾರದ ಕಷ್ಟ-ಸುಖಗಳ ಬಗ್ಗೆ ಪ್ರೈವೇಟಾಗಿ ಮಾತಾಡಬೇಕೆನ್ನುವಷ್ಟರಲ್ಲೇ ಮುಖ್ಯಮಂತ್ರಿ ಯಡಿಯೂರಪ್ಪ ಕೆಟ್ಟ ಕನಸು ಕಂಡವರಂತೆ ದಿಗ್ಗನೆದ್ದು ಕುಳಿತಿದ್ದಾರೆ.

ಭಾರಧ್ವಾಜ್ ಎಂಬ ಕೆಟ್ಟ ಕನಸದು!

ಅಂದರಿಕಿ ಮಂಚಿವಾಡು ಅನಂತಯ್ಯ ಎಂಬಂತೆ ಇದುವರೆಗೂ ಇದ್ದ ರಾಜ್ಯಪಾಲ ರಾಮೇಶ್ವರ ಠಾಕೂರ್‌ರನ್ನು ದೆಹಲಿಯ ಕಾಂಗ್ರೆಸ್ ಜನ ಎತ್ತಂಗಡಿ ಮಾಡಿಸಿ ಅವರ ಜಾಗಕ್ಕೆ ಎಚ್.ಆರ್. ಭರಧ್ವಾಜ್ ಎಂಬ ನಿಷ್ಠಾವಂತ ಕಾಂಗ್ರೆಸ್ಸಿಗ ಹಾಗೂ ಕೋಮುವಾದಿ ವಿರೋಧಿ ರಾಜಕಾರಣಿಯನ್ನು ಕರೆತಂದು ಕರ್ನಾಟಕದ ರಾಜಭವನದಲ್ಲಿ ಪ್ರತಿಷ್ಠಾಪಿಸಿದ್ದಾರೆ.



ಇದು ಮುಂದಿನ ಮೂರ್ನಾಲ್ಕು ತಿಂಗಳೊಳಗಾಗಿ ಯಡ್ಡಿ ಕುರ್ಚಿಗೆ ಸಂಚಕಾರ ತರಲಿದೆ ಎಂಬ ರೂಮರ್‌ಗೂ ಕಾರಣವಾಗಿದೆ. ಈ ಮನುಷ್ಯ ಭಾರಧ್ವಾಜ್ ಬೆಂಗಳೂರು ತಲುಪುವ ಮೊದಲೇ ತೇಲಿ ಬಂದಿರುವ ಸುದ್ದಿ ಇದು. ಅಷ್ಟೇ ಅಲ್ಲ ಇದುವರೆಗೂ ಇದ್ದ ರಾಮೇಶ್ವರ ಠಾಕೂರ್‌ರ ಅವಧಿ ಇನ್ನೇನು ನವೆಂಬರ್‌ನಲ್ಲಿ ಮುಗಿಯುವುದಿತ್ತು. ಈತ ನಿಷ್ಪ್ರಯೋಜಕ ರಾಜ್ಯಪಾಲನಾಗಿದ್ದ ಎಂಬ ಬಗ್ಗೆ ಯಾರಿಗೂ ಅನುಮಾನಗಳಿರಲಿಲ್ಲ. ಆದರೂ ಇನ್ನೂ ನಾಲ್ಕು ತಿಂಗಳು ತಾನೆ ಇದ್ದು ಬಿಡಲಿ ಅಂತ ದೆಹಲಿ ಜನ ಯಾಕೆ ರಿಯಾಯಿತಿ ತೋರಲಿಲ್ಲ? ಅಷ್ಟು ಅರ್ಜೆಂಟಾಗಿ ಠಾಕೂರ್‌ನನ್ನು ಓಡಿಸಿ ಭಾರಧ್ವಾಜ್ ಎಂಬ ವಿವಾದಭರಿತ, ಕಾನೂನು ತಜ್ಞನನ್ನು ತಂದು ಕರ್ನಾಟಕದ ಮೇಲೇಕೆ ಕೂರಿಸುತ್ತಿದ್ದಾರೆ ಎಂಬ ಡೌಟು ಬಂದೇ ಬರುತ್ತದೆ ಅಲ್ಲವೇ?

ದೆಹಲಿ ರಾಜಕೀಯದ ಒಂದು ಮೂಲದ ಪ್ರಕಾರ ರೆಡ್ಡಿ ಬ್ರದರ್ಸ್ ಹಾಗೂ ಕಾಂಗ್ರೆಸ್‌ನ ಆಂಧ್ರ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ಸೇರಿಕೊಂಡು ರೂಪಿಸುತ್ತಿರುವ 'ಆಪರೇಷನ್ ಯಡ್ಡಿ' ಎಂಬ ಸ್ಕೆಚ್‌ನ ಒಂದು ಭಾಗವಾಗಿ, ಕಾಂಗ್ರೆಸ್ ಹೈಕಮಾಂಡಿನ ಆಶೀರ್ವಾದೊಂದಿಗೆ ಈ ಭಾರಾಧ್ವಜ್ ಕರ್ನಾಟಕಕ್ಕೆ ಕಾಲಿಡುತ್ತಿದ್ದಾರಂತೆ.

ಯಡ್ಡಿ ಬೆಚ್ಚಿ ಬಿದ್ದಿರುವುದು ಈ ಕಾರಣಕ್ಕೇನೆ!

ಕರ್ನಾಟಕದ ಬಿಜೆಪಿ ಸರ್ಕಾರ ಹಾಗೂ ಮುಖ್ಯಮಂತ್ರಿ ಯಡ್ಡಿ ಏನೇ ಸ್ವಂತ ಬಲದ ಮಾತಾಡಿದರೂ ಇವತ್ತು ಸರ್ಕಾರದ ಲಗಾಮು ರೆಡ್ಡಿ ಬ್ರದರ್ಸ್ ಕೈಲೇ ಇದೇ ಎಂಬುದಕ್ಕೆ ಪ್ರತೀ ದಿನ ಉದಾಹರಣೆಗಳು ಸಿಗುತ್ತಿವೆ. ರೆಡ್ಡಿಗಳ ದರ್ಪ ಅಟ್ಟಹಾಸದೆದಿರು ಯಡ್ಡಿ ಪೊಲೀಸ್ ಪೇದೆ ಥರ ದಯನೀಯವಾಗಿ ನಿತ್ಯ ಸೆಲ್ಯೂಟ್ ಹೊಡೆಯುತ್ತಾ ನಿಲ್ಲಬೇಕಾಗಿ ಬಂದಿದೆ. ಪರಿಸ್ಥಿತಿ ಹೀಗಿದ್ದಾಗಲೂ ಗಡಿ ಸರ್ವೆ ವಿಚಾರದಲ್ಲಿ ಅಪ್‌ಸೆಟ್ ಆಗಿರುವ ರೆಡ್ಡಿಗಳಿಗೆ ಈಗ ಯಡ್ಡಿಗಿಂತ ತಮ್ಮ ಸಾಮ್ರಾಜ್ಯ ರಕ್ಷಣೆಯೇ ಮುಖ್ಯವಾಗಿಬಿಟ್ಟಿದೆ. ಸರ್ವೆ ರಿಪೋರ್ಟ್ ಬಂದ ನಂತರ ರೆಡ್ಡಿಗಳ ಗಣಿ ದಂಧೆಯ ಹಣೆಬರಹ ನಿರ್ಧರಿಸುವುದು ಕೇಂದ್ರ ಸರ್ಕಾರ ತಾನೆ? ಹಾಗಾಗಿ ರೆಡ್ಡಿಗಳು 'ಆಪರೇಷನ್ ಯಡ್ಡಿ'ಗೆ ರೆಡಿಯಾಗುತ್ತಿದ್ದಾರೆ ಎನ್ನಲಾಗಿದೆ.

ಕಾದಿದೆಯಾ ಅವಿಶ್ವಾಸವೆಂಬ ಬ್ರಹ್ಮಾಸ್ತ್ರ?

ಈ ಮೊದಲೆಲ್ಲಾ 'ಭಿನ್ನಮತೀಯರ ಆರ್ಭಟ ಜೋರಾಗಿದ್ದಾಗ ಯಡ್ಡಿ ವಿರೋಧಿ ಗುಂಪಿನ ಮುಂದೆ ಒಂದೆರಡು ದಾರಿಗಳಿದ್ದವು. ಅದೇ ರೀತಿ ಭಿನ್ನರ ಎರಡು ಕ್ಯಾಂಪ್‌ಗಳಿದ್ದವು.

ಅನಂತು, ಈಶ್ವರಪ್ಪ ಮುಂತಾದವರ ಬಣಕ್ಕೆ ಯಡ್ಡಿಯನ್ನು ಇಳಿಸಿ ಜಗದೀಶ್ ಶೆಟ್ಟರ್‌ರನ್ನು ಸಿಎಂ ಮಾಡಿ ಸರ್ಕಾರದ ಮೇಲೆ ಕಂಟ್ರೋಲ್ ಹೊಂದಿರಬೇಕೆಂಬ ಅಜೆಂಡಾ ಇತ್ತು.


ಮತ್ತೊಂದೆಡೆ ರೆಡ್ಡಿ ಗುಂಪಿಗೆ ಯಡ್ಡಿಯೋ ಇಲ್ಲಾ ಮಡ್ಡಿಯೋ ಯಾವನೋ ಇರಲಿ ತಮ್ಮ ಸಾವಿರಾರು ಕೋಟಿಯ ವ್ಯವಹಾರಕ್ಕೆ ಅಡೆತಡೆ ಮಾಡದವನಾಗಬೇಕೆಂಬ ಗುರಿ ಇತ್ತು. ಈ ಆಂತರಿಕ ಗುದ್ದಾಟದಲ್ಲಿ ಸಿಕ್ಕು ನಲುಗಿದ ಯಡ್ಡಿ ಬಿಜೆಪಿ ಹೈಕ ಮಾಂಡ್‌ಗೆ ಕಪ್ಪ ಕಾಣಿಕೆ ಸಲ್ಲಿಸಿ ಅನಂತೂ ಗುಂಪಿನ ಕಾಟದಿಂದ ಬಚಾ ವಾದರು. ಮತ್ತೊಂದೆಡೆ ರೆಡ್ಡಿಗಳ ಮೇಲಿದ್ದ ಅನೇಕ ಕೇಸ್‌ಗಳನ್ನು ರದ್ದು ಮಾಡುವ ಮೂಲಕ ಅಚ್ಚಾ ಅಚ್ಚಾ ಮಾಡಿ ಖುಷಿ ಪಡಿಸಲು ಯತ್ನಿಸಿದರು.


ಆದರೆ 'ಸಾಬಿಯೇ ಹೋಗುತ್ತಿರುವಾಗ ಯಾರೋ ಅವನ ಗಡ್ಡಕ್ಕಾಗಿ ಅತ್ತರಂತೆ' ಎಂಬಂತೆ ರೆಡ್ಡಿಗಳಿಗೆ ತಮ್ಮ ಸಾಮ್ರಾಜ್ಯವೇ ಕುಸಿದು ಬೀಳುವ ಸ್ಥಿತಿ ಬರುತ್ತಿರುವಾಗ ಜುಜುಬಿ ಡಜನ್ ಕೇಸುಗಳ ರದ್ಧತಿಯಿಂದ ಖುಷಿಯಾಗುತ್ತಾರಾ?

ವಾಸ್ತವವಾಗಿ ರೆಡ್ಡಿಗಳಿಗೀಗ ಯಡ್ಡಿ ಕೃಪೆಗಿಂತ ಕಾಂಗ್ರೆಸ್‌ನ ಕೇಂದ್ರ ಸರ್ಕಾರದ ನೆರವು ಬೇಕಿದೆ. ಹಾಗಾಗಿ ನಾಳೆ ಕರ್ನಾಟಕದಲ್ಲೇನಾದರೂ ಯಡ್ಡಿ ಅಂಡ್ ಗ್ಯಾಂಗ್ ವಿರುದ್ಧ ಮತ್ತೆ ಭಿನ್ನಮತ ಶುರುವಾದರೆ ಏನು ಆಶ್ಚರ್ಯವಿಲ್ಲ. ರೆಡ್ಡಿ ಆಪ್ತ ವಲಯದ ಕೆಲವು ಪಿತೂರಿಗಾರರ ಅಂಬೋಣ ಏನೆಂದರೆ ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯವಾಗದಂತೆ... ಬಿಜೆಪಿಗಳ ಕುತ್ತಿಗೆ ಹಿಸುಕಿ ಯಮಲೋಕಕ್ಕಟ್ಟುವುದು!

ಈ ಸ್ಟ್ರಾಟಜಿಯ ಮೊದಲ ಭಾಗವಾಗಿ ರೆಡ್ಡಿ ಬಣದ ಕೆಲ ಬಿಜೆಪಿ ಶಾಸಕರು ಹಾಗೂ ಪಕ್ಷೇತರ ಶಾಸಕರು ರಾಜ್ಯಪಾಲ ಭಾರಧ್ವಾಜ್‌ರನ್ನು ಭೇಟಿಯಾಗಿ ಯಡ್ಡಿ ಸರ್ಕಾರಕ್ಕೆ ಇನ್ನು ನಮ್ಮ ಬೆಂಬಲ ಇಲ್ಲ. ಈ ಸರ್ಕಾರದ ವಿರುದ್ಧ ಅವಿಶ್ವಾಸವಿದೆ ಅನ್ನುವುದು. ಹೀಗನ್ನುವ ಸಾಕಷ್ಟು ಶಾಸಕರು ಇರುವಂತೆ ನೋಡಿಕೊಂಡರೆ ನಂತರ ರಾಜ್ಯಪಾಲ ಯಡ್ಡಿಗೆ ಸದನದಲ್ಲಿ ವಿಶ್ವಾಸಮತ ಸಾಬೀತುಪಡಿಸುವಂತೆ ಸೂಚಿಸಬೇಕು. ಇದು ಎರಡನೇ ಹಂತದ ಪ್ಲಾನ್.


ಅನಂತರ ಯಡ್ಡಿ ವಿಶ್ವಾಸಮತ ಯಾಚಿಸುವ ದಿನ. ಪಕ್ಷ ವ್ಹಿಪ್ ನೀಡಿದರೂ ಸೈತ ಯಡ್ಡಿ ಸೋಲುವಷ್ಟು ಸಂಖ್ಯೆಯ ಬಿಜೆಪಿ ಶಾಸಕರು ಸದನಕ್ಕೆ ಗೈರುಹಾಜರಾಗುವ ಮೂಲಕ ಹಾಗೂ ಪಕ್ಷೇತರರು ಯಡ್ಡಿ ವಿರುದ್ಧ ಮತ ಹಾಕುವ ಮೂಲಕ ಈ ಸರ್ಕಾರಕ್ಕೆ ಒಂದು ಗತಿ ಕಾಣಿಸಬೇಕೆಂದು ರೆಡ್ಡಿ ಬ್ರದರ್ಸ್ ನೀಲನಕ್ಷೆ ಮಾಡಿದ್ದಾರೆ ಎನ್ನಲಾಗುತ್ತಿದೆ. ಹೊಸ ರಾಜ್ಯಪಾಲ ಭರಧ್ವಾಜ್ ಹೇಗೂ ಕಾಂಗ್ರೆಸ್ ಮನುಷ್ಯನೇ ಆಗಿರುವುದರಿಂದ ಯಡ್ಡಿಯನ್ನು ಕೆಡವುವ ರೆಡ್ಡಿಗಳ ಪ್ಲಾನ್ ಮುಂದಿನ ದಿನಗಳಲ್ಲಿ ಗ್ಯಾರಂಟಿ ಚಾಲನೆ ಪಡೆದರೂ ಅಚ್ಚರಿಯಿಲ್ಲ.





ಮೂಡಿಗೆರೆ ಎಂ.ಎಲ್.ಎ ಮುಸುಡಿಗೆ ಜನರು ಇಕ್ಕಿದರು ಗೂಸಾ

ಅಲ್ಲೊಂದು ಚಿಕ್ಕ ಹಳ್ಳಿ ಇದೆ. ಅದರ ಒಂದು ಮಗ್ಗುಲಲ್ಲಿ ಮೂವತ್ತೆರಡು ಕುಟುಂಬಗಳು ವಾಸವಾಗಿವೆ. ಅವರೆಲ್ಲ ಸಾರಗೋಡು ಮೀಸಲು ಅರಣ್ಯ ವ್ಯಾಪ್ತಿಯಿಂದ ಎತ್ತಂಗಡಿಯಾಗಿ ನಿರಾಶ್ರಿತರಾಗಿ ಬಂದವರು. ಅವರಿಗೆಲ್ಲಾ ಮೊದಲೇ ಜಿಲ್ಲಾಡಳಿತವು ಹಕ್ಕು ಪತ್ರವನ್ನು ನೀಡಿತ್ತು. ಆದರೆ ಅಲ್ಲಿನ ಜನರಿಗೆ ಬದುಕಲು ಬೇಕಾದ ವಾತಾವರಣವನ್ನು ಸರಕಾರವಾಗಲಿ, ಜಿಲ್ಲಾಡಳಿತವಾಗಲಿ ಈವರೆಗೂ ಕಲ್ಪಿಸಿಕೊಡಲಿಲ್ಲ, ಅವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಲಿಲ್ಲ, ಕುಡಿಯುವ ನೀರು, ವಸತಿ, ಶಾಲೆ, ಚರಂಡಿ, ರಸ್ತೆ, ಬೀದಿ ದೀಪ, ಪಡಿತರ ಇದ್ಯಾವುದನ್ನೂ ನೀಡಲಿಲ್ಲ, ಹಳ್ಳಿಯ ಹೆಸರು ಯಲಗುಡಿಗೆ ಗುಪ್ತಶೆಟ್ಟಿ ಹಳ್ಳಿ. ಇದು ಚಿಕ್ಕಮಗಳೂರು ತಾಲ್ಲೂಕಿನಲ್ಲಿದ್ದು, ಮೂಡಿಗೆರೆ ವಿಧಾನಸಭಾ ಕ್ಷೇತ್ರಕ್ಕೆ ಸೇರುತ್ತದೆ ಅನ್ನುವುದು ಖುದ್ದು ಇಲ್ಲಿನ ಶಾಸಕ ಎಂ.ಪಿ. ಕುಮಾರಸ್ವಾಮಿಯ ಅರಿವಿಗೆ ಬಂದಿರುವುದಿಲ್ಲ,



ಕುಮಾರಸ್ವಾಮಿ

ತಮಾಷೆಯ ಸಂಗತಿಯೆಂದರೆ ಇಲ್ಲಿ ನಿರಾಶ್ರಿತರಾಗಿ ಬದುಕು ಸವೆಸುತ್ತಿರುವ ಎಲ್ಲಾ ಕುಟುಂಬಗಳಿಗೂ ಸಾರಗೋಡು ಮೀಸಲು ಅರಣ್ಯ ಪ್ರದೇಶ ವ್ಯಾಪ್ತಿಯ ಒಂದು ಬದಿಯಲ್ಲಿ ಸ್ವಂತ ಭೂಮಿ ಇದೆ, ಮನೆ ಇದೆ. ಅವರ ಬದುಕಿಗೆ ಬೇಕಾದ ಸಾಕಷ್ಟು ಪ್ರಮಾಣದ ಅಗತ್ಯ ಸೌಕರ್ಯಗಳಿವೆ. ಅಲ್ಲಿನ ಹೆಸರು ಹುಲ್ಲೇಮನೆ. ಮೂಡಿಗೆರೆಯಿಂದ ಹಾದಿ ಮಾರ್ಗವಾಗಿ ಗುಲ್ಲನ್‌ಪೇಟೆ ದಾಟ ಮಣೆಯ ರಸ್ತೆ ಮೂಲಕ 17 ಕಿ.ಮೀ. ಹಾದಿ ಸವೆಸಿದರೆ ಯಲಗುಡಿಗೆ ಗುಪ್ತಶೆಟ್ಟಿ ಹಳ್ಳಿ ಸಿಗುತ್ತದೆ. ಅಲ್ಲಿನ ಅರವತ್ತನಾಲ್ಕು ಎಕರೆ ಗೋಮಾಳವನ್ನು ಬೈರೇಗೌಡ ಎಂಬುವರು ಒತ್ತುವರಿ ಮಾಡಿಕೊಂಡಿದ್ದರು.

ಅಂದಿನ ಜಿಲ್ಲಾಧಿಕಾರಿ ಹರ್ಷಗುಪ್ತ ಮತ್ತು ಬೈರೇಗೌಡರನ್ನು ಪೋಲಿಸ್ ವರಿಷ್ಠಾಧಿಕಾರಿ ಮಧುಕರ ಶೆಟ್ಟಿ ಕಾನೂನಿನ್ವಯ ಬೈರೇಗೌಡರನ್ನು ಮಣಿಸಿ ಒತ್ತುವರಿ ಜಾಗವನ್ನು ತೆರವುಗೊಳಿಸಿ ಸಾರಗೋಡುವಿನ ಹುಲ್ಲೇಮನೆಯಲ್ಲಿ ಎತ್ತಂಗಡಿಯಾಗಲಿದ್ದ ದಲಿತ ಕುಟುಂಬಗಳಿಗೆಂದು ನಿಗದಿಪಡಿಸಿ, ಹಕ್ಕು ಪತ್ರ ನೀಡಿ ಬಿಟ್ಟಿದ್ದರು. ಹುಲ್ಲೇಮನೆ ಜಾಗದಲ್ಲಿ ಮೊದಲ ಸರ್ವೆ ನಡೆಸಿದ ಅರಣ್ಯ ಇಲಾಖೆಯು ಅಲ್ಲಿನ ಕುಟುಂಬಗಳನ್ನು ತರಾತುರಿಯಲ್ಲಿ ಒಕ್ಕಲೆಬ್ಬಿಸಿ ಬೇರೆಡೆ ಅಟ್ಟಿ ಬಿಟ್ಟಿತ್ತು.

ಯಾಕೋ ಗೊತ್ತಿಲ್ಲ, ಇದರಿಂದ ತಮಗೆ ಅನ್ಯಾಯವಾಗಿದೆ, ಹುಲ್ಲೇಮನೆ ಪರಿಸರದ ಒಂದು ಬದಿಯ ಕೆಲವು ಎಕರೆಯಷ್ಟು ಭೂಮಿಗಳು ಮೀಸಲು ಅರಣ್ಯ ವ್ಯಾಪ್ತಿಗೆ ಸೇರ್ಪಡೆಗೊಳ್ಳುವುದಿಲ್ಲ, ಸರ್ವೆಯಲ್ಲಿ ಏನೋ ಯಡವಟ್ಟು ಮಾಡಲಾಗಿದೆ, ಅಲ್ಲಿನ ಕುಟುಂಬಗಳನ್ನು ಒಕ್ಕಲೆಬ್ಬಿಸಬೇಡಿ; ಅವರನ್ನು ನಿರಾಶ್ರಿತರನ್ನಾಗಿ ಮಾಡಬೇಡಿ ಎಂದು ಕೆಲವರು ಮರು ಸರ್ವೆ ನಡೆಸಲು ಒತ್ತಡ ತಂದಿದ್ದರು. ಅದರಂತೆ ಮರು ಸರ್ವೆ ನಡೆದಿದ್ದರಿಂದ ಹುಲ್ಲೇಮನೆ ನಿವಾಸಿಗಳು ವಾಸವಾಗಿದ್ದ ಮನೆಗಳು, ನೂರಾರು ಎಕರೆ ಕೃಷಿ ಭೂಮಿ, ಕುಡಿಯುವ ನೀರಿನ ಟ್ಯಾಂಕು, ಅಂಗನವಾಡಿ ಕೇಂದ್ರ, ಶಾಲೆ, ರಸ್ತೆ ಮುಂತಾದವು ಅರಣ್ಯ ಇಲಾಖೆ ಸುಪರ್ದಿಗೆ ಒಳಪಡುವುದಿಲ್ಲ ಎಂಬ ನಗ್ನ ಸತ್ಯ ಜಿಲ್ಲಾಡಳಿತದ ಅರಿವಿಗೆ ಬಂದಿತ್ತು, ಅಷ್ಟರಲ್ಲಿಯೇ ಹುಲ್ಲೇಮನೆಯಿಂದ ಒಕ್ಕಲೆಬ್ಬಿಸಿದ್ದ ಮೂವತ್ತೆರಡು ಕುಟುಂಬಗಳಿಗೆ ಯಲಗುಡಿಗೆ ಗುಪ್ತಶೆಟ್ಟಿ ಹಳ್ಳಿಯಲ್ಲಿ ತಲಾ ಎರಡೆರಡು ಎಕರೆ ಗೋಮಾಳ ಭೂಮಿಯನ್ನು ಜಿಲ್ಲಾಡಳಿತ ಹಂಚಿಕೆ ಮಾಡಿ ಹಕ್ಕು ಪತ್ರ ನೀಡಿತ್ತು.

ಮೇಲ್ವರ್ಗದ ವ್ಯಕ್ತಿಯೋರ್ವನಿಂದ ಒತ್ತುವರಿ ಗೋಮಾಳ ಭೂಮಿಯನ್ನು ವಶಪಡಿಸಿ ದಲಿತರಿಗೆ ನೀಡಿದ್ದು ಯಲಗುಡಿಗೆ ಭಾಗದ ಪ್ರಭಾವಿಗಳ ಅರಿವಿಗೆ ಬಂದಿತ್ತು. ಅವರು ತಕ್ಷಣ ಹೌಹಾರಿ ಬಿಟ್ಟಿದ್ದರು. ಹೀಗೆ ಬಿಟ್ಟಾರೆ ಮುಂದಿನ ದಿನಗಳಲ್ಲಿ ಅನೇಕರು ಒತ್ತುವರಿ ಮಾಡಿಕೊಂಡಿರುವ ಕಂದಾಯ ಭೂಮಿಗಳನ್ನು ಖುಲ್ಲ ಮಾಡುವುದರಲ್ಲಿ ಸಂದೇಹವೇ ಇಲ್ಲ, ಹಾಗಾಗಿ ಸುಮ್ಮನೆ ಬಿಡಬಾರದು ಅಂದುಕೊಂಡು ಲ್ಯಾಂಡ್ ಟ್ರಿಬ್ಯುನಲ್ ಕೋರ್ಟ್‌ನಲ್ಲಿ ದಾವೆ ಸಲ್ಲಿಸಿ ಬಿಟ್ಟಿದ್ದರು. ಅವರು ನೀಡಿರುವ ಕಾರಣ ಏನು ಗೊತ್ತಾ? ಅರವತ್ತನಾಲ್ಕು ಎಕರೆ ಗೋಮಾಳವು ತಮ್ಮ ಗ್ರಾಮದ ಜಾನುವಾರು ಮೇಯಿಸಲು ಮತ್ತು ಇನ್ನಿತರ ಅಗತ್ಯ ಅವಶ್ಯಕತೆಗಳಿಗೆಂದು ನೂರಾರು ವರ್ಷಗಳ ಹಿಂದೆಯೇ ನಿಗದಿ ಪಡಿಸಿಕೊಳ್ಳಲಾಗಿದೆ ಎಂದು.

ಈ ವಿಚಾರದಿಂದ ಜಿಲ್ಲಾಡಳಿತ 'ಅಸಹಾಯಕ'ವಾಗಿದೆ. ಭೂಮಿಯ ವಿಚಾರದಲ್ಲಿ ದಾವೆ ನ್ಯಾಯಾಲಯದ ಕಟಕಟೆಯ ಮೇಲಿದೆ. ಯಲಗುಡಿಗೆ ಗುಪ್ತಶೆಟ್ಟಿ ಹಳ್ಳಿಯಲ್ಲಿ ವಾಸವಾಗಿರುವ ಮೂವತ್ತೆರಡು ಕುಟುಂಬಗಳು ನಿರಾಶ್ರಿತರಲ್ಲ, ಅವರಿಗೆ ಹುಲ್ಲೇಮನೆಯಲ್ಲಿ ಸ್ವಂತ ಆಸ್ತಿ ಇದೆ. ನೀವು ಅಲ್ಲಿಗೆ ವಾಪಾಸ್ಸು ಹೋಗಿ ವಾಸ ಮಾಡಿ ಅಂದರೆ ಆ ಕುಟುಂಬಗಳು ಜಪ್ಪಯ್ಯ ಅಂದರೂ ಕುಳಿತಲ್ಲಿಂದ ಕದಲುತ್ತಿಲ್ಲ. ಬದಲು ಕಳೆದ ಒಂದು ತಿಂಗಳಿನಿಂದ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ಕುಳಿತಿದೆ.


ಅಂದುಕೊಂಡಂತೆ ನಡೆದಿದ್ದರೆ ಇದೊಂದು ಸಮಸ್ಯೆಯೆ ಆಗಿರುತ್ತಿರಲಿಲ್ಲ, ಆದರೆ ಧರಣಿ ನಿರತರನ್ನು ಯಾವ ಜನಪ್ರತಿನಿಧಿಯು ಮತ್ತು ಅಧಿಕಾರಿಗಳು ಮಾತನಾಡಿಸುವ ಸೌಜನ್ಯ ತೋರಲಿಲ್ಲ ನೋಡಿ ಹೀಗಾಗಿ ಅವರು ಕೆರಳಿ ಕೆಂಡಮಂಡಲವಾಗಿದ್ದರು.

ಮೊನ್ನೆ ತಾನೇ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಆರಿಸಿ ಬಂದ ಡಿ.ವಿ. ಸದಾನಂದಗೌಡರ ನೂತನ ಕಚೇರಿ ಉದ್ಘಾಟನೆಯು ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲಿ ನಡೆದಿತ್ತು. ಜೊತೆಗೆ ಮೂಡಿಗೆರೆ ಶಾಸಕ ಎಂಪಿ. ಕುಮಾರಸ್ವಾಮಿ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ನಾಗರಾಜು ಜೊತೆಗಿದ್ದರು. ಎಲ್ಲವೂ ಮುಗಿಯುವ ಹಂತದಲ್ಲಿದ್ದಾಗ ಮೂಡಿಗೆರೆ ಶಾಸಕ ಕುಮಾರಸ್ವಾಮಿ ಪಕ್ಕದಲ್ಲಿಯೇ ಧರಣಿ ನಡೆಸುತ್ತಿದ್ದ ಜನರನ್ನು ಮಾತನಾಡಿಸಲು ಹೋಗಿದ್ದಾರೆ. ನೀವು ಯಾರು? ಯಲಗುಡಿಗೆ ಗುಪ್ತಶೆಟ್ಟಿ ಹಳ್ಳಿ ಎಲ್ಲಿದೆ? ಇದು ಯಾವ ಕ್ಷೇತ್ರಕ್ಕೆ ಸೇರಿದೆ? ಹೇಳಿ ಅಂದಿದ್ದಾರೆ.

ಒಬ್ಬ ಚುನಾಯಿತ ಶಾಸಕ ತನ್ನ ವ್ಯಾಪ್ತಿ ಪ್ರದೇಶ ಎಷ್ಟು? ಯಾವ ಯಾವ ಪ್ರದೇಶ ಸೇರಿಕೊಳ್ಳುತ್ತದೆ? ಅಲ್ಲಿ ತಾನು ಯಾವ ಕೆಲಸ ಮಾಡಬೇಕು? ಎಂಬ ಚಿಕ್ಕ ವಿಷಯ ಕೂಡ ತಿಳಿದಿಲ್ಲ ಎಂಬುದನ್ನು ಜನ ಯಾವಾಗ ಅರ್ಥ ಮಾಡಿಕೊಂಡರೋ ಮಾತಿಗೆ ಮಾತು ಬೆಳೆದಿದೆ. ಅಲ್ಲಿ ವಾದ, ವಿವಾದ, ವಾಗ್ವಾದ ಎಲ್ಲವೂ ನಡೆದಿದೆ. ಅವಾಚ್ಯ ಪದ ಪ್ರಯೋಗಿಸಿ ಹೀನಾತಿಹೀನವಾಗಿ ಕುಮಾರಸ್ವಾಮಿಯನ್ನು ಜನರು ಬೈದಿದ್ದಾರೆ. ಅಷ್ಟರಲ್ಲಿ ಯಾರೋ ಶಾಸಕರ ಕೊರಳ ಪಟ್ಟಿ ಹಿಡಿದು ಜಗ್ಗಾಡಿ ಮುಸುಡಿಗೆ ಪಟಪಟನೆ ನಾಲ್ಕು ಇಕ್ಕಿ ಬಿಟ್ಟಿದ್ದಾರೆ.

ಒಂದೆಡೆ ಇದು ನಡೆಯುತ್ತಿದ್ದರೆ ಮತ್ತೊಂದೆಡೆ ಮತ್ಯಾರೋ ಹುಡುಗರು ಸಿ.ಟಿ. ರವಿ ಎಲ್ಲಿ ಅಂತ ಕಿರುಚಾಡುತ್ತಾ ಹುಡುಕಾಡ ತೊಡಗಿದ್ದರು. ಆತ ಅಲ್ಲಿಗೆ ಬಂದಿರಲಿಲ್ಲ ಅನ್ನುವುದು ಆ ಮೇಲಷ್ಟೆ ತಿಳಿದಿದೆ. ಘಟನೆ ಗಂಭೀರ ಸ್ವರೂಪ ಪಡೆಯುವ ಮೊದಲೇ ಡಿ.ವಿ. ಸದಾನಂದಗೌಡ ಸೇರಿದಂತೆ ಕೆಲವು ಅಧಿಕಾರಿಗಳು ಮಧ್ಯೆ ಪ್ರವೇಶಿಸಿ ಜನರಿಂದ ಮೂಡಿಗೆರೆ ಶಾಸಕನನ್ನು ಬಿಡಿಸಿ ಕಚೇರಿಯೊಳಗೆ ಕರೆದೊಯ್ದಿದ್ದಾರೆ. ಅಲ್ಲಿಗೆ ಪರಿಸ್ಥಿತಿ ತಣ್ಣಗಾಗಿದೆ.

ಅಜೀಜ್ ಕಿರುಗುಂದ



OLE OLE ಯೇಲ್!

ಅಂತ ಹಾಡ್ತಿದ್ದಾರೆ ಎರಡನೆ ಸಲದ ಎಂ.ಪಿ. ಮಾ[...] ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ. ಯಾಕೆಂದ[...] ಅವರೀಗ 'ಲೀಡರ್ ಶಿಪ್' ಕ್ವಾಲಿಟಿ ಬೆಳೆಸಿಕೊಳ್ಳ[...] ಅಮೆರಿಕಾದ ಯೇಲ್ ಯುನಿವರ್ಸಿಟಿಗೆ ಹೋಗುತ್ತಿದ್ದಾ[...] 543 ಎಂ.ಪಿ.ಗಳಲ್ಲಿ ಇಂತಹ ಭಾಗ್ಯ ಕೇವಲ ಹತ್[...] ಮಂದಿಗೆ ಸಿಕ್ಕಿದೆ. ಯಾವ ಮಾನದಂಡದ ಮೇ[...] ಇವರನ್ನಾರಿಸಲಾಯ್ತು? ಈ ಹತ್ತರಲ್ಲಿ ಎಂಟು ಜ[...] ದೊಡ್ಡದೊಡ್ಡ ರಾಜಕಾರಣಿಗಳ ಮಕ್ಕಳು!

ಕುಮಾರಸ್ವಾಮಿಯ ಅಮೆರಿಕಾ ಕ್ಲಾಸ್‌ಮೇಟ್‌ಗ[...] ಈ ಲಿಸ್ಟನ್ನೊಮ್ಮೆ ನೋಡಿ:

ಅಭಿಷೇಕ್ ಸಿಂಗ್ವಿ: ಎಲ್.ಎಂ. ಸಿಂಗ್ವಿ ಪುತ್ರ, ನರೇಶ್ ಗೊಯಲ್: ಮಾಜಿ ಪ್ರಧಾನಿ ಐ.ಕೆ. ಗುಜ್ರಾಲ್ ಪುತ್[...] ಜಯಂತ್ ಚೌಧರಿ: ಅಜಿತ್ ಸಿಂಗ್ ಮಗ, ಶೃತಿ ಚೌಧರಿ[...] ಹರ್ಯಾಣದ ಪ್ರವಾಸೋದ್ಯಮ ಮಂತ್ರಿ ಕಿರಣ್ ಚೌಧ[...] ಮಗಳು ಮತ್ತು ಬನ್ಸಿಲಾಲ್ ಮೊಮ್ಮಗಳು, ಪ್ರಿಯಾದತ್[...] ಸುನಿಲ್ ದತ್ ಮಗಳು, ಮೊಹಮದ್ ಸಯ್ಯದ್: ಕೇಂದ್[...] ಸಚಿವ ಪಿ.ಎಂ. ಸಯ್ಯದ್ ಮಗ, ಅನುರಾಗ್ ಸಿಂಗ್[...] ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಪ್ರೇಮಕುಮಾರ[...] ಧುಮಾಲ್ ಮಗ, ಮೌಸಮ್ ನೂರ್: ಕಾಂಗ್ರೆಸ್ಸಿ[...] ಹಿರಿಯ ನಾಯಕ ಗನಿಖಾನ್ ಚೌಧರಿ ಮೊಮ್ಮಗಳು.....


ಹೇಗಿದೆ ವಂಶಪಾರಂಪರ್ಯ? ಪಕ್ಷಭೇದ ಮರೆತ[...] ಆರಿಸಿರುವ ಲಿಸ್ಟ್ ಇದು! ಮೊದಲಿಗೆ ಕುಟುಂಬ[...] ಹೆಸರಿನಿಂದ ಇವರೆಲ್ಲ ಸಂಸತ್ ಹೊಕ್ಕರು, ಈಗ ಅದೇ[...] ನಾಮಬಲದಿಂದ ಅಮೆರಿಕಾ ಟೂರ್ (ಉನ್ನತ ಅಧ್ಯಯನ?[...] ಛಾನ್ಸ್ ಗಿಟ್ಟಿಸಿದ್ದಾರೆ!

ಅಲ್ಲಿ ಈ 'ಯುವ' ಸಂಸದರಿಗೆ ಲೀಡರ್ ಶಿಪ್ ಕ್ವಾಲಿಟಿ ಕುರಿತು ಪಾಠ ಹೇಳ್ತಾರಂತೆ!

ಕ್ಲಾಸಿನಲ್ಲಿ ಕೂರಿಸಿ, ಬೆತ್ತ ಹಿಡಿದು ಬೆದರಿಸಿ ಪಾ[...] ಮಾಡಿ ನಾಯಕತ್ವ ಗುಣವನ್ನು ಕಲಿಸಲಾದೀತೆ? ಅದೇ[...] ಇರಲಿ, ಯೇಲ್‌ಗೆ ಯಾತ್ರೆ ಹೊರಟಿರುವ ಈ[...] ಬಾಲಬಾಲೆಯರು ಅವರ ಅಪ್ಪಂದಿರು, ಅಜ್ಜಂದಿರಿಂದ[...] ಲೀಡರ್‌ಶಿಪ್ ಕ್ವಾಲಿಟಿ ಕಲಿಯಲಿಲ್ಲವೆ? ಅಥವಾ ಅವ[...] ಪೂರ್ವಿಕರಲ್ಲೇ ಆ ಗುಣ ಇರಲಿಲ್ಲವೆ? ಎರಡು ವರ್ಷ[...] ಸಿ.ಎಂ. ಆದ ಕುಮಾರಸ್ವಾಮಿ ನಾಲಾಯಕ್ ಎಂದರ್ಥವೆ[...] ಅಷ್ಟಕ್ಕೂ ಭಾರತದ ಎಂ.ಪಿ.ಗಳಿಗೆ ಈ ಅಮೆರಿಕನ್[...] ಯುನಿವರ್ಸಿಟಿ ಅದೇನು ಟೀಚ್ ಮಾಡೀತು? ಬಹುಶ[...] ಬಂಡವಾಳಶಾಹಿಗಳ ಪರ ಹೇಗೆ ನಿಲ್ಲಬೇಕು; ಅದನ್ನ[...] ಅಭಿವೃದ್ಧಿ ಎಂದು ಹೇಗೆ ಬಿಂಬಿಸಬೇಕು; ಆ ಮೂಲಕವ[...] ಸಖತ್ ಶ್ರೀಮಂತಿಕೆ ಹೇಗೆ ಪಡೆಯಬೇಕು ಎಂಬ[...] ವಿಷಯಗಳು ಸಿಲಬಸ್‌ನಲ್ಲಿರುವಂತಿದೆ.....

ಅದೇನೇ ಇರಲಿ, ಅಂತೂ ಗ್ರಾಮವಾಸ್ತವ್ಯದಿಂದ[...] ಅಮೆರಿಕಾ ಆತಿಥ್ಯದತ್ತ ಪ್ರಯಾಣಿಸುತ್ತಿದ್ದಾರೆ ಕುಮಾರಸ್ವಾಮಿ[...] ಇಂತಹ ಶುಭ ಸಂದರ್ಭದಲ್ಲಿ ಸಹೋದರ ರೇವಣ್[...] ಒಂದು ಅಪಸ್ವರ ಎತ್ತಿದರಂತೆ: "ಲೋ ಈಗಲ್ಲ ಫಾರಿನ್[...] ಹೋಗಬಾರ್‍ದು ಕಣೋ, ಅಲ್ಲಿ ಹಂದಿಜ್ವರ ಬರತೈತಂತೆ...."

● ಮಲ್ಲಿ[...]



ಕಿಟೆಲ್ ಅಂಡ್ ಬ್ಯಾಟೆಲ್

ಇದು ಧಾರವಾಡದ ಪ್ರತಿಷ್ಠಿತ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ಮಗದೊಂದು ಬ್ಯಾಟೆಲ್... ಇಲ್ಲಿ ಅಂಥಾದ್ದೆಲ್ಲ ಕಾಮನ್ ಬಿಡಿ....

ರಾಷ್ಟ್ರಕವಿ ಕುವೆಂಪು ಮತ್ತು ಕನ್ನಡ ಪದಕೋಶ ಪಿತಾಮಹ ಕಿಟೆಲ್ ಅವರನ್ನು ಅವಹೇಳನ ಮಾಡಿದ್ದನ್ನು ಪ್ರತಿಭಟಿಸಲು ಈ ಸಭೆ ನಡೆದಿತ್ತು, ಡಾ.ಎಸ್.ಎಂ. ವೃಷಭೇಂದ್ರ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಚೆನ್ನವೀರ ಕಣವಿ, ಪಾಟೀಲ ಪುಟ್ಟಪ್ಪ ಜೆ.ಎಂ ಹೆಗಡೆ, ಶಾಂತಾ ಇಮ್ರಾಪೂರ್‌ರವರು ವೇದಿಕೆ ಮೇಲಿದ್ದರು. ವೇದಿಕೆ ಮೇಲಿದ್ದ ಐವರಲ್ಲಿ ನಾಲ್ವರು ಲಿಂಗವಂತರು, ಒಬ್ಬರು ಜನಿವಾರದವರು. ಬಹುಶಃ ಈ ಕಾರಣಕ್ಕಾಗಿಯೇ 'ಕೋಪ'ಗೊಂಡ ಪ್ರಚಾರಪ್ರಿಯ ಸಾಹಿತಿ, ಅರೆಬರೆ ರಾಜಕಾರಣಿ ಮೋಹನ್ ನಾಗಮ್ಮನವರ್ ಗುಡುಗಿಬಿಟ್ಟರು. 'ಇಷ್ಟು ದಿನಾ ನೀವೆಲ್ಲ ನಮ್ಮನ್ನ ಶೋಷಣೆ ಮಾಡಿದ್ದು ಸಾಕು' ಎಂದೆಲ್ಲ ಹೇಳುತ್ತಾ 'ಬಂಡಾಯ'ದ ಧ್ವನಿ ಎತ್ತಿದರು. ಇದಕ್ಕೆ ಪ್ರತಿಧ್ವನಿ ಎತ್ತಿದ ವೃಷಭೇಂದ್ರಸ್ವಾಮಿ 'ಮೋಹನ್ ಕ್ಷಮೆ ಕೇಳದಿದ್ದರೆ ನಾವೆಂದೂ ಈ ವಿದ್ಯಾವರ್ಧಕ ಸಂಘಕ್ಕೆ ಕಾಲಿಡುವುದಿಲ್ಲ' ಎಂದು ಪರಾಕ್ರಮ ಮೆರೆದುಬಿಟ್ಟರು.

ಕುವೆಂಪು, ಕಿಟೆಲ್‌ರ ವಿರುದ್ಧ ಕೀಳಾಗಿ ಮಾತಾಡಿದವರ, ಬರೆದವರ ವಿರುದ್ಧ ಗಟ್ಟಿಧ್ವನಿ ಎತ್ತಬೇಕಾಗಿದ್ದ ಸಭೆ ಇಂತಹ ಒಣಜಗಳದಲ್ಲಿ ಮುಳುಗಿಹೋಯಿತು....

ಮೂಲಿ ಚಿಟ್

ಹಫ್ತಾ ಹಾವುಗಳು


ಬೆಂಗಳೂರಿನಲ್ಲಿ ಕನ್ನಡದ ಹೆಸರಲ್ಲಿ ಹಫ್ತಾ ವಸೂಲಿ ಮಾಡುವ ಕರವೇ ಎಂ[...] ಮನೆಹಾಳ ವೇದಿಕೆ ಈಗ ಊರೂರಿಗೂ ಹಬ್ಬುತ್ತಿದೆ.

ಮೊನ್ನೆ ಹುಬ್ಬಳ್ಳಿಯಲ್ಲಿ ಈ ವೇದಿಕೆಯ ಪುಂಡರಾದ ಅಮೃತ್ ಇಜಾರಿ, ಪ್ರೇಮ[...] ಬಾಕಳೆ, ರಾಘವೇಂದ್ರ ಅರಸಿಕೇರಿ, ಸದಾನಂದ ಕಾಗತೆ, ಅಶೋಕ್ ಹಾದಿಮನಿ, ಸಚಿನ[...] ಗಣೇಶ್, ಬಸವರಾಜ್ ಈರಮ್ಮನವರ್-ಎಂಬುವವರು ರಾತ್ರಿ 11ರ ಸುಮಾರಿಗೆ ಮರಾಠಗಲ್ಲಿಯ[...] ಲಕ್ಷ್ಮಿಲಾಡ್ಜ್‌ಗೆ ನುಗ್ಗಿದ್ದಾರೆ. ವೇಶ್ಯಾವಾಟಿಕೆಯ ನೆಪವೊಡ್ಡಿ ರೊಕ್ಕ ಕೀಳಲು ಯತ್ನಿಸಿದ್ದಾ[...] ಕೂಗಳತೆಯ ದೂರದಲ್ಲಿಯೇ ಹುಬ್ಬಳ್ಳಿ ಶಹರ ಪೊಲೀಸ್ ಠಾಣೆ ಇದ್ದರೂ ಈ ಪುಂಡರಿ[...] ಅದೆಷ್ಟು ಧೈರ್ಯ ನೋಡಿ... ಈ ಪಡಪೋಶಿಗಳ ಬೆದರಿಕೆಗೆ ಲಾಡ್ಜ್ ಮ್ಯಾನೇಜರ[...] ಜಗ್ಗದಿದ್ದಾಗ ಅವರ ಮೇಲೆ ಹಲ್ಲೆ ಮಾಡಿದ್ದಾರೆ. ಮ್ಯಾನೇಜರ್ ಕಂಪ್ಲೇಂಟ್ ಕೊಡಲ[...] ಹೋದಾಗಲೂ ಅವನ ಬೆನ್ನತ್ತಿ ಪಿಎಸ್ಸೈ ಡಿಸೋಜಾ ಹಾಗೂ ಹೆಡ್‌ಕಾನ್‌ಸ್ಟೇಬಲ್ ನದಾಫ[...] ಮೇಲೂ ಹಲ್ಲೆ ಮಾಡಿದ್ದಾರೆ; ಈ ಕನ್ನಡಾಂಬೆಯ ಖತರ್‌ನಾಕ್ ಪುತ್ರರು.

ಸಮಾಧಾನದ ವಿಷಯವೆಂದರೆ, ಈ ಮುಠ್ಠಾಳರೆಲ್ಲ ಈಗ ಜೈಲಿನೊಳಗಿದ್ದಾರೆ.....


ಅಮರೇಶ್


ಗಂಗಾವತಿ ಆಪರೇಷನ್ ಕಮಲಕ್ಕೆ ಒಬ್ಬನ ಬಲಿ



ಚೆಡ್ಡಿಗಳ ಹೇಸಿಗೆ ರಾಜಕಾರಣದ ಸಂಕೇತವಾದ ರೇಷನ್ ಕಮಲಕ್ಕೆ ಈಗ ಒಂದು ಹೆಣ ಬಿದ್ದಿದೆ. ತಿಂದಾ ಅಂತ ಇವನೂ ತಿಂದು ವಾಂತಿ ಮಾಡಿ ದ' ಎನ್ನುವ ಹಾಗೆ ಬಳ್ಳಾರಿ ರೆಡ್ಡಿಗಳು ರಾಜ್ಯ ಟ್ಟದಲ್ಲಿ ಮಾಡಿದ್ದನ್ನು ತಾನೇಕೆ ತನ್ನ ಮಟ್ಟದಲ್ಲಿ ಡಬಾರದು ಎಂದು ಗಂಗಾವತಿಯ ಶಾಸಕ ಪರಣ್ಣ ನವಳ್ಳಿ ಮುಂದಾಗಿದ್ದಕ್ಕೆ ಇಂದು ಅಮರೇಶ ಹೊಸಮನಿ ಆತ ಪ್ರಾಣ ಕಳೆದುಕೊಂಡಿದ್ದಾನೆ. ಅಷ್ಟೇ ಅಲ್ಲ ಈ ಪರಣ್ಣ ಎಂಬ ಪಾಪಿ 'ಬಿಜೆಪಿಯ ಬಲಿ ಚಕ್ರ' ಎಂಬ ಬಿರುದಿಗೂ ಭಾಜನನಾಗಿದ್ದಾನೆ.

ರೆಡ್ಡಿ ಗ್ಯಾಂಗ್ ಹುಟ್ಟು ಹಾಕಿದ 'ಆಪರೇಶನ್ ಕಮಲ' ಮಾನಗೆಟ್ಟ ಖರೀದಿ ವ್ಯವಹಾರ ಈಗ ರಾಜ್ಯ ಟ್ಟದಿಂದ ಗ್ರಾಮ ಪಂಚಾಯತಿವರೆಗೆ ಹಬ್ಬಿದೆ. ಎಲ್ಲಿ ಡಿದರೂ ಹಣದ ಆಶೆಗೆ ಬಲಿಯಾಗಿ ಜನ ಕರೆನಿಸಿಕೊಂಡವರು ಹರಾಜಾಗುತ್ತಿದ್ದಾರೆ. ಚೆಡ್ಡಿಗಳ ಾಗಿ ಅಂತಹ ಖರೀದಿಗೆ ಮುಂದಾದ ಗಂಗಾವತಿಯ ವ ರಾಜಕಾರಣಿ ಅಮರೇಶ ಹೊಸಮನಿ ಅದರಲ್ಲಿ ನಾಗಿ, ಶಾಸಕ ಪರಣ್ಣನಿಂದ ಉಗಿಸಿಕೊಂಡು, ನಾಶಕ ಕುಡಿದು ಹಿರಿಯೂರಲ್ಲಿ ಬದಿ ಾಗಿ ಹೋಗಿದ್ದಾನೆ. ಬಿಜೆಪಿಯ ಅಧಿಕಾರದ ಒಂದು ಜೀವವನ್ನೇ ತೆಗೆದುಕೊಳ್ಳುವ ಕ್ಕೆ ಬಂದು ನಿಂತಿರುವುದು ನಿಜಕ್ಕೂ ಈ ದ ದುರಂತವೆ ಸರಿ.


ಸುದರ್ಶನ್


ಶಿವರಾಮೇಗೌಡ


ಕೌನ್ಸಿಲರ್






...ಮು ಪರಣ್ಣನ ಕೊನೆ ಆಸೆನಾ!

ಗಂಗಾವತಿಯಿಂದ ಕಳೆದ ವಿಧಾನಸಭಾ ಚುನಾ ಮಲ್ಲಿ ಜಾತ್ಯತೀತ ಜನತಾ ದಳದ ಇಕ್ಬಾಲ್ ರಿಯನ್ನು ಸೋಲಿಸಿ ಶಾಸಕನಾದ ಬಿಜೆಪಿಯ ಗ್ರಾಮ ಪಂಚಾಯತಿ ಸದಸ್ಯನಾಗಲೂ ಯಕ್ಕು. ಆದರೂ ಜಾತಿ ಮತ್ತು ಹಣದ ಅವನನ್ನು ಅಸೆಂಬ್ಲಿ ಮೆಟ್ಟಿಲು ಹತ್ತಿಸಿ ತ್ತು. ಮೊನ್ನೆ ನಡೆದ ಪಾರ್ಲಿಮೆಂಟ್ ಚುನಾ ಮಲ್ಲೂ ಕೊಪ್ಪಳ ಕ್ಷೇತ್ರದಿಂದ ಅದೇ ಅನ್ಸಾರಿ ನ್ನು ಬಿಜೆಪಿಯ ಶಿವರಾಮಗೌಡ ಸೋಲಿಸಿ ಪರಣ್ಣ ಮುಗಿಲಿಗೆ ಕೈ ಕೊಟ್ಟವನಂತೆ ಬಿಟ್ಟ. ಜೊತೆಗೆ ಗಂಗಾವತಿಯ ಲಲಿತಾರಾಣಿ ಕರಕುಶಲ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷ ು. ಇದೆಲ್ಲ ಪರಣ್ಣನಿಗೆ ಕುಳಿತಲ್ಲೆ ಪಂಪ್ ಡೆದಂತೆ ಆಯಿತು. ಇಷ್ಟೆಲ್ಲಾ ಪವರ್ ಇಟ್ಟು ತು ಸ್ಥಳೀಯ ಮುನ್ಸಿಪಾಲಿಟಿಯನ್ನು ಜೆಡಿಎಸ್ ಲ್ಲೇ ಬಿಟ್ಟರೆ ತಾನಿದ್ದೂ ಏನು ಪ್ರಯೋಜನ ಆಲೋಚನೆಗೆ ಬಿದ್ದ ಪರಣ್ಣ ಪಕ್ಕದ ಬಳ್ಳಾರಿ ು ರೆಡ್ಡಿಗಳು ರಾಜ್ಯ ಮಟ್ಟದಲ್ಲಿ ಮಾಡಿದ ಷನ್ ಕಮಲದ ಫಾರ್ಮುಲಾವನ್ನು ಗಂಗಾ ಮುನ್ಸಿಪಾಲಿಟಿಯಲ್ಲಿಯೂ ಅನುಸರಿಸಿ ಗಳಿಂದ ಶಬ್ಬಾಸ್‌ಗಿರಿ ಪಡೆಯುತ್ತೇನೆ ಬಾಯಿ ಬಡಿದುಕೊಂಡನಲ್ಲದೆ ಅಧಿಕಾರಕ್ಕೆ ದ ಸದಸ್ಯರ ಖರೀದಿಗೆ ಕೈ ಹಾಕಿದ.

ಗಂಗಾವತಿ ಮುನ್ಸಿಪಾಲಿಟಿಯ 31 ವಾರ್ಡು 2006 ರಲ್ಲಿ ನಡೆದ ಚುನಾವಣೆಯಲ್ಲಿ ಸ್‌ಗೆ ಬಹುಮತ ಸಿಕ್ಕಿತ್ತು, 22 ಸ್ಥಾನಗಳಲ್ಲಿ ಸ್, 6 ರಲ್ಲಿ ಬಿಜೆಪಿ, ಕಾಂಗ್ರೆಸ್ 2, ಒಬ್ಬ ಪಕ್ಷೇತರ ಸದಸ್ಯ ಆಯ್ಕೆಯಾಗಿದ್ದರು. ಪಾಲಿಟಿಯ ಅಧ್ಯಕ್ಷ ಸ್ಥಾನದ ಮೊದಲ ಅವಧಿ ಜಾತಿ ಮಹಿಳೆಗೆ ಮೀಸಲಾದಾಗ ಆ ಸ್ಥಾನಕ್ಕೆ ಮತ್ತು ಪಾರ್ವತಮ್ಮ ಎಂಬ ಇಬ್ಬರು ಜೆಡಿಎಸ್ ಪ್ರಬಲ ಸ್ಪರ್ಧಿಗಳಾಗಿದ್ದರು. ಆಗ ಅನ್ಸಾರಿ ಅವರು ಗಳ ಅಧಿಕಾರ ಅವಧಿಯಲ್ಲಿ ತಲಾ 15 ತಿಂಗಳಿಗೆ ಅಧ್ಯಕ್ಷರು ಆಗುವಂತೆ ಫರ್ಮಾನು ಹೊರಡಿಸಿ ಮ್ಮ ಮೊದಲು ಅಧ್ಯಕ್ಷೆಯನ್ನಾಗಿ ಕುರ್ಚಿಯಲ್ಲಿ ದರು. ಈಗ ಆ ಒಪ್ಪಂದದ ಮೊದಲ 15 ಮುಗಿಯುತ್ತಾ ಬಂದಿತ್ತು, ಆ ಸೀಟಿಗೆ ಮ್ಮ ಬರಲು ರೆಡಿಯಾಗುತ್ತಿದ್ದರು. ಆದರೆ ದ ರುಚಿ ಕಂಡ ಲಕ್ಷ್ಮಮ್ಮ ಕುರ್ಚಿಯಿಂದ ಕೆಳಗಿಳಿ ಹಾಗೊಲ್ಲ ಎಂಬ ರಾಗ ಶುರು ಹಚ್ಚಿಕೊಂಡಳು.

ಇವರಿಬ್ಬರ ಜಗಳ ಕಂಡು ಇದೇ ಒಳ್ಳೆಯ ಸಮಯ ಎಂದು ಯೋಚಿಸಿದ ಅವಿವೇಕಿ ಶಾಸಕ ಪರಣ್ಣ ಮುನವಳ್ಳಿ ಆಪರೇಷನ್ ಕಮಲಕ್ಕೆ ತಯ್ಯಾರಿ ಶುರು ಹಚ್ಚಿಕೊಂಡನಲ್ಲದೆ ಅದರ ಜವಾಬ್ದಾರಿಯನ್ನು ವಹಿಸಲು ಒಬ್ಬ ವ್ಯಕ್ತಿಯ ಹುಡುಕಾಟಕ್ಕೆ ಇಳಿದ. ಆಗ ಅವನ ಕಣ್ಣಿಗೆ ಬಿದ್ದವನೆ ಈಗ ಹೆಣವಾಗಿರುವ ಅಮರೇಶ ಹೊಸಮನಿ.


ಅನಸೂಯಾ

ಜೆಡಿಎಸ್ ಮುನ್ಸಿಪಾಲಿಟಿಯ ಸದಸ್ಯಳಾಗಿರುವ ಅನಸೂಯಾ ಹೊಸಮನಿಯ ಗಂಡನೆ ಈ ಅಮರೇಶ. ಅಸಲಿಗೆ 2006 ರಲ್ಲಿ ಅಮರೇಶ ಜೆಡಿಎಸ್‌ನಿಂದ ತನಗಾಗಿ ಬಿ-ಫಾರ್ಮ್ ಕೇಳಿದ್ದ ಆದರೆ ಅನ್ಸಾರಿ ಇವನ ಬದಲು ಇವನ ಹೆಂಡತಿ ಅನುಸೂಯಾಗೆ ಟಿಕೇಟ್ ಕೊಟ್ಟು ಚುನಾವಣೆಗೆ ನಿಲ್ಲಿಸಿದ್ದರು. ಆಕೆ ಆ ಚುನಾವಣೆಯಲ್ಲಿ ಗೆದ್ದಿದ್ದಳು ಕೂಡ.

ಹೆಚ್ಚು ಓದಿರದ ಅಮರೇಶ್ ಇದ್ದ ಅಲ್ಪ ಸ್ವಲ್ಪ ಹಣವನ್ನು ಬಡ್ಡಿಗೆ ಬಿಟ್ಟು ಅದರಲ್ಲೇ ಜೀವನ ಸಾಗಿಸುತ್ತಿದ್ದ, ರಾಜಕಾರಣಿಗಳ ಪುಢಾರಿಯಾಗಿ ಓಡಾಡುತ್ತಿದ್ದ ಈತನಿಗೆ ವಿಪರೀತ ಇಸ್ಪೀಟು ಚಟ ಕೂಡ ಇತ್ತು. ಈ ಇಸ್ಪೀಟು ಚಟ ಅವನನ್ನು ಮನೆಯಿಂದ ದೂರ ಮಾಡಿತ್ತಲ್ಲದೇ ವಿಪರೀತ ಸಾಲಕ್ಕೂ ನೂಕಿತ್ತು. ವಾರ, ತಿಂಗಳುಗಟ್ಟಲೆ ಪಕ್ಕದ ಹೊಸಪೇಟೆಯ ಕ್ಲಬ್‌ಗಳಲ್ಲಿ ಕಾಲ ಕಳೆಯುತ್ತಿದ್ದ ಅಮರೇಶ.

ಅವನ ಒಂದೇ ಒಂದು ರಾಜಕೀಯ ಆಶೆ ತನ್ನ ಹೆಂಡತಿ ಅನಸೂಯಳಿಗೆ ಯಾವುದಾದರೊಂದು ಅಧಿಕಾರದ ಸ್ಥಾನ ಗಿಟ್ಟಿಸಿಕೊಳ್ಳಬೇಕೆಂಬುದು. ಹೇಗಾದರೂ ಮಾಡಿ ಸ್ಥಾಯಿ ಸಮಿತಿ ಅಧ್ಯಕ್ಷಗಾದೆಯ ಚುನಾವಣೆಯಲ್ಲಿ ಅವಳನ್ನು ಗೆಲ್ಲಿಸಬೇಕು, ಆ ಮೂಲಕ ತಾನು ಇಸ್ಪೀಟಿನಲ್ಲಿ ಈತನಕ ಕಳೆದುಕೊಂಡಿರುವ ಹಣವನ್ನು ಮತ್ತೆ ಗಳಿಸಬೇಕು ಎಂಬ ಅಮರೇಶನ ಕನಸಿಗೆ ಹಣದ ಬಿಕ್ಕಟ್ಟು ಅಡಚಣೆಯಾಗಿತ್ತು.

ಅಮರೇಶನ ಕತೆ ಶಾಸಕ ಪರಣ್ಣನ ಕಿವಿಗೂ ಬಿತ್ತು. ಲಿಂಗಾಯತನಾದ ಅಮರೇಶ ತನ್ನ ಜಾತಿ ಬಂಧುವೂ ಆಗಿದ್ದರಿಂದ ಆಪರೇಷನ್ ಕಮಲಕ್ಕೆ ಇವನೇ ಸೂಕ್ತ ಎಂದು ನಿರ್ಧರಿಸಿದ ಪರಣ್ಣ ಅಮರೇಶನನ್ನು ಕರೆಯಿಸಿ ಆತನ ಜೇಬಿನಲ್ಲಿ ಹಣವಿಟ್ಟು "ಮುನ್ಸಿಪಾಲಿಟಿಯಲ್ಲಿ ಜೆಡಿಎಸ್ ಒಡೆದು ಬಿಜೆಪಿ ಅಧಿಕಾರಕ್ಕೆ ಬರುವಂತೆ ಆಪರೇಷನ್ ಕಮಲ ಮಾಡು. ನಾನು ಅನಸೂಯಾಳನ್ನು ಸ್ಥಾಯಿ ಸಮಿತಿ ಅಧ್ಯಕ್ಷಳನ್ನಾಗಿ ಮಾಡುತ್ತೇನೆ" ಎಂದಿದ್ದಾನೆ. ಅಷ್ಟು ಸಾಕಿತ್ತು ಅಮರೇಶನಿಗೆ. ಆತ ಮರು ಯೋಚಿಸದೇ ಆಪರೇಷನ್ ಕಮಲವನ್ನು ಶುರು ಹಚ್ಚಿಕೊಂಡ.

ರಾಜಕೀಯದಲ್ಲಿ ಒಂದಿಷ್ಟು ಚಾಣಾಕ್ಷನಾದ ಅಮರೇಶ, ಅಧಿಕಾರ ಕಳೆದುಕೊಳ್ಳುವುದರಲ್ಲಿದ್ದ ಲಕ್ಕಮ್ಮನಿಗೆ "ಮುಂದಿನ ಅವಧಿಗೂ ನೀನೇ ಅಧ್ಯಕ್ಷೆ" ಎಂದು ನಂಬಿಸಿದ. ಅದೇ ರೀತಿ ಅಧ್ಯಕ್ಷಳಾಗುವುದರಲ್ಲಿದ್ದ ಪಾರ್ವತಮ್ಮಳನ್ನೂ ನಂಬಿಸಿದ. ನಂತರ ನಡೆದ ಕುದುರೆ ವ್ಯಾಪಾರದಲ್ಲಿ ಜೆಡಿಎಸ್‌ನ ಪಾಪಣ್ಣ ನಾಯಕ, ಇಬ್ರಾಹಿಂ, ಕೃಷ್ಣಪ್ಪ ನಾಗಪ್ಪ ಪೂಜಾರಿ, ಶಾಂತಮ್ಮ ಹೀಗೇ 6 ಜನ ಪರಣ್ಣನ ಎಂಜಲು ಕಾಸಿಗೆ ಬಾಯಿ ತೆರೆದುಬಿಟ್ಟರು. ಅಲ್ಲಿಗೆ ಗಂಗಾವತಿ ಮುನ್ಸಿಪಾಲಿಟಿ ಬಿಜೆಪಿ ತೆಕ್ಕೆಗೆ ಎಂಬುದು ಖಾತರಿಯಾಗಿ ಬಿಟ್ಟಿತು.

ಸಾಯೋದಕ್ಕೆ ಟೂರು ಅಂದನಾ!

ಅಮರೇಶ ನಡೆಸಿದ ಆಪರೇಷನ್ ಕಮಲದ ಸುದ್ದಿ ಗಂಗಾವತಿ ಬೀದಿಗಳಲ್ಲೆಲ್ಲಾ ಅಬ್ಬರಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಅನ್ಸಾರಿ ಟೀಮ್ ಇದನ್ನು ಮುರಿಯುವ ಪ್ರಯತ್ನಗಳನ್ನು ಪ್ರಾರಂಭಿಸಿತು. ಇದು ಗೊತ್ತಾಗಿದ್ದೆ ತಡ ಶಾಸಕ ಪರಣ್ಣ ಅಮರೇಶನನ್ನು ಕರೆಯಿಸಿ ಆತನ ಜೇಬಿನಲ್ಲಿ ಹಣ ಇಟ್ಟು ಬಿಜೆಪಿಯತ್ತ ವಾಲಿದ್ದ ಸದಸ್ಯರನ್ನು ಕರೆದುಕೊಂಡು ಜೂನ್ 20ರ ವರೆಗೆ ಎಲ್ಲಾದರೂ ಟೂರ್ ಹೋಗಲು ಸೂಚಿಸಿದ. ಪರಣ್ಣ ಹೇಳಿದ್ದೇ ತಡ ಬೆಂಗಳೂರು, ಮೈಸೂರು, ಊಟಿ, ಕಂಚಿ ಹೀಗೆ ಹತ್ತಾರು ಪ್ರವಾಸಿ ತಾಣಗಳಿಗೆ ಹೋಗಿ ನಂತರ ಜೂನ್ 17 ರಂದು ಹಿರಿಯೂರಿಗೆ ಬಂದರು. ಅಲ್ಲಿನ ಬೈಪಾಸ್ ಹತ್ತಿರ ಲಾಡ್ಜ್ ಒಂದರಲ್ಲಿ ಎಲ್ಲರೂ ಉಳಿದುಕೊಂಡಿದ್ದರು. ಸ್ಥಾಯಿ ಸಮಿತಿ ಚುನಾವಣೆಗೆ ಇನ್ನೂ ಮೂರು ದಿನ ಬಾಕಿ ಇತ್ತು. 20ನೇ ತಾರೀಖಿಗೆ ನೇರವಾಗಿ ಮುನ್ಸಿಪಾಲಿಟಿಗೆ ಹೋಗಬೇಕು ಎಂದು ಪ್ಲಾನ್ ಮಾಡಿದ ಅಮರೇಶ ಅಲ್ಲಿಯ ತನಕ ಎಲ್ಲರೂ ಹಿರಿಯೂರು, ಚಿತ್ರದುರ್ಗದಲ್ಲೆ ಕಾಲ ಕಳೆಯಬೇಕು ಎಂದು ನಿರ್ಧರಿಸಿದ.

ತನ್ನ ಪ್ಲಾನ್ ಫಲನೀಡುತ್ತದೆ, ಗಂಗಾವತಿಯ ಮುನ್ಸಿಪಾಲಿಟಿ ಬಿಜೆಪಿ ತಕ್ಕೆಗೆ ಬೀಳುತ್ತೆ, ತನ್ನ ಹೆಂಡತಿ ಅನಸೂಯಾ ಸ್ಥಾಯಿ ಸಮಿತಿಯ ಅಧ್ಯಕ್ಷಳಾಗುತ್ತಾಳೆ. ತಾನು ಮಾಡಿಕೊಂಡಿರುವ ಸಾಲ ಸೋಲಗಳು ತೀರುತ್ತವೆ. ರಾಜಕೀಯವಾಗಿ ತನಗೂ ಮಾನ ಮರ್ಯಾದೆ ಸಿಗುತ್ತೆ ಎಂದೆಲ್ಲ ಅಮರೇಶ ಲೆಕ್ಕಾಚಾರ ಮಾಡಿದ್ದ. ಆದರೆ ವಿಧಿಯಾಟವೇ ಬೇರೊಂದು ನಿರ್ಧರಿಸಿತ್ತು.

ಅಲ್ಲಿಯ ತನಕ ಅಮರೇಶ್ ಮತ್ತು ಇತರೆ ಹರಾಜಾದ ಮುನ್ಸಿಪಾಲಿಟಿಯ ಸದಸ್ಯರೊಂದಿಗಿದ್ದ ಲಕ್ಕಮ್ಮಳ ಮೇಲೆ ಜೆಡಿಎಸ್‌ನಿಂದ ಒತ್ತಡ ಬರುತ್ತಿದ್ದದ್ದು ಮತ್ತು ಆಫರ್‌ಗಳ ಮಳೆನೇ ಸುರಿಯುತ್ತಿದ್ದದ್ದು ಯಾರಿಗೂ ಗೊತ್ತಿರಲಿಲ್ಲ. ಜೊತೆಗೆ ಸ್ವತಃ ಅನ್ಸಾರಿ ಆಕೆಗೆ ಫೋನ್ ಹಚ್ಚಿ "ನೀನೆ ಅಧ್ಯಕ್ಷಳಾಗಿ ಮುಂದುವರಿ" ಎಂದು ಹೇಳಿದ್ದೆ ತಡ ಲಕ್ಕಮ್ಮ ಅಮರೇಶನ ಟೂರ್ ಟೀಂನಿಂದ ಕಾಲು ಕೀಳಲು ತಯ್ಯಾರಿ ನಡೆಸಿದಳು. ಅಷ್ಟೊತ್ತಿಗಾಗಲೆ ಆಕೆಯ ಮಗ ಹರೀಶ ಹಿರಿಯೂರಿಗೆ ಬಂದು ಇವರಿದ್ದ ಲಾಡ್ಜ್‌ನಲ್ಲಿ ಠಿಕಾಣಿ ಹೂಡಿದ್ದ. ಜೊತೆಗಿದ್ದವರು ಊಟ ಮಾಡಲು ಪಕ್ಕದ ಹೋಟೆಲಿಗೆ ಹೋಗುವುದನ್ನೆ ಕಾಯುತ್ತಿದ್ದ ಲಕ್ಕಮ್ಮ ಸದ್ದಿಲ್ಲದೆ ಮಗನ ಜೊತೆ ಗಂಗಾವತಿಗೆ ಹಾರಿಬಿಟ್ಟಳು. ಊಟ ಮುಗಿಸಿ ಬಂದ ಅಮರೇಶ ಲಕ್ಕಮ್ಮ ಕಾಣದಿದ್ದುದನ್ನು ನೋಡಿ ಕಂಗಾಲಾದ. ಆಗಿನ್ನೂ ಆತನೊಂದಿಗೆ ಇದ್ದ ಲಕ್ಕಮ್ಮನ ಇನ್ನೊಬ್ಬ ಮಗ ಬಾಲಾಜಿಯನ್ನು ಕರೆದುಕೊಂಡು ಪೊಲೀಸ್ ಠಾಣೆಗೆ ಹೋಗಿ ಲಕ್ಕಮ್ಮಳನ್ನು ಅಪಹರಿಸಲಾಗಿದೆ ಎಂದು ಆತನಿಂದ ದೂರು ಕೊಡಿಸಿದ. ಅಲ್ಲಿಯ ಎಸ್.ಐ. ಸುದರ್ಶನ ಕೂಡ ಲಕ್ಕಮ್ಮಳಿಗಾಗಿ ಸುತ್ತ ಮುತ್ತ ಹುಡುಕಾಡಿಸಿದರೂ ಆಕೆ ಸಿಗಲಿಲ್ಲ.

ಅಷ್ಟೊತ್ತಿಗಾಗಲಿ ಆಪರೇಷನ್ ಕಮಲ ವಿಫಲವಾಯಿತು ಎಂದು ಅರಿತ ಅಮರೇಶ ಹೊಸಮನಿ ಗರ ಬಡಿದವನಂತಾದ. ತನ್ನ ಹೆಂಡತಿಯನ್ನು ಸ್ಥಾಯಿ ಸಮಿತಿಯ ಅಧ್ಯಕ್ಷಳನ್ನಾಗಿಸುವ ಕನಸು ನುಚ್ಚು ನೂರಾಯಿತು, ಅಲ್ಲದೇ ಆಪರೇಷನ್ ಕಮಲದ ಟೂರಿಗೆಂದು ಶಾಸಕ ಪರಣ್ಣ ಕೊಟ್ಟಿದ್ದ ಲಕ್ಷಾಂತರ ರೂಪಾಯಿ ಖರ್ಚಾಗಿತ್ತು. ಈಗ ಅದನ್ನು ಪರಣ್ಣ ವಾಪಸ್ಸು ಕೇಳಿದರೆ ತನ್ನ ಗತಿ ಏನು ಎಂದು ಚಿಂತಾಕ್ರಾಂತನಾದ.

ಮೊದಲೇ ಇಸ್ಪೀಟು ಆಡಲು ಮಾಡಿದ್ದ ಸಾಲಕ್ಕೆ ಫೈನಾನ್ಶಿಯರ್‌ಗಳ ಕಾಟ. ಈಗ ಇದ್ದ ಒಂದಿಷ್ಟು ಮಾನ ಮರ್ಯಾದೆಯೂ ಹೋಗಿದೆ. ಮತ್ತೆ ಗಂಗಾವತಿಯಲ್ಲಿ ತನ್ನ ಮುಖ ತೋರಿಸುವುದು ಹೇಗೆ ಎಂದು ಅಮರೇಶ ಗೊಂದಲಕ್ಕೆ ಬಿದ್ದಿದ್ದಾನೆ. ಇದೆಲ್ಲದರಿಂದ ಬಚಾವಾಗಬೇಕೆಂದರೆ ಸಾವೊಂದೆ ಪರಿಹಾರ ಎಂದು ನಿರ್ಧರಿಸಿ ಹತ್ತಿರದಲ್ಲೆ ಇದ್ದ ಕೀಟಕನಾಶಕ ಅಂಗಡಿಗೆ ಹೋಗಿ ಕ್ರಿಮಿನಾಶಕ ಖರೀದಿಸಿದ್ದಾನೆ. ಅದನ್ನು ಸಂಪೂರ್ಣವಾಗಿ ಕುಡಿದು ಪೊಲೀಸ್ ಠಾಣೆಗೆ ಹೋಗಿದ್ದಾನೆ. ಅಲ್ಲಿಯ ತನಕ ನಡೆದಿರುವ ಘಟನೆಯನ್ನೆಲ್ಲ ಪೊಲೀಸರಿಗೆ ತಿಳಿಸುವ ಪ್ರಯತ್ನ ಅಮರೇಶ ಮಾಡಿದನಾದರೂ ಅದು ಸಾಧ್ಯವಾಗಿಲ್ಲ. ಅವನಿದ್ದ ಪರಿಸ್ಥಿತಿಯನ್ನು ಅರಿತ ಪೊಲೀಸರು ಅವನನ್ನು ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ಸಾಗಿಸಿದ್ದಾರೆ. ಆದರೆ ದಾರಿ ಮಧ್ಯದಲ್ಲೇ ಅಮರೇಶ ಪ್ರಾಣ ಬಿಟ್ಟಿದ್ದಾನೆ.

ಅವಿವೇಕಿ ಶಾಸಕ ಪರಣ್ಣನ ಪರಾಕ್ರಮಕ್ಕೆ ಅನ್ಯಾಯವಾಗಿ ಅಮರೇಶ ಬಲಿಯಾದ. ಆದರೆ ಪರಣ್ಣ ಈಗ ಬೇರೆ ಪುರಾಣ ಶುರು ಹಚ್ಚಿಕೊಂಡಿದ್ದಾನೆ. "ಜೆಡಿಎಸ್‌ನ ದೇವಪ್ಪ ಕಾಮದೊಡ್ಡಿ, ಇಸ್ಮಾಯಿಲ್, ಆರ್ತಿ ತಿಪ್ಪಣ್ಣ, ಹಾಮಿದ್ ಮುನಿಯಾರ ಸೇರಿಕೊಂಡು ಲಕ್ಕಮ್ಮಳಿಗೆ ಜೀವ ಬೆದರಿಕೆ ಹಾಕಿದ್ದಾರೆ. ಹೀಗಾಗಿ ಅವಳು ಟೂರಿನಿಂದ ಹಿಂದಿರುಗಿದಳು. ಇದರಿಂದ ಅಮರೇಶ ವಿಚಲಿತಗೊಂಡು ವಿಷ ಕುಡಿದು ಸತ್ತಿದ್ದಾನೆ" ಎಂದು ಬೊಗಳುತ್ತಿದ್ದಾನೆ.

ಅತ್ತ ಸ್ಥಾಯಿ ಸಮಿತಿ ಅಧ್ಯಕ್ಷಳೂ ಆಗದೆ, ಇತ್ತ ಗಂಡನನ್ನೂ ಕಳೆದುಕೊಂಡ ಅನಸೂಯಾ ಕಣ್ಣೀರಿಡುತ್ತಿದ್ದಾಳೆ. ಬಿಜೆಪಿಯಲ್ಲಿನ ಕಟುಕರ ಕುತಂತ್ರಕ್ಕೆ ಬಲಿಯಾದ ಕುಟುಂಬವೊಂದರ ಕರುಣಾಜನಕ ಸ್ಥಿತಿ ಬೇರೆ ಯಾರಿಗೂ ಬಾರದಿರಲಿ. ಆಪರೇಷನ್ ಕಮಲಕ್ಕೆ ಕೈ ಹಾಕುವ ಕೈಗಳಿಗೆ ಇನ್ನಾದರೂ ಜನ ಕತ್ತರಿ ಹಾಕಲಿ...

● ಹುರಳಿಕುಪ್ಪಿ ವಿನಯ

ಆಪರೇಷನ್ ಅನ್ಸಾರಿ!


ಮೊದಲೆಲ್ಲ ರಾಜ್ಯಮಟ್ಟದಲ್ಲಿ ನಡೆದ 'ಆಪರೇಷನ್ ಕಮಲ' ಎಂಬ ಹೇಸಿಗೆಯ ವ್ಯವಹಾರ ತದನಂತರ ಜಿಲ್ಲೆ ತಾಲ್ಲೂಕುಗಳಿಗೂ ಹಬ್ಬಿತು. ಈಗದು ಮುನ್ಸಿಪಾಲಿಟಿ, ಗ್ರಾಮಪಂಚಾಯತಿಗಳಿಗೂ ಹಬ್ಬಿ ತನ್ನ ಹೊಲಸು ನಾತವನ್ನು ಪ್ರಸರಿಸುತ್ತಿದೆ. ಗಂಗಾವತಿಯಲ್ಲೀಗ ಇಂತಹ ನಾಚಿಕೆಗೇಡಿ ಆಪರೇಷನ್‌ಗೆ ಅಮರೇಶ್ ಎಂಬುವವರು ಬಲಿಯಾಗಿದ್ದಾರೆ.

ಬರೀ ರಾಜಕೀಯ ಮಸಲತ್ತು ಎಂದು ಇದನ್ನು ನೋಡಲಾಗದು. ಗಂಗಾವತಿಯ ಮಟ್ಟಿಗೆ ಹೇಳುವುದಾದರೆ, ಈ ಆಪರೇಷನ್ ಕಮಲವೀಗ ಫ್ಯಾಮಿಲಿಗಳನ್ನು ಒಡೆಯುವ ಹಂತಕ್ಕೂ ತಲುಪಿಬಿಟ್ಟಿದೆ. ಜೆಡಿಎಸ್‌ನ ಇಕ್ಬಾಲ್ ಅನ್ಸಾರಿಯ ಸಹೋದರ ಅಜರ್ ಅನ್ಸಾರಿ ಈಗ ಬಿಜೆಪಿಯ ಪಾಲಾಗಿದ್ದಾನೆ! ಇದು 'ಆಪರೇಷನ್ ಕಮಲ' ಎಂಬ ಕೀಳು ರಾಜಕಾರಣದ ಒಂದು ಹೊಸ ಸ್ಯಾಂಪಲ್. ಹಾಗೆಯೇ ಜೆಡಿಎಸ್‌ನಲ್ಲಿ ಇಕ್ಬಾಲ್ ಅನ್ಸಾರಿಗೆ ವಿರುದ್ಧವಾಗಿದ್ದ ಸಯ್ಯದ್ ಆಲಿಯ ಗುಂಪು ಸಹ ಬಿಜೆಪಿ ಪಾಲಾಗಿದೆ. ಈ ಸಯ್ಯದ್ ಅಲಿ ಜೆಡಿಎಸ್‌ನ ಅತೃಪ್ತರನ್ನೆಲ್ಲ ಬಿಜೆಪಿಗೆ ಏಳೀತಾ ಇದ್ದಾನೆ.



ಅನ್ಸಾರಿ ಕುಟುಂಬದಲ್ಲಿ ಏಳು ಜನ ಸಹೋದರರು. ಅವರಲ್ಲಿ ಇಕ್ಬಾಲ್ ಅನ್ಸಾರಿ ಒಬ್ಬರೇ ನೇರ ರಾಜಕೀಯಕ್ಕಿಳಿದಿದ್ದರು. ಉಳಿದವರೆಲ್ಲ ಬ್ಯುಸಿನೆಸ್‌ನಲ್ಲಿದ್ದವರು, ಆದರೆ ವ್ಯಾಪಾರದಲ್ಲಿ ಲಾಸ್ ಆದ ಅಜರ್ ಅನ್ಸಾರಿ ರಾಜಕೀಯದತ್ತ ಮುಖಮಾಡಿದ. ಈ ಅವಕಾಶವನ್ನೇ ಉಪಯೋಗಿಸಿಕೊಂಡ ಗಂಗಾವತಿಯ ಬಿಜೆಪಿ ಎಂಎಲ್‌ಎ ಪರಪ್ಪ ಅಜರನನ್ನು ಬಿಜೆಪಿಗೆ ತಂದು ಅನ್ಸಾರಿ ಕುಟುಂಬವನ್ನು ರಾಜಕೀಯವಾಗಿ ಒಡೆದಿದ್ದಾನೆ.


ಇಕ್ಬಾಲ್ ಅನ್ಸಾರಿಯ ತಂದೆ ದಿ. ಎಂ.ಎಸ್. ಅನ್ಸಾರಿ ಇಲ್ಲಿ ಭಾವೈಕ್ಯತೆಗೆ ಶ್ರಮಿಸಿದ ಜಾತ್ಯತೀತ ವ್ಯಕ್ತಿಯಾಗಿದ್ದರು. ಪ್ರತಿವರ್ಷ ಎಲ್ಲ ಧರ್ಮ, ಜಾತಿಗಳ ಜನರನ್ನು ಸೇರಿಸಿ 'ಈದ್ ಮಿಲಾದ್' ಅನ್ನು ವಿಶಿಷ್ಟವಾಗಿ ಆಚರಿಸುತ್ತಿದ್ದರು. ಜೊತೆಗೆ ಸಮಾಜಸೇವೆಯಲ್ಲಿ ತೊಡಗಿಕೊಂಡಿದ್ದರು. ಮುಂದೆ ಅವರ ಮಕ್ಕಳ್ಯಾರೂ ತಂದೆಯ ದಾರಿಯಲ್ಲಿ ನಡೆಯಲಿಲ್ಲ. ಇದ್ದುದರಲ್ಲಿ ಇಕ್ಬಾಲ್ ಅನ್ಸಾರಿ ಪರವಾಗಿಲ್ಲ. ಆದರೀಗ ಅವರ ಸಹೋದರ ಅಜರ್ ಅನ್ಸಾರಿ ಕಮಲ ಹೂವನ್ನು ಮುಡಿಗೇರಿಸಿಕೊಂಡು ಬಿಟ್ಟಿದ್ದಾನೆ!



ಯಾರ ಸಂತೃಪ್ತಿಗೆ ಸಂಸ್ಕೃತ ವೇದ ವಿಶ್ವವಿದ್ಯಾಲಯ?

ಸಂಸ್ಕೃತವೊಂದೇ ಪ್ರಾಚೀನ ಭಾರತದ ಜ್ಞಾನಸಂಪತ್ತನ್ನು ಪಡೆದಿದೆ. ಅದು ಭಾರತದ ಎಲ್ಲಾ ಆಧುನಿಕ ಭಾಷೆಗಳ ತಾಯಿ ಬೇರು ಎಂಬ ನಂಬಿಕೆ ಹೇಗೋ ನಮ್ಮ ಜನರಲ್ಲಿ ಬೆಳೆದು ಬಂದಿದೆ. ಅದು ತಪ್ಪು ಅಭಿಪ್ರಾಯ. ಆಧುನಿಕ ಭಾಷೆಗಳಿಗೆ ಸಂಸ್ಕೃತವೊಂದೇ ತಾಯಿ ಬೇರು ಅಲ್ಲ, ಅದು ಒಂದು ತಾಯಿ ಬೇರು ಅಷ್ಟೆ. ಇದೇ ರೀತಿ ಇನ್ನೂ ಅನೇಕ ತಾಯಿ ಬೇರುಗಳು ಪ್ರಾಕೃತದ ರೂಪದಲ್ಲಿ ಇವೆ. ಸಂಸ್ಕೃತ ಹಾಗೆಯೇ ಪ್ರಾಕೃತ, ಅಪಭ್ರಂಶ, ಪಾಳಿ, ಅರ್ಧಮಾಗಧಿ, ಶೂರಸೇನಿ ಮುಂತಾದ ಭಾಷೆಗಳು ತಮ್ಮಲ್ಲಿ ಅಗಾಧವಾದ ಜ್ಞಾನ ಸಂಪತ್ತನ್ನು ಅಡಗಿಸಿಕೊಂಡಿವೆ. ಕನ್ನಡದ ಉದಾಹರಣೆಯನ್ನೇ ತೆಗೆದುಕೊಂಡರೆ ನಮ್ಮ ಪ್ರಾರಂಭದ ಕಾವ್ಯಗಳು ಸಂಸ್ಕೃತದಿಂದ ಪಡೆದುದಕ್ಕಿಂತ ಹೆಚ್ಚಾಗಿ ಪ್ರಾಕೃತದಿಂದ ಪಡೆದದ್ದು ಹೆಚ್ಚು.

ಕರ್ನಾಟಕದ ಸರ್ಕಾರ ಏಕಮುಖಿಯಾಗಿ ಸಂಸ್ಕೃತ ವೇದ ವಿಶ್ವವಿದ್ಯಾಲಯ ಸ್ಥಾಪಿಸುವುದಾಗಿ ಘೋಷಿಸಿದೆ. ಈಗಾಗಲೇ ವಿಶ್ವವಿದ್ಯಾಲಯ ಸ್ಥಾಪಿಸುವುದಕ್ಕೆ ಬೇಕಾದ ಪೂರ್ವಭಾವಿ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದೆ. ಇದನ್ನು ಕರ್ನಾಟಕದ ಪ್ರಜ್ಞಾವಂತ ಜನತೆ ವಿರೋಧಿಸಲಾರಂಭಿಸಿದೆ. ಇಂಥದೊಂದು ವಿಶ್ವವಿದ್ಯಾಲಯ ಸ್ಥಾಪಿಸುತ್ತೇನೆಂದು ಸರ್ಕಾರ ಘೋಷಿಸುವ ಮುನ್ನ ಕೊಂಚ ವಿವೇಕವನ್ನು ಪ್ರದರ್ಶಿಸಬೇಕಿತ್ತು. ಅಧಿಕಾರ ಕೈಯಲ್ಲಿದ್ದರೆ ಏನು ಬೇಕಾದರೂ ನಿರ್ಧಾರ ತೆಗೆದುಕೊಳ್ಳಬಹುದು ಎಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನ. ಸಂಸ್ಕೃತ ಭಾಷೆಗೆ ಕರ್ನಾಟಕದಲ್ಲಿ ಒಂದು ಪ್ರತ್ಯೇಕ ವಿಶ್ವವಿದ್ಯಾಲಯದ ಅವಶ್ಯಕತೆ ಇದೆಯೆ? ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ.



ಸಂಸ್ಕೃತ ನಮ್ಮ ಪ್ರಾಚೀನ ಭಾಷೆ. ಈಗ ಅದು ಜನಸಾಮಾನ್ಯರ ನಡುವೆ ಬಳಕೆಯಲ್ಲಿಲ್ಲ, ಹಿಂದೆಯೂ ಅದು ಸಾಮಾನ್ಯರ ಭಾಷೆಯಾಗಿರಲಿಲ್ಲ, ಪಂಡಿತ ಮಾನ್ಯರ ಭಾಷೆಯಾಗಿತ್ತು. ಭಾಷೆಗೊಂದು ಪ್ರತಿಷ್ಠಿತ ಸ್ಥಾನಮಾನ ಸಿಕ್ಕಿ ಅದನ್ನು ದೇವ ಭಾಷೆಯೆಂದು ಪರಿಗಣಿಸಿದರೆ ಆ ಭಾಷೆ ಸತ್ತಂತೆಯೇ. ಸಂಸ್ಕೃತಕ್ಕಾದದ್ದೂ ಅದೇ ಗತಿ. ಇವತ್ತು ಅದನ್ನು 'ಮೃತಭಾಷೆ' ಎಂದು ಕರೆಯುವವರೂ ಇದ್ದಾರೆ. ಆದರೆ ಸಂಸ್ಕೃತವನ್ನು ಈ ಚೌಕಟ್ಟಿನಲ್ಲಿ ಮಾತ್ರ ನೋಡಬಾರದು. ಒಂದು ಕಾಲಕ್ಕೆ ಅದು ಸಮೃದ್ಧ ಭಾಷೆಯಾಗಿತ್ತು. ಆ ಸಮೃದ್ಧತೆಯ ಲಾಭವನ್ನು ಇಂದೂ ಕೂಡ ಭಾರತದ ಎಲ್ಲಾ ಭಾಷೆಗಳೂ ಪಡೆಯುತ್ತಿವೆ. ಆ ದೃಷ್ಟಿಯಿಂದ ಆ ಭಾಷೆಯನ್ನು ನಾವಿಂದು ಅಧ್ಯಯನ ಮಾಡಬೇಕಾಗಿರುವುದು ಅದರ ಲೋಕೋಪಕಾರದ ದೃಷ್ಟಿಯಿಂದಲೇ ಹೊರತು ಅಮೃತವಾಣಿ ಎಂದಲ್ಲ.

ಹಾಗೆ ನೋಡಿದರೆ ಈ ದೇಶದಲ್ಲಿ ಹಾಗೂ ಹೊರದೇಶಗಳಲ್ಲಿ ಸಂಸ್ಕೃತದ ಅಧ್ಯಯನಕ್ಕೆ ಎಂದೂ ಕೊರತೆಯುಂಟಾಗಿಲ್ಲ, ವಿಶ್ವವಿದ್ಯಾಲಯಗಳು, ಮಠ ಮಾನ್ಯಗಳು, ಸಂಘ ಸಂಸ್ಥೆಗಳು, ಪರಂಪರಾಗತ ಗುರುಕುಲಗಳು ಸಂಸ್ಕೃತ ಭಾಷೆಯ ಬೋಧನೆ, ಸಂಶೋಧನೆ ಮತ್ತು ಅಧ್ಯಯನದಲ್ಲಿ ತೊಡಗಿವೆ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ಬಹುದೊಡ್ಡ ಮೊತ್ತದ ಸಹಾಯ ಧನವನ್ನು ಈ ಅಧ್ಯಯನಕ್ಕಾಗಿ ನೀಡುತ್ತಲೇ ಬಂದಿವೆ. ಈ ರೀತಿಯ ಭಾಗ್ಯ ಅನೇಕ ದೇಶ ಭಾಷೆಗಳಿಗೆ ಲಭ್ಯವಾಗಿಲ್ಲ ಎಂದು ವಿಷಾದಿಂದಲೇ ಹೇಳಬೇಕಾಗಿದೆ. ಅಲ್ಲದೆ ಸಂಸ್ಕೃತ ಭಾಷೆಯ ಅಧ್ಯಯನಕ್ಕೆಂದೇ ಇಡೀ ದೇಶದಾದ್ಯಂತ ಹನ್ನೆರಡು ವಿಶ್ವವಿದ್ಯಾಲಯಗಳಿವೆ.

ಕರ್ನಾಟಕ ಸರ್ಕಾರ ಪ್ರಾರಂಭದಲ್ಲಿ ಘೋಷಿಸಿದ್ದು ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸುತ್ತೇನೆಂದು. ಆಗಲೇ ಕರ್ನಾಟಕದ ಪ್ರಜ್ಞಾವಂತ ಜನತೆಯಲ್ಲಿ ಸರ್ಕಾರದ ಉದ್ದೇಶದ ಬಗ್ಗೆ ಗುಮಾನಿಗಳು ಏಳಲಾರಂಭಿಸಿದವು. ಸರ್ಕಾರದ ನಿಜವಾದ ಉದ್ದೇಶ ಬಯಲಿಗೆ ಬಂದದ್ದು ಅದು ಉದ್ದೇಶಿತ ವಿಶ್ವವಿದ್ಯಾಲಯದ ಹೆಸರನ್ನು ಸಂಸ್ಕೃತ ವೇದ ವಿಶ್ವವಿದ್ಯಾಲಯ ಎಂದು ಬದಲಾಯಿಸಿದಾಗಲೇ. ಯಾರನ್ನು ಸಂತೃಪ್ತಿಗೊಳಿಸುವುದಕ್ಕೆ ಈ ವಿಶ್ವವಿದ್ಯಾಲಯ? ಎಂಬ ಪ್ರಶ್ನೆ ಗಾಢವಾಗಿ ಕಾಡತೊಡಗಿತು. ಈ ಪ್ರಶ್ನೆಗೆ ಉತ್ತರ ತಿಳಿದಿರುವಂಥಾದ್ದೆ. ಪುರೋಹಿತಶಾಹಿ ವರ್ಗವೊಂದು ಈ ದೇಶದಲ್ಲಿ ವೇದಾಧ್ಯಯನವನ್ನು ಆಧಾರವಾಗಿಟ್ಟುಕೊಂಡು ಇಡೀ ಸಮಾಜವನ್ನು ಲಂಬಾತ್ಮಕವಾಗಿ ಛಿದ್ರೀಕರಿಸುವುದನ್ನು ನಾವು ಕಂಡಿದ್ದೇವೆ. ಅಂಥದೊಂದು ಛಿದ್ರೀಕರಣದ ವಿರುದ್ಧ ಕರ್ನಾಟಕದ ಆರೋಗ್ಯಕರ ಮನಸ್ಸು ಇತಿಹಾಸದುದ್ದಕ್ಕೂ ಹೋರಾಡುತ್ತಲೇ ಬಂದಿದೆ. ವಚನಕಾರರಂತೂ ಬಹಳ ನೇರವಾಗಿ ಇದರ ವಿರುದ್ಧ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಹಾಗಾಗಿ ಇಂದು ಸಂಸ್ಕೃತ ಭಾಷೆಯ ಬಗೆಗಿನ ಅಧ್ಯಯನ ಶೈಕ್ಷಣಿಕ ಚೌಕಟ್ಟು ದಾಟಿ ಹೋಗದಂತಹ ಎಚ್ಚರ ವಹಿಸಬೇಕಾದ್ದು ಅನಿವಾರ್ಯ. ಆದರೆ ಪ್ರಸ್ತುತ ವಿಶ್ವವಿದ್ಯಾಲಯದ ಸ್ಥಾಪನೆಯ ಹಿಂದೆ ಶೈಕ್ಷಣಿಕೇತರ ಉದ್ದೇಶಗಳು ಗಾಢವಾಗಿ ಇರುವಂತೆ ಕಾಣುತ್ತಿವೆ.

ಭಾಷೆಯನ್ನೇ ಕೇಂದ್ರವಾಗಿ ಇಟ್ಟುಕೊಂಡು ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಲು ಹೊರಡುವ ಮುನ್ನ ಸರ್ಕಾರ ಅದನ್ನು ಸಾರ್ವಜನಿಕವಾಗಿ ಚರ್ಚಿಸಬೇಕು. ಪಾರಂಪರಿಕ

▶▶▶

ಭಾರತದಲ್ಲಿರುವ ಸಂಸ್ಕೃತ ವಿಶ್ವವಿದ್ಯಾಲಯಗಳು

1. ಆಂಧ್ರ ಪ್ರದೇಶ: ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ
2. ಆಂಧ್ರ ಪ್ರದೇಶ: ಶ್ರೀ ವೆಂಕಟೇಶ್ವರ ವೇದಿಕ್ ವಿಶ್ವವಿದ್ಯಾಲಯ, ತಿರುಪತಿ
3. ಬಿಹಾರ: ಕಾಮೇಶ್ವರ ಸಿಂಗ್ ದರ್ಭಾಂಗ ಸಂಸ್ಕೃತ ವಿಶ್ವವಿದ್ಯಾಲಯ, ದರ್ಭಾಂಗ
4. ದೆಹಲಿ: ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ (ಡೀಮ್ಡ್ ಯೂನಿವರ್ಸಿಟಿ), ಜನಕಪುರಿ
5. ದೆಹಲಿ: ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ಕಟ್ವಾರಿಯಾಸರಾಯ್
6. ಕೇರಳ: ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ, ಕಾಲಟ್ಟಿ
7. ಮಹಾರಾಷ್ಟ್ರ: ಕವಿ ಕುಲಗುರು ಕಾಳಿದಾಸ ಸಂಸ್ಕೃತ ವಿಶ್ವವಿದ್ಯಾಲಯ, ರಾಮ್‌ಟೆಕ್
8. ಒರಿಸ್ಸಾ: ಶ್ರೀ ಜಗನ್ನಾಥ ಸಂಸ್ಕೃತ ವಿಶ್ವವಿದ್ಯಾಲಯ, ಶ್ರೀ ವಿಹಾರ
9. ರಾಜಸ್ಥಾನ: ಜಗದ್ಗುರು ರಮಾನಂದಾಚಾರ್ಯ ರಾಜಸ್ಥಾನ ಸಂಸ್ಕೃತ ವಿಶ್ವವಿದ್ಯಾಲಯ.
10. ಉತ್ತರ ಪ್ರದೇಶ: ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಣಾಸಿ.
11. ಗುಜರಾತ್: ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯ, ಜುನಾಗಢ್
12. ಉತ್ತರಖಂಡ್: ಉತ್ತರಖಂಡ್ ಸಂಸ್ಕೃತ ವಿಶ್ವವಿದ್ಯಾಲಯ, ಹರಿದ್ವಾರ

ದೆಹಲಿಯಲ್ಲಿರುವ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ (ಡೀಮ್ಡ್ ಯೂನಿವರ್ಸಿಟಿ) ದೇಶದಾದ್ಯಂತ ಇಪತ್ಮೂರು ಆದರ್ಶ ಸಂಸ್ಕೃತ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗಳಿಗೆ ಆರ್ಥಿಕ ಅನುದಾನ ನೀಡುತ್ತಿದೆ. ಆರ್ಥಿಕ ಅನುದಾನ ಆವರ್ತಕ ಶೇಕಡಾ 95 ಮತ್ತು ಅನಾವರ್ತಕ ಶೇಕಡಾ 75. ಆ ಸಂಸ್ಥೆಗಳು ಹೀಗಿವೆ.

1. ಕ್ಯಾಲಿಕಟ್ ಆದರ್ಶ ಸಂಸ್ಕೃತ ವಿದ್ಯಾಪೀಠ, ಕ್ಯಾಲಿಕಟ್, ಕೇರಳ
2. ಶ್ರೀ ರಂಗಲಕ್ಷ್ಮಿ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ವೃಂದಾವನ, ಉತ್ತರ ಪ್ರದೇಶ
3. ಸರ್ವಜ್ಞ ಸಂಸ್ಕೃತ ವಿದ್ಯಾಪೀಠ, ಫರೀದಾಬಾದ್, ಹರ್ಯಾಣ
4. ವೈದಿಕ ಸಂಶೋಧನಾ ಮಂಡಲ್, ಪುಣೆ, ಮಹಾರಾಷ್ಟ್ರ
5. ಜೆ.ಎನ್.ಬಿ. ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ದರ್ಭಾಂಗ, ಬಿಹಾರ
6. ಶ್ರೀ ಭಗವಾನ್‌ದಾಸ್ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಹರಿದ್ವಾರ, ಉತ್ತರಖಂಡ್
7. ಮದರಾಸ್ ಸಂಸ್ಕೃತ ಕಾಲೇಜು ಮತ್ತು ಎಸ್. ಎಸ್. ವಿ. ಪಾಠಶಾಲ, ಮೈಲಾಪುರ್, ಚೆನ್ನೈ.
8. ಲಕ್ಷ್ಮಿ?ದೇವಿ ಸರಾಫ್ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ದೇವಗಢ್, ಬಿಹಾರ
9. ಶ್ರೀ ಏಕರ್ಷಾನಂದ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಮಣಿಪುರಿ, ಉತ್ತರ ಪ್ರದೇಶ
10. ಮುಂಬಾದೇವಿ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಮುಂಬೈ, ಮಹಾರಾಷ್ಟ್ರ
11. ಎಸ್.ಡಿ.ಆದರ್ಶ ಸಂಸ್ಕೃತ ಕಾಲೇಜು, ದೋಹಗಿ, ಹಿಮಾಚಲ ಪ್ರದೇಶ
12. ಹಿಮಾಚಲ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಶಿಮ್ಲಾ, ಹಿಮಾಚಲ ಪ್ರದೇಶ
13. ಶ್ರೀ ದಿವಾನ್ ಕಿಶೋರ್ ಎಸ್.ಡಿ.ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಅಂಬಾಲ, ಹರ್ಯಾಣ
14. ಶ್ರೀ ರಾಜಕುಮಾರಿ ಗಣೇಶ ಶರ್ಮಾ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ದರ್ಭಾಂಗ, ಬಿಹಾರ
15. ಪೂರ್ಣ ಪ್ರಜ್ಞಾ ಸಂಶೋಧನಾ ಮಂದಿರಂ, ಕತ್ರಿಗುಪ್ಪೆ, ಬೆಂಗಳೂರು, ಕರ್ನಾಟಕ
16. ಸ್ವಾಮಿ ಪ್ರಾಂಕುಶಾಚಾರ್ಯ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಗಯಾ, ಬಿಹಾರ
17. ಶ್ರೀ ಸೀತಾರಾಮ ವೈದಿಕ್ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಕೊಲ್ಕತ್ತಾ
18. ರಾಂಜಿ ಮೆಹ್ತಾ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಮುಜಾಫರ್‌ಪುರ್, ಬಿಹಾರ
19. ಕಾಳಿಚಾಕ್ ಬಿಕ್ರಮ್ ಕಿಶೋರ್ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಮಿಡ್ನಾಪುರ್, ಪಶ್ಚಿಮ ಬಂಗಾಳ
20. ರಾಣಿ ಪದ್ಮಾವತಿ ತಾರ ಯೋಗ ತಂತ್ರ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ವಾರಣಾಸಿ, ಉತ್ತರ ಪ್ರದೇಶ
21. ಸಂಸ್ಕೃತ ಅಕಾಡೆಮಿ, ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್
22. ಅಹೋಬಲ ಮಠ ಆದರ್ಶ ಸಂಸ್ಕೃತ ಮಹಾವಿದ್ಯಾಲಯ, ಕಾಂಚಿಪುರಂ, ತಮಿಳುನಾಡು
23. ಚಿನ್ಮಯ ಇಂಟರ್‌ನ್ಯಾಷನಲ್ ಫೌಂಡೇಷನ್, ಎರ್ನಾಕುಲಂ, ಕೇರಳ


...ಲಯಗಳನ್ನು ಸ್ಥಾಪಿಸುವುದಾದರೆ ಇದರ ...ಅಷ್ಟಾಗಿ ಕಂಡು ಬರದು. ಏಕೆಂದರೆ ಅದಕ್ಕೆ ...ವ್ಯಾಪ್ತಿ ದೊಡ್ಡದು ಮತ್ತು ಸಮಕಾಲೀನ ...ಗಳನ್ನು ಕುರಿತು ಅಧ್ಯಯನ, ಸಂಶೋಧನೆ. ...ನಗಳನ್ನು ನಡೆಸುಮಂಥವು. ಇದೇ ಸರ್ಕಾರ ... ವಿಶ್ವವಿದ್ಯಾಲಯ, ...ವಿಶ್ವವಿದ್ಯಾಲಯ ...ತ್ತೇನೆಂದಾಗ ಅದಕ್ಕೆ ... ಕಂಡು ... ಹಿಂದೆ ಕನ್ನಡ ...ದ್ಯಾಲಯ ... ಹೊರಟಾಗ ...ಸಾರ್ವಜನಿಕ ಒಳಗಾಗಿತ್ತು. ...ದಾ. ...ವಂಥ ಕನ್ನಡ ...ಲಯ ಸ್ಥಾಪಿಸುವುದರ ಬಗ್ಗೆ ಸಮ್ಮತಿಸಿರಲಿಲ್ಲ. ... ತಮಿಳು ವಿಶ್ವವಿದ್ಯಾಲಯ, ತೆಲಗು ...ದ್ಯಾಲಯ ತೆರೆದಿದ್ದಾರೆಂದು ನಾವು ಕನ್ನಡ ...ಲಯ ತೆರೆಯ ಬೇಕಾಗಿಲ್ಲ, ಕನ್ನಡದ ಕೆಲಸವನ್ನು ... ಕರ್ನಾಟಕದಲ್ಲಿರುವ ವಿಶ್ವವಿದ್ಯಾಲಯ ...ವ ಕನ್ನಡ ವಿಭಾಗಗಳು ಮಾಡುತ್ತಿವೆ. ಆ ...ಗಳನ್ನೇ ಇನ್ನಷ್ಟು ಬಲಪಡಿಸಿ ಎಂಬ ನಿಲುವು ...ಗಿತ್ತು. ಕನ್ನಡ ವಿಶ್ವವಿದ್ಯಾಲಯ ಸ್ಥಾಪಿಸುವುದರ ... ಇಷ್ಟೆಲ್ಲಾ ಚರ್ಚೆಗಳು ನಡೆದಿರುವಾಗ, ಸಂಸ್ಕೃತ ...ವಿಶ್ವವಿದ್ಯಾಲಯ ಸ್ಥಾಪಿಸುವುದರ ಬಗ್ಗೆ ಯಾವ ... ಚರ್ಚೆಯೂ ನಡೆಯದೆ ಸರ್ಕಾರ ಏಕಮುಖ ...ವದನ್ನು ಸ್ಥಾಪಿಸುತ್ತೇನೆಂದು ಹೊರಟಿದೆ.

...ಾಗಲೇ ತಿಳಿಸಿದಂತೆ ಸಂಸ್ಕೃತ ಭಾಷೆಯ ...ಸಕ್ಕೆಂದೇ ದೇಶಾದ್ಯಂತ ಹನ್ನೆರಡು ...ದ್ಯಾಲಯಗಳಿವೆ. ಇಪ್ಪತ್ಮೂರು ಆದರ್ಶ ...ವಿದ್ಯಾಲಯಗಳಿವೆ. ...ದೇಶದ ...ದ್ಯಾಲಯಗಳಲ್ಲಿ ...ಅಧ್ಯಯನ ...ಳಿವೆ. ...ಗಳಲ್ಲಿ ಬೋಧನಾ ವಿಭಾಗಗಳಿವೆ. ... ಅನೇಕ ಧಾರ್ಮಿಕ ಪೀಠಗಳು ಸಂಸ್ಕೃತ ... ತರಗತಿಗಳನ್ನು ತೆರೆದಿವೆ.

...ಟಕದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ...ಗಳಿವೆ. ಮೇಲುಕೋಟೆಯಲ್ಲಿ ಉನ್ನತ ...ಧನಾ ಕೇಂದ್ರ ಇದೆ. ಮೈಸೂರಿನಲ್ಲಿ ಅರಸರು ... ಸಂಸ್ಕೃತ ಪಾಠಶಾಲೆ ಇದೆ. ಹೆಚ್ಚೂ ಕಡಿಮೆ ...ಮಠಗಳೂ ಪೈಪೋಟಿ ಎಂಬಂತೆ ಸಂಸ್ಕೃತ ... ವಿಭಾಗಗಳನ್ನು ತೆರೆದಿವೆ. ಇಷ್ಟಿದ್ದೂ ಸಂಸ್ಕೃತ ...ವಿದ್ಯಾಲಯ ತೆರೆಯಲು ಹೊರಟಿದೆ ಸರ್ಕಾರ. ...ದಲು ಈಗಿರುವ ಸಂಸ್ಕೃತ ಅಧ್ಯಯನ ...ಗೆ ಹೆಚ್ಚಿನ ಅನುದಾನ ಕೊಟ್ಟು ಅವುಗಳನ್ನು ...ವ ಕೆಲಸ ಮಾಡಬಹುದು.

...ದು ಅಂದಾಜಿನ ಪ್ರಕಾರ ...ದೇಶದಲ್ಲಿ ಸಂಸ್ಕೃತ ...ಅಧ್ಯಯನಕ್ಕೆ ವಾರ್ಷಿಕ ...ಕೋಟಿ ರೂಪಾಯಿ ...ರ್ಚು ಮಾಡಲಾಗುತ್ತಿದೆ. ... ಸಂಸ್ಕೃತ ಭಾಷೆಗೆ ...ಭಾಷೆಯ ಸ್ಥಾನಮಾನ ...ಲೆ ಅನುದಾನ ಇನ್ನೂ ... ಇಷ್ಟೊಂದು ಹಣ ...ರುವ ಬೇರೆ ಯಾವ ... ಸಿಗುತ್ತಿಲ್ಲ ಎಂಬುದನ್ನು ಗಮನಿಸಬೇಕು.

...ತವೊಂದೇ ಪ್ರಾಚೀನ ಭಾರತದ ಜ್ಞಾನ ... ಪಡೆದಿದೆ. ಅದು ಭಾರತದ ಎಲ್ಲಾ ಆಧುನಿಕ ... ತಾಯಿ ಬೇರು ಎಂಬ ನಂಬಿಕೆ ಹೇಗೋ ...ಸರಲ್ಲಿ ಬೆಳೆದು ಬಂದಿದೆ. ಅದು ತಪ್ಪು ... ಆಧುನಿಕ ಭಾಷೆಗಳಿಗೆ ಸಂಸ್ಕೃತವೊಂದೇ ...ರು ಅಲ್ಲ, ಅದು ಒಂದು ತಾಯಿ ಬೇರು ... ರೀತಿ ಇನ್ನೂ ಅನೇಕ ತಾಯಿ ಬೇರುಗಳು ... ರೂಪದಲ್ಲಿ ಇವೆ. ಯಾವುದೇ ಸಾಂಸ್ಕೃತಿಕ ... ಒಂದೇ ತಾಯಿ ಬೇರು ಇರಲು ಸಾಧ್ಯವಿಲ್ಲ. ...ಹಾಗೆಯೇ ಪ್ರಾಕೃತ, ಅಪಭ್ರಂಶ, ಪಾಳಿ, ...ಗಧಿ, ಶೂರಸೇನಿ ಮುಂತಾದ ಭಾಷೆಗಳು ...ಅಗಾಧವಾದ ಜ್ಞಾನ ಸಂಪತ್ತನ್ನು ಅಡಗಿಸಿ ಕೊಂಡಿವೆ. ಅವುಗಳನ್ನು ಆಳವಾಗಿ ಅಧ್ಯಯನ ಮಾಡದೆ ನಾವು ಕಳೆದುಕೊಂಡಿರುವುದು ಬಹಳಷ್ಟಿದೆ. ಕನ್ನಡದ ಉದಾಹರಣೆಯನ್ನೇ ತೆಗೆದುಕೊಂಡರೆ ನಮ್ಮ ಪ್ರಾರಂಭದ ಕಾವ್ಯಗಳು ಸಂಸ್ಕೃತದಿಂದ ಪಡೆದುದಕ್ಕಿಂತ ಹೆಚ್ಚಾಗಿ ಪ್ರಾಕೃತದಿಂದ ಪಡೆದದ್ದು ಹೆಚ್ಚು, ಆದರೆ ಈ ಪ್ರಾಕೃತಗಳ ಅಧ್ಯಯನ ನಮ್ಮ ವಿದ್ವಾಂಸರ ಅವಜ್ಞೆಗೆ ಒಳಗಾಗಿದೆ. ಇನ್ನು ಮುಂದಾದರೂ ಅದಕ್ಕೆ ಸೂಕ್ತ ರೀತಿಯ ಅಧ್ಯಯನಾವಕಾಶಗಳನ್ನು ಒದಗಿಸಿಕೊಡಬೇಕಾಗಿದೆ.




ಇಂದು ಸಂಸ್ಕೃತ ವಿಶ್ವವಿದ್ಯಾಲಯವನ್ನು ವಿರೋಧಿಸುತ್ತಿರುವ ನಮ್ಮ ಹಿರಿಯ ವಿದ್ವಾಂಸರು ಒಂದು ಸಲಹೆಯನ್ನು ಮುಂದಿಟ್ಟಿದ್ದಾರೆ. ಅದೆಂದರೆ ಸಂಸ್ಕೃತ ವಿಶ್ವವಿದ್ಯಾಲಯ ತೆರೆಯುವುದು ಬೇಡ. ಅದರ ಬದಲು ಪ್ರಾಚ್ಯ ಭಾಷಾ ವಿಶ್ವವಿದ್ಯಾಲಯ ತೆರೆಯಿರಿ ಎಂಬುದೇ ಆ ಸಲಹೆ. ಅವರ ಪ್ರಕಾರ ಈ ಪ್ರಾಚ್ಯ ಭಾಷಾ ವಿಶ್ವವಿದ್ಯಾಲಯದ ಪರಿಧಿಯಲ್ಲಿ ಭಾರತದ ಎಲ್ಲಾ ಪ್ರಾಚೀನ ಭಾಷೆಗಳ ಅಧ್ಯಯನ ಮಾಡಬಹುದು. ಇದೊಂದು ಒಳ್ಳೆಯ ಸಲಹೆ. ಈ ರೀತಿ ಸಂಸ್ಕೃತವೂ ಸೇರಿದಂತೆ ಎಲ್ಲಾ ಪ್ರಾಚ್ಯ ಭಾಷೆಗಳನ್ನೂ ಒಂದೇ ಸೂರಿನಡಿ ಅಧ್ಯಯನ ಮಾಡುವ ಯಾವುದೇ ವಿಶ್ವವಿದ್ಯಾಲಯವಾಗಲಿ, ಅಧ್ಯಯನ ಕೇಂದ್ರವಾಗಲಿ ಇಡೀ ಭಾರತದಲ್ಲಿ ಎಲ್ಲೂ ಇಲ್ಲ. ಆ ರೀತಿಯ ಒಂದು ಮಾದರಿ ಅಧ್ಯಯನ ಸಂಸ್ಥೆಯೊಂದನ್ನು ತೆರೆಯುವ ಅವಕಾಶ ಕರ್ನಾಟಕ ಸರ್ಕಾರಕ್ಕೆ ಈಗ ಒದಗಿ ಬಂದಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿರುವ ಈ ಸಂದರ್ಭದಲ್ಲಿ ಅದು ಅಪೇಕ್ಷಣೀಯವೂ ಹೌದು.

ವಿಶೇಷ ಲೇಖನ

ಲಿಂಗದೇವರು ಹಳೆಮನೆ

ಆದರೆ ಅದಕ್ಕೆ ಒಂದು ವಿಶ್ವವಿದ್ಯಾಲಯವನ್ನೇ ಸ್ಥಾಪಿಸಬೇಕೆ ಎಂಬುದು ಪ್ರಶ್ನೆ. ಪ್ರಾಚ್ಯ ಭಾಷಾ ಅಧ್ಯಯನ ಕೇಂದ್ರ ಎಂಬ ಸಂಸ್ಥೆಯೊಂದನ್ನು ತೆರೆದರೆ ಸಾಲದೆ? ಬಹುಶಃ ಈಗ ಸಂಸ್ಕೃತ ವೇದ ವಿಶ್ವವಿದ್ಯಾಲಯ ಸ್ಥಾಪಿಸಬೇಕು ಎಂಬುದರ ಹಿಂದೆ ಇಡೀ ಕರ್ನಾಟಕದಲ್ಲಿರುವ ಸಂಸ್ಕೃತ ಸಂಶೋಧನಾ ಪೀಠಗಳನ್ನು, ವಿಶ್ವವಿದ್ಯಾಲಯಗಳ, ಕಾಲೇಜುಗಳ ಸಂಸ್ಕೃತ ವಿಭಾಗಗಳನ್ನು ಅದರ ಪರಿಧಿಯಲ್ಲಿ ತರಬೇಕು ಎಂಬ ಉದ್ದೇಶ ಇರಬಹುದು. ಹಾಗೇನಾದರೂ ಮಾಡಿದರೆ ಉದ್ದೇಶಿತ ವಿಶ್ವವಿದ್ಯಾಲಯದ ಉದ್ದೇಶ ಈಡೇರಲಾರದು. ಯಾಕೆಂದರೆ ಉದ್ದೇಶಿತ ವಿಶ್ವವಿದ್ಯಾಲಯ ಬೋಧನಾಂಗ, ಪರೀಕ್ಷಾಂಗವಿಲ್ಲದ ಸಂಶೋಧನಾಂಗವಾಗಿ ಉಳಿಯಬೇಕು. ಇಲ್ಲದಿದ್ದರೆ ಅದೂಕೂಡಾ ಬೇರೆ ವಿಶ್ವವಿದ್ಯಾಲಯಗಳ ಹಾಗೆ ಜಾಡಿಗೆ ಬಿದ್ದು ಬಿಡುವ ಅಪಾಯವಿದೆ. ಆದ್ದರಿಂದ ವಿಶ್ವವಿದ್ಯಾಲಯದ ಬದಲು ಪ್ರಾಚ್ಯಭಾಷಾ ಉನ್ನತ ಅಧ್ಯಯನ/ಸಂಶೋಧನಾ ಕೇಂದ್ರ ತೆರೆಯುವುದು ಸೂಕ್ತ.



ವಿಶ್ವವಿದ್ಯಾಲಯ ಎಂದ ತಕ್ಷಣ ನೂರಾರು ಎಕರೆ ಜಮೀನು, ಕುಲಪತಿಗಳ ವಾಸಸ್ಥಾನ, ಆ ಕಟ್ಟಡ ಈ ಕಟ್ಟಡ ಹೀಗೆ ಅದೊಂದು ಭ್ರಮಾಲೋಕ, ಅದಕ್ಕೆಂದೇ ಕೋಟ್ಯಾಂತರ ರೂಪಾಯಿ ವ್ಯಯವಾಗುತ್ತದೆ. ಇಷ್ಟೆಲ್ಲಾ ಮೂಲಸೌಲಭ್ಯದ ಅವಶ್ಯಕತೆ ಇಲ್ಲಿ ಬೇಕಾಗಿಲ್ಲ, ಅಲ್ಲದೆ ಇಲ್ಲಿಯ ಸಂಶೋಧನೆ ಕೂಡಾ ನೂರಾರು ವರ್ಷ ನಡೆಯುವಂಥದೂ ಅಲ್ಲ, ಯಾಕೆಂದರೆ ಸಂಶೋಧನೆ ಅಥವಾ ಅಧ್ಯಯನಕ್ಕೆ ಒಳಪಡುವ ಈ ಭಾಷೆಗಳು ಯಾವುವೂ ಜೀವಂತ ಭಾಷೆಗಳೂ ಅಲ್ಲ, ಇವುಗಳ ಅಧ್ಯಯನಕ್ಕೆ ಅನಾವಶ್ಯಕವಾಗಿ ಖರ್ಚು ಮಾಡುವ ಹಣವನ್ನು ಜೀವಂತವಾಗಿರುವ ಕನ್ನಡ ಭಾಷೆಯ, ಮುಖ್ಯವಾಗಿ ಕನ್ನಡ ಮಾಧ್ಯಮ ಶಾಲೆಗಳ ಅಭಿವೃದ್ಧಿಗೆ ಒಳಪಡಿಸಬಹುದು. ಆದ್ದರಿಂದ ಸಂಸ್ಕೃತ ವೇದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದನ್ನು ಪ್ರತಿಯೊಬ್ಬ ಪ್ರಜ್ಞಾವಂತ ವ್ಯಕ್ತಿಯೂ ವಿರೋಧಿಸಬೇಕು. ಪ್ರಾಚ್ಯ ಭಾಷಾ ಉನ್ನತ ಅಧ್ಯಯನ/ಸಂಶೋಧನಾ ಕೇಂದ್ರ ತೆರೆಯುವಂತೆ ಆಗ್ರಹಿಸಬೇಕು.. ■

ಜನಸಾಮಾನ್ಯರ ದಾರಿ ತಪ್ಪಿಸಿದ್ದು ಹೇಗೆ?

ಮೇ 15 ರಂದು ನಾನು ಅನಾರೋಗ್ಯದಿಂದಾಗಿ ಓರ್ವ ವೈದ್ಯರ ಬಳಿ ಹೋಗಿದ್ದೆ, ಸಹಜವಾಗಿಯೇ ಚುನಾವಣೆಯ ಫಲಿತಾಂಶದ ಮಾತುಗಳೂ ಬಂದವು. ಆದರೆ ಸಮಾಜದ ಮೇಲ್ಮಟ್ಟದಲ್ಲಿರುವ, ವೃತ್ತಿನಿರತರಾದ ನಾಗರಿಕರೊಬ್ಬರ ಬಾಯಿಯಿಂದ ಬಂದ ಮಾತುಗಳು ನನ್ನನ್ನು ಆಘಾತದಿಂದ ಮೂಕಳನ್ನಾಗಿಸಿತು. ಅವರೆಂದರು, "ಗಾಂಧಿಯ ತತ್ವಸಿದ್ಧಾಂತಗಳು ಗೋಡ್ಸೆಗೆ ಇಷ್ಟವಾಗಲಿಲ್ಲ, ಅದು ಎಲ್ಲರಿಗೂ ಇಷ್ಟವಾಗಬೇಕೆಂದೂ ಇಲ್ಲ, ಆದಕಾರಣ ಆತ ಗಾಂಧಿಯನ್ನು ಕೊಂದ!" ಅಂದರೆ ಒಬ್ಬರಿಗೆ ಇನ್ನೊಬ್ಬರ ಧೋರಣೆ, ತತ್ವ ಸಿದ್ಧಾಂತಗಳು ಇಷ್ಟವಾಗದಿದ್ದರೆ ಅವರನ್ನು ಕೊಲೆ ಮಾಡುವ ಅಧಿಕಾರವೂ ಇತರರಿಗೆ ಇದೆಯೆಂದು ಇದರರ್ಥವೇ? ಹಳ್ಳಿಯ ಓರ್ವ ಅನಕ್ಷರಸ್ಥ ಗಾಂಧೀಜಿಯ ಕುರಿತು ಏನೂ ತಿಳಿಯದವ ಇಂತಹ ಮಾತನಾಡಿದರೆ ಅರಗಿಸಿಕೊಳ್ಳಬಹುದಾಗಿತ್ತು, ಆದರೆ ಅತ್ಯುತ್ತಮ ವೃತ್ತಿಯಲ್ಲಿರುವ ಉತ್ತಮ ಸಂಸ್ಕೃತಿಯನ್ನು ಮೈಗೂಡಿಸಿ ಕೊಂಡವರೆಂದು ಹೆಸರು ಪಡೆದವರೊಬ್ಬರಿಂದ ಇಂತಹ ಮಾತುಗಳು ಬರುವಂತಾದರೆ ಅದನ್ನು ಅರಗಿಸಿಕೊಳ್ಳುವುದು ಹೇಗೆ? ಸಂಘ ಪರಿವಾರದ ಇದೇ ಜನರು ಅಧಿಕಾರ ದೊರೆಯದೆಂದಾದಾಗ ಗಾಂಧೀಜಿಯ ಪ್ರತಿಮೆಯ ಬುಡದಲ್ಲಿ ಕುಳಿತು ಉಪವಾಸ ಸತ್ಯಾಗ್ರಹ ಮಾಡಿದ್ದನ್ನು ನಾವು ಮರೆಯುವುದಾದರೂ ಹೇಗೆ? ಈ ಮಹನೀಯರು ಹೆಣ್ಣುಮಕ್ಕಳು ಪಬ್ಬಿಗೆ ಹೋದ ಕುರಿತೂ ಕೆಂಡ ಕಾರಿದರು. ಅಧಿಕಾರ ಕೈಗೆಟಕುವ ದೂರದಲ್ಲಿದೆ ಎಂದು ಈ ಜನರು ಸಂಭ್ರಮಪಡುತ್ತಿದ್ದರು. ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸುವವರು ಅಧ್ವಾಣಿಯೇ, ಮೋದಿಯೇ ಎಂಬುದು ಮಾತ್ರ ಅವರ ಸಮಸ್ಯೆಯಾಗಿತ್ತು.

ಫಲಿತಾಂಶದ ಹಿಂದಿನ ದಿನದವರೆಗೂ ಮುಸ್ಲಿಮರು ಒಂದು ವಿಧದಲ್ಲಿ ಚಡಪಡಿಸುತ್ತಿದ್ದರೆನ್ನಬಹುದು. "ಕೇಂದ್ರದಲ್ಲೂ ಅವರೇ ಅಧಿಕಾರಕ್ಕೆ ಬಂದರೆ ನಾವು ದೇಶ ಬಿಡಬೇಕಾಗುತ್ತದೆ" ಎಂದು ನನ್ನೊಡನೆ ಒಬ್ಬರೆಂದಿದ್ದರು. ಆ ಸಂದರ್ಭದಲ್ಲಿ ಕರಾವಳಿಯ ಕೋಮುವಾದೀಕರಣದಿಂದಾಗಿ ಮುಸ್ಲಿಮರು ಎಷ್ಟೊಂದು ಆತಂಕಕ್ಕೀಡಾಗಿದ್ದರೂ ಎಂತಹ ಪ್ರಚೋದನೆಯಿಂದಲೂ ಅವರು ಸಹನೆ ಕಳೆದುಕೊಂಡಿರಲಿಲ್ಲ, ಇಲ್ಲಿ ಕೋಮುಗಲಭೆ ಪ್ರಾರಂಭಿಸಬೇಕೆಂದಿದ್ದ ಕೋಮುವಾದಿಗಳ ತಂತ್ರ ಫಲಿಸಿರಲಿಲ್ಲ.

ಫಲಿತಾಂಶದ ಹಿಂದಿನ ದಿನದವರೆಗೂ ಪತ್ರಿಕೆಗಳೂ, ದೃಶ್ಯ ಮಾಧ್ಯಮಗಳೂ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಸೀಟುಗಳ ಮಧ್ಯೆ ಹೆಚ್ಚು ವ್ಯತ್ಯಾಸವಿರಲಾರದೆಂದೇ ಪ್ರಚಾರ ಮಾಡುತ್ತಿದ್ದವು. ದಿನಾಂಕ 14 ಮತ್ತು 15 ರಂದು ಮಾಧ್ಯಮಗಳು ಜಯಲಲಿತಾಗೆ ನೀಡಿದ ಪ್ರಚಾರವನ್ನು ಕಂಡು ನಾನು ಹತಾಶಳಾಗಿದ್ದೆ, ಆಶೆ, ನಿರಾಶೆಗಳ ನಡುವೆಯೂ ನನ್ನ ಹೃದಯಾಂತರಾಳದಲ್ಲಿ ಚಿಕ್ಕದೊಂದು ಬೆಳ್ಳಿರೇಖೆ ಮಿಂಚಿ ಮರೆಯಾಗುತ್ತಿತ್ತು, ಈ ದೇಶದ ಜನರು ಅಷ್ಟು ಮೂರ್ಖರಲ್ಲ, ಜನರು ಈ ಹಿಂದೆಯೂ ಮೂರು ಬಾರಿ ಬುದ್ಧಿವಂತಿಕೆಯಿಂದ ಮತ ಚಲಾಯಿಸಿದ್ದರು. ತುರ್ತುಪರಿಸ್ಥಿತಿಯ ಬಳಿಕ ಜನರು ಇಂದಿರಾಗಾಂಧಿಯವರ ವಿರುದ್ಧ ಮತ ಚಲಾಯಿಸಿದ್ದರು. ಆ ಬಳಿಕ ಇಂದಿರಾಗಾಂಧಿಯವರ ಕೊಲೆಯಾದಾಗ ಹಾಗೂ ರಾಜೀವ್‌ಗಾಂಧಿಯವರ ಕೊಲೆಯಾದಾಗ ಜನರು ಕಾಂಗ್ರೆಸ್ಸನ್ನು ಆರಿಸಿದ್ದರು. ಹಾಗೆಯೇ ಈ ಬಾರಿಯೂ ಏನಾದರೊಂದು ಬದಲಾವಣೆಯಾಗಬಹುದೆಂಬ ದೂರದ ಆಸೆ ಮಿಂಚಿ ಮರೆಯಾಗುತ್ತಿತ್ತು, ಮಾಧ್ಯಮಗಳ ಪ್ರಚಾರದಲ್ಲಿ ಪೂರ್ತಿ ವಿಶ್ವಾಸವಿಡುವುದು ನನ್ನಿಂದ ಸಾಧ್ಯವಾಗಿರಲೇ ಇಲ್ಲ, ನಿರಾಶೆಯ ನಡುವೆಯೂ ನಾನು ಆಶಾವಾದಿಯಾಗಿದ್ದೆ. 'Hope against hope' ಎನ್ನುತ್ತಾರಲ್ಲ, ಹಾಗೆ.

ಆ ವೈದ್ಯರ ಬಳಿಯಿಂದ ಹಿಂತಿರುಗುತ್ತಾ ನಾನು ರಿಕ್ಷಾ ಡ್ರೈವರ್ ಹತ್ತಿರ, "ನಿಮ್ಮ ಓಟು ಯಾರಿಗೆ?" ಎಂದು ಮಾತಿಗೆಳೆದೆ.

"ನಮ್ಮದು ಬಿಜೆಪಿಗೆ" ಆತನೆಂದ. ನಾನು ನಿರಾಶೆಯ ಆಳಕ್ಕಿಳಿಯುತ್ತಿದ್ದಂತೆ ಆತನೇ ಮಾತು ಮುಂದುವರಿಸಿದ.

"ಆ ವಿದೇಶಿ ಮಹಿಳೆ ಸೋನಿಯಾ ಗಾಂಧಿ ಯಾಕೆ ನಮ್ಮ ದೇಶವನ್ನು ಆಳಬೇಕು? ಇಲ್ಲಿ ಬೇರೆ ಮಹಿಳೆಯರಿಲ್ಲವಾ? ಇಲ್ಲಿ ಎಲ್ಲ ನಾಶ ಮಾಡಿದ್ದು ಇಂದಿರಾಗಾಂಧಿ. ಲಾಲ್ ಬಹದ್ದೂರ್ ಶಾಸ್ತ್ರಿಯನ್ನು ರಷ್ಯಾಕ್ಕೆ ಕಳುಹಿಸಿ ಆಕೆಯೇ ಕೊಲ್ಲಿಸಿದ್ದು! ಅಧಿಕಾರಕ್ಕಾಗಿ ಆಕೆ ಏನು ಮಾಡಲೂ ಸಿದ್ಧಳಿದ್ದಳು! ಸಂಜಯ್ ಗಾಂಧಿ ಒಳ್ಳೆಯವರು. ಅಂತಹ ಮಗನನ್ನೇ ಅವಳು ಕೊಲ್ಲಿಸಿದಳು. ವರುಣ್ ಗಾಂಧಿ ಒಳ್ಳೆಯವರು. ಅವರು ಅಧಿಕಾರಕ್ಕೆ ಬರಬೇಕು....." ಹೀಗೇ ಸಾಗಿತ್ತು ಅವನ ಮಾತುಗಳು, ನಾನು ಮೌನ ವಹಿಸಿದೆ.

ನನ್ನ ಹೃದಯಾಂತರಾಳದ ಆಶಾಕಿರಣ ಪೂರ್ತಿ ನಂದಿತು. ಸಂಘ ಪರಿವಾರ ಈ ಅನಕ್ಷರಸ್ಥ ಹಿಂದುಳಿದ ಜನಸಾಮಾನ್ಯರ ಮೆದುಳನ್ನು ಯಾವ ರೀತಿ ತೊಳೆದಿಟ್ಟಿದೆ, ಎಂತೆಂತಹ ಸುಳ್ಳುಗಳನ್ನು ಅವರ ಮನದಾಳದಲ್ಲಿ ಬೇರು ಬಿಡುವಂತೆ ಮಾಡಿದೆಯಲ್ಲಾ ಎಂದು ನಾನು ಆಶ್ಚರ್ಯ ಚಕಿತಳಾದೆ. ಅಲ್ಲ, ಓರ್ವ ತಾಯಿ ಅಧಿಕಾರಕ್ಕಾಗಿ ತನ್ನ ಮಗನನ್ನು ಕೊಲೆ ಮಾಡಿಸುತ್ತಾಳೆ ಎಂದು ಈ ಜನರನ್ನು ನಂಬಿಸಿದ್ದು ಹೇಗೆ?

ಎಡಪಕ್ಷಗಳು ತೃತೀಯ ರಂಗವೆನ್ನುತ್ತಾ ಇಡೀ ಕರ್ನಾಟಕವನ್ನು ಸಂಘ ಪರಿವಾರದ ಕೈಯಲ್ಲಿಟ್ಟ ತಂದೆ, ಮಗನ ಜೊತೆ ಸೇರಿಕೊಂಡು ಅಧಿಕಾರದ ಕನಸು ಕಂಡರು. ಈ ಎಲ್ಲ ಗೊಂದಲ, ಆಸೆ ನಿರಾಶೆಗಳ ನಡುವೆಯೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಾರದೇ ಎಂದು ಆಸೆ, ನಿರಾಸೆಗಳ ನಡುವೆ ತೂಗುಯ್ಯಾಲೆಯಾಡುವ ಮನದೊಡನೆ ನಿದ್ರೆ ಕಳೆದುಕೊಂಡು ಮಲಗಿದ್ದು ಉತ್ಪ್ರೇಕ್ಷೆಯ ಮಾತಲ್ಲ.



ಚುನಾವಣೆಯ ಫಲಿತಾಂಶ ಈಗ ಇತಿಹಾಸ. ನಮ್ಮ ದೇಶದ ಜನಸಾಮಾನ್ಯರು ಹೆಡ್ಡರೂ ಅಲ್ಲ; ಮೂರ್ಖರೂ ಅಲ್ಲ. ಮತ ನೀಡಲು ಇವರಿಗೆ ಯಾರೂ ಕಲಿಸಬೇಕಾಗಿಲ್ಲ!

ಅಂದರೆ ಕಾಂಗ್ರೆಸ್ ಅತ್ಯುತ್ತಮ ಪಕ್ಷ. ಅತ್ಯುತ್ತಮ ಆಡಳಿತ ನೀಡಬಲ್ಲದು ಎಂಬುದು ಇದರರ್ಥವಲ್ಲ. ಅಲ್ಲಿಯೂ ಸಮಯಸಾಧಕರೂ, ಸ್ವಾರ್ಥಿಗಳೂ ಇದ್ದಾರೆ. ಆದರೆ ಅವರು ಜನರ ನಡುವೆ ಗೋಡೆ ಎಬ್ಬಿಸಲಾರರು ಎಂಬ ವಿಶ್ವಾಸ ನಮಗಿದೆ. ಸಂಘ ಪರಿವಾರ ಅಧಿಕಾರಕ್ಕೆ ಬಂದರೆ ಪರಿಣಾಮವೇನೆಂಬುದು ಈಗಾಗಲೇ ನಮಗೆ ಅನುಭವವಾಗಿದೆ.

ಎಡಪಕ್ಷಗಳು ಕಾಂಗ್ರೆಸ್‌ನೊಡನೆ ಎಷ್ಟೇ ಜಗಳವಾಡಿದರೂ ಹಿಂದಿನ ಬಾರಿಯಂತೆ ಈ ಬಾರಿಯೂ ಅವರು ಕಾಂಗ್ರೆಸ್‌ನೊಡನೆ ಇರಬೇಕಾಗಿತ್ತು; ಯುಪಿಎಯಿಂದ ಹೊರಹೋಗಬಾರದಿತ್ತು. ಕಳೆದ ಐದು ವರ್ಷಗಳು ಮನಮೋಹನ ಸಿಂಗರ ಆಡಳಿತದಲ್ಲಿ ಹಗರಣಗಳಿಲ್ಲವಾಗಿದ್ದರೆ ಅದಕ್ಕೆ ಎಡಪಕ್ಷಗಳೂ ಕೂಡಾ ಕಾರಣ ಎಂಬುವದನ್ನೂ ನಾವು [illegible]


● ಸಾರಾ ಅಬೂಬಕ್ಕರ್

ಪಿಕ್‌ಪಾಕೆಟ್ ಸಾಹಿತಿಗಳು

ಇದೊಂಥರಾ ತಮಾಷೆ ಪ್ರಸಂಗ!

ಅಷ್ಟೇ ಅಲ್ಲ ಬರಹಗಾರರಿಗಿರಬೇಕಾದ ಕನಿಷ್ಠ Integrityಯ ವಿಚಾರಕ್ಕೆ ಬಂದರೆ ಬೇಸರ ಹುಟ್ಟಿಸುವ ಸಂಗತಿಯೂ ಹೌದು.

ನೀವು ಚಂದ್ರಶೇಖರ ಆಲೂರು ಹಾಗೂ ಜೋಗಿ ಎಂಬ ಬರಹಗಾರರ ಹೆಸರು ಕೇಳಿರಬಹುದು. ಇವರಿಬ್ಬರೂ ಈಗ ಕೃತಿಚೌರ್ಯ ಮಾಡಿ ಹಸಿಹಸಿಯಾಗಿ ಸಿಗೇ ಬಿದ್ದಿದ್ದಾರೆ.



ಇವರ ಪೈಕಿ ಆಲೂರು ಹಾಲಿ 'ಹಾಯ್ ಬೆಂಗಳೂರು' ವಾರಪತ್ರಿಕೆಯಲ್ಲಿ ಒಂದು ಅಂಕಣ ಬರೆಯುತ್ತಿದ್ದಾರೆ. ಇನ್ನು ಜೋಗಿ ಉರುಫ್ ಗಿರೀಶ್ ರಾವ್ ಕನ್ನಡ ಪ್ರಭದಲ್ಲಿ ನೌಕರಿ ಮಾಡುತ್ತಾ ಟಿವಿ ಧಾರಾವಾಹಿಗೆ ಸಂಭಾಷಣೆ ಬರೆಯುತ್ತಾ, ವಾರಕ್ಕೊಂದು ಕತೆ, ಎರಡು ತಿಂಗಳಿಗೊಂದು ಕಥಾ ಸಂಕಲನ ಹೊರ ತರುತ್ತಾ ಇರುತ್ತಾರೆ. ಹೆಚ್ಚು ಕಡಿಮೆ **busy like a bee** ತರಹದ ಬರಹಗಾರರಿವರು. ಬರೆಯಲಿ ಸಂತೋಷ, ಹೇಗೆ ಒಂದು ಜೇನುಹುಳು ಹತ್ತಾರು ದಿಕ್ಕಿನಲ್ಲಿ ಹಾರಾಡುತ್ತಾ ಸಾವಿರಾರು ಹೂಗಳ ಮಕರಂದ ಹೀರಿ ತಂದು ತನ್ನ ಗೂಡಿನಲ್ಲಿ ಪೇರಿಸಿಡುತ್ತಾ ಕೊನೆಗೆ ತಿನ್ನುವವರಿಗೆ ಸಂಭ್ರಮ ಮೂಡಿಸುವಂಥ ಸಿಹಿಯನ್ನು ಉಣಬಡಿಸುತ್ತದೆಯೋ ಅದೇ ರೀತಿ ಸಾಹಿತಿಯಾದವನೂ ಇರುತ್ತಾನೆ.



ತನ್ನ ಅನುಭವ, ಗ್ರಹಿಕೆಯನ್ನು, ಎಲ್ಲೋ ಕಂಡದ್ದನ್ನು, ಯಾರೋ ಹೇಳಿದ್ದನ್ನು, ಯಾವಾಗಲೋ ಓದಿದ್ದನ್ನು ಹೀರಿಕೊಂಡು ಅದಕ್ಕೆ ತನ್ನ ಸೃಜನಶೀಲತೆಯನ್ನು ಸೇರಿಸಿ ಓದುಗ ಪ್ರಭುವಿಗೆ ಉಣಬಡಿಸುತ್ತಿರುತ್ತಾರೆ.... ಅಲ್ಲವೆ?

ಆದರೆ

ಜೇನು ಹುಳವನ್ನು ನಾವ್ಯಾರಾದರು "ನೀನು ಈ ಮಕರಂದವನ್ನು ಯಾವ ಹೂವಿನಿಂದ ತಂದೆ?" ಅಂತ ಕೇಳಲಿಕ್ಕಾಗುವುದಿಲ್ಲ. But ಬರಹಗಾರರನ್ನು ಕೇಳಬೇಕಾಗುತ್ತದೆ!

ಅದೂ ಬಹುತೇಕರಿಗೆ ಗೊತ್ತಿರುವ ಪ್ರಖ್ಯಾತ ವಿದೇಶಿ ಬರಹಗಾರರ ಕತೆ, ಬರಹಗಳನ್ನು ಕನ್ನಡಕ್ಕೆ ಭಟ್ಟಿ ಇಳಿಸುವ ಆತುರದಲ್ಲಿ ಕನಿಷ್ಠ ಮೂಲ ಲೇಖಕರ ಹೆಸರೂ ಹೇಳದೆ, ಇವೆಲ್ಲಾ ತಾವೇ ಕಂಡುಹಿಡಿದ ಕಲಾಕೃತಿಗಳೆಂಬಂತೆ ಪೋಜು ಕೊಡುತ್ತಾ ಹೋದರೆ ಅಂತವರನ್ನು ಕ್ಷಣ ನಿಲ್ಲಿಸಿ "ಯಾಕೆ ಹೀಗೆ ಮಾಡುತ್ತಿದ್ದೀರಿ?" ಅಂತ ಕೇಳಿದರೆ ತಪ್ಪೇನೂ ಇಲ್ಲ.

ಜೋಗಿ ಜೋಳಿಗೆಯೊಳಗೆ ಮೊಪಾಸಾ

ಇಂಟರ್‌ನೆಟ್‌ನಲ್ಲಿ ಕನ್ನಡದಲ್ಲಿ 'ಅವಧಿ' ಎಂಬ ಒಂದು ಬ್ಲಾಗ್ ಇದೆ. ಇದರಲ್ಲಿ ಅನೇಕರು ಅಂಕಣ, ಕತೆ, ಪದ್ಯ etc ಬರೆಯುತ್ತಿರುತ್ತಾರೆ. ಇದೇ ಥರ ಕೆಂಡಸಂಪಿಗೆ, ದಟ್ಸ್ ಕನ್ನಡ ಮುಂತಾದ ಬ್ಲಾಗ್‌ಗಳಿವೆ.

ಏನಾಯಿತೆಂದರೆ ಮೊನ್ನೆ ಜೂನ್ 14 ನೇ ತಾರೀಖು ಮಾನ್ಯ ಗಣ್ಯ ಸಾಹಿತಿ ಜೋಗಿಯವರು 'ಎಂದೋ ಕೇಳಿದ ಒಂದು ಕತೆಯನು' ಹೆಸರಿನ ತಮ್ಮ ಕತೆಯೊಂದನ್ನು ಅವಧಿಯೊಳಗೆ ಹಾಕಿದ್ದಾರೆ. ಅನೇಕ ಇಂಟರ್‌ನೆಟ್ ವ್ಯಸನಿ ಸಾಹಿತ್ಯಾಸಕ್ತರು ಇದನ್ನು ಓದಿ ಮೆಚ್ಚಿ ಪ್ರತಿಕ್ರಿಯೆ ನೀಡಿದ್ದಾರೆ. ಇದಾದ ಒಂದೆರಡು ದಿನದ ನಂತರ ಬಂದು ಎಂಬಾಕೆ ಒಂದು ಕಾಮೆಂಟ್ ಪೋಸ್ಟ್ ಮಾಡಿ "ಏನು ಜೋಗಿಯವರೆ, ನಿಮ್ಮ ಕತೆ ಮೊಪಾಸಾನಾ ಕತೆಯಲ್ಲವೆ?" ಅಂತ ಡೌಟು ವ್ಯಕ್ತಪಡಿಸಿದ್ದಾಳೆ. ಅಷ್ಟೇ ಅಲ್ಲ ಸಾಗರದಿಂದ ವರ್ಷಾ ಎಂಬಾಕೆ ಇನ್ನೊಂದು ಕಾಮೆಂಟ್ ಕಳುಹಿಸಿ "ಜೋಗಿಯವರೆ ನೀವು ನಮಗೆ ನಿರಾಶೆ ಮಾಡಿದಿರಿ, ನೀವು ಮೂಲ ಲೇಖಕ ಮೊಪಾಸಾನಿಗೂ ಕ್ರೆಡಿಟ್ ಕೊಡಬೇಕಿತ್ತು" ಅಂದಿದ್ದಾಳೆ.

ಅವಧಿ ಬ್ಲಾಗ್‌ನಲ್ಲಿ ಹಾಗೂ ಜೋಗಿಮನೆ ಯೆಂಬ ಸ್ವತಃ ಜೋಗಿಯವರ ಬ್ಲಾಗ್‌ನಲ್ಲಿ ಈ ಕೃತಿಚೌರ್ಯದ ವಿಚಾರ ಈಗ ಚರ್ಚೆಯಾಗುತ್ತಿದೆ.

ಆದರೆ ಜೋಗಿ ಈ ಬಗ್ಗೆ ಮಾತೇ ಆಡದೆ ಕತೆಯ ಟೈಟಲನ್ನು 'ಎಂದೋ ಕೇಳಿದ ಒಂದು ಕತೆಯನು' ಎಂಬುದರ ಬದಲಾಗಿ ಈಗ 'ಚೂರಿ' ಎಂದು ಬದಲಾಯಿಸಿ ಸುಮ್ಮನಾಗಿಬಿಟ್ಟಿದ್ದಾರೆ.

ಏನಿದರ ಅರ್ಥ?

ಅಂದಹಾಗೆ ಜೋಗಿಯವರ ಈ 'ಚೂರಿ' ಕತೆಯು ಕೊಲಂಬಿಯಾದ ಪ್ರಸಿದ್ಧ ಲೇಖಕ ಹರ್ನಾನ್‌ಡೋ ಟೆಲ್ಲೆಜ್ ಅವರ **'Just lather that's all'** ಕತೆಯ ಅನುವಾದ ಎಂದು ಓರ್ವ ಬ್ಲಾಗರ್ ಅನುಮಾನ ವ್ಯಕ್ತಪಡಿಸಿದ್ದಾರೆ. ಆದರೆ ಅದು ನಿಜವಲ್ಲ, ಬದಲಾಗಿ ಅದು ಫ್ರಾನ್ಸ್ ದೇಶದ ಪ್ರಸಿದ್ಧ ಬರಹಗಾರ ಗಾಯ್ ದೆ ಮೊಪಾಸಾನ 'ದಿ ಆರ್ಟಿಸ್ಟ್' ಕತೆಯ ಅನುವಾದ. ಈ ಕತೆ **1951**ರಲ್ಲೇ 'ದಿ ನೈಫ್ ಥ್ರೋಅರ್' ಎಂದು ಇಂಗ್ಲಿಷ್ ಸಿನಿಮಾ ರೂಪದಲ್ಲಿ ಬಂದಿತ್ತು.

ಮೊಪಾಸಾನ ಕತೆಯನ್ನು ಜೋಗಿ ಮಕ್ಕಿಕ್ಕಾಮಕ್ಕಿ ಅನುವಾದ ಮಾಡಿಲ್ಲ, ಬದಲಾಗಿ ಕನ್ನಡೀಕರಿಸಿದ್ದಾರೆ. ಆದರೆ ಕತೆಯ ಸಾರಾಂಶ ಮೂಲಕ್ಕೆ ನಿಷ್ಠವಾಗಿದೆ. ಎರಡರಲ್ಲೂ ಸರ್ಕಸ್‌ನಲ್ಲಿ ಚೂರಿ ತೂರುವವನಿದ್ದಾನೆ. ಆತನ ಹೆಂಡತಿಯೇ ಅವನಿಗೆ ಮೋಸ ಮಾಡಿದ್ದಾಳೆ. ತನ್ನ ಚೂರಿ ತೂರುವ ಶೋನಲ್ಲಿ ಆಕೆಯ ಮೇಲೆ ಬೇಕಂತಲೇ ಚೂರಿ ತೂರಿ ಅವಳನ್ನು ಕೊಳ್ಳಬೇಕೆಂದು ಇಚ್ಛಿಸುತ್ತಾನೆ. ಆದರೆ ಆಕೆಯ ಮೇಲಿನ ಕೋಪಕ್ಕಿಂತಲೂ ಆತನಿಗೆ ಕರಾರುವಕ್ಕಾಗಿ ತನ್ನ ಚೂರಿ ತೂರುವ ಕಲೆಯ ಬಗ್ಗೆ ಹೆಮ್ಮೆ ಇದೆ. ಆದ್ದರಿಂದ ಆತ ಆಕೆಯನ್ನು ಕೊಲ್ಲದೆ ಸುಮ್ಮನಾಗುತ್ತಾನೆ.

ಎಷ್ಟೇ ತಿಪ್ಪರಲಾಗ ಹೊಡೆದರೂ ಇದು ಖಂಡಿತವಾಗಿಯೂ ಮೊಪಾಸಾನ ಕತೆ. ಆದರೆ ಜೋಗಿಯಂತಹ ಬಿಡುವಿಲ್ಲದೆ ಬರೆಯುತ್ತಿರುವ, ಇತ್ತೀಚೆಗೆ ಹೆಸರು ಗಿಟ್ಟಿಸುತ್ತಿರುವ ಬರಹಗಾರನೊಬ್ಬ ಹೀಗೆ ಯಾರದ್ದೋ ವಿದೇಶಿಯನ ಕತೆಯನ್ನು ಕನ್ನಡಕ್ಕೆ ಭಟ್ಟಿಯಿಳಿಸಿ ಅದರ ಮೂಲದ ಬಗ್ಗೆ ಯಾವ ಸುಳಿವೂ ನೀಡದೆ ಅದು ತನ್ನದೇ ಕೃತಿಯೆಂಬಂತೆ ಪೋಸು ಕೊಡುವುದು ಬೇಸರ ತರುತ್ತದಲ್ಲವೇ? ಅದೂ, ಓದುಗರು ಇದರ ಬಗ್ಗೆ ತಮ್ಮ ಸಂಶಯವನ್ನು ವ್ಯಕ್ತಪಡಿಸಿದ ನಂತರವೂ ಒಪ್ಪಿಕೊಳ್ಳದ ಜೋಗಿ "ಎಂದೋ ಕೇಳಿದ ಕತೆ ಇದು. ಮೊನ್ನೆ ಡಿಸ್ಕವರಿ ಚಾನೆಲ್ಲು ನೋಡುವಾಗ ನೆನಪಾಯಿತು. ನಮ್ಮ ಇಂಗ್ಲಿಷ್ ಮೇಷ್ಟ್ರು ವೆಂಕಟರಮಣ ಬಳ್ಳ ಇಂತಹ ಅನೇಕ ವ್ಯಭಿಚಾರ ಮತ್ತು ಶಿಕ್ಷೆಯ ಕತೆಗಳನ್ನೇ ಹೇಳುತ್ತಿದ್ದರು. ವೈಎನ್‌ಕೆ ಕೂಡ ಇಂಥದ್ದನ್ನು ಮೆಚ್ಚುತ್ತಿದ್ದರು" ಎಂದಷ್ಟೇ ಹೇಳಿ ನಿಜಕ್ಕೂ ತಾನು ಈ ಕೃತಿಚೌರ್ಯ ಮಾಡಿಲ್ಲ, ಬದಲಾಗಿ ಎಂದೋ ಕೇಳಿದ ಕತೆಯನ್ನು ಬರೆದಿದ್ದೇನೆ ಎಂಬಂತೆ ಉತ್ತರಿಸಿದ್ದಾರೆ. ಇದು ಡಬಲ್ ಬೇಸರ ತರುವ ವಿಷಯವಲ್ಲವೇ?






ಆಲೂರು ಕದ್ದ ವಯಲಿನ್

ಇದು ಸ್ವಲ್ಪ ಹಿಂದಿನ ಕತೆ.

ಈ ಚಂದ್ರಶೇಖರ ಆಲೂರು ಪ್ರಬಂಧ ಬರಹಗಾರರಾಗಿ ಬನಶಂಕರಿ, ಕದಿರೇನಹಳ್ಳಿ ಕ್ರಾಸ್, ಮೆಜೆಸ್ಟಿಕ್, ಈಜಿಪ್ಟ್, ಜೋರ್ಡಾನ್ ಮುಂತಾದ ಕಡೆ ವರ್ಲ್ಡ್ ಫೇಮಸ್ ಆಗಿದ್ದಾರೆ. ಇವರ ಬರಹಗಳನೇಕವು ಪುಸ್ತಕಗಳಾಗಿಯೂ ಮಾರಾಟಕ್ಕೆ ಸಿಗುತ್ತವೆ.

ಈಗ್ಗೆ ಒಂದು ವರ್ಷದ ಹಿಂದೆ **2008** ರ ಜುಲೈ **18** ರ 'ಹಾಯ್ ಬೆಂಗಳೂರು' ಟ್ಯಾಬ್ಲಾಯ್ಡ್‌ನಲ್ಲಿ 'ಏಳು ಡಾಲರ್ ವಯಲಿನ್' ಎಂಬ ಆಲೂರರ ಒಂದು ಬರಹ ಪ್ರಕಟವಾಯಿತು. ಆಲೂರರ 'ಒಲಿದಂತೆ ಹಾಡುವೆ' ಕಾಲಂನಲ್ಲಿತ್ತು ಈ ವಯಲಿನ್ ಕತೆ. **Infact** ಚೆನ್ನಾಗಿರುವ ಕತೆ ಅದು. ಆದರೆ ಇದೊಂದು ಪಿಕ್‌ಪ್ಯಾಕೆಟ್ ಸಾಹಿತ್ಯವಾಗಿತ್ತು.

1988ರ ರೀಡರ್ಸ್ ಡೈಜೆಸ್ಟ್ ಎಂಬ ಇಂಗ್ಲಿಷ್ ಮಾಸಪತ್ರಿಕೆಯಲ್ಲಿ ಪ್ರಕಟವಾಗಿದ್ದ **'Seven dollar violin'** ಎಂಬ ಕತೆಯನ್ನು ಮೇರಿ ಲೂ ಕ್ಲಿಂಗರ್



ಎಂಬಾಕೆ ಬರೆದಿದ್ದಳು. ಆದರೆ ನಮ್ಮ ಆಲೂರು ಮಹಾಶಯರು ಈ ವಯಲಿನ್ ಅನ್ನು ಕನ್ನಡದಲ್ಲಿ ನುಡಿಸಿದಾಗ ಅಪ್ಪಿತಪ್ಪಿಯೂ ಮೇರಿಯ ಹೆಸರನ್ನು ಹೇಳಲಿಲ್ಲ, ಇದೊಂದು ಅನುವಾದ ಎಂತಲೂ ಒಪ್ಪಿಕೊಳ್ಳಲಿಲ್ಲ, ಬದಲಾಗಿ ಅತೀ ಹಾಸ್ಯಾಸ್ಪದವಾಗಿ ಈ ಬರಹ ತಮಗೆ ಹೇಗೆ ಸಿಕ್ಕಿತೆಂದು intro ಬರೆದುಕೊಂಡರು. ಮಜಾ ಅಂದರೆ ಈ intr[o] ಸಹ ಅಸಲಿಯಾಗಿರದೆ ಅದೂ ಕೂಡ ಸೃಜನಶೀ[ಲ] ಕೃತಿಚೌರ್ಯವಾಗಿತ್ತು.

ಈ ವಯಲಿನ್ ಕಥೆಯ ಬೆನ್ನು ಹತ್ತಿ ಇಂಟರ್‌ನೆಟ್‌ನ[ಲ್ಲಿ] ತಪಾಸಣೆ ಮಾಡಿದಾಗ ಈ ಸಂಗತಿ ಕೆಲವರಿ[ಗೆ] ಗೊತ್ತಾಗಿದೆ.

ಅಸಲಿ ವಿಚಾರ ಏನೆಂದರೆ.....

ಆಲೂರರು ತಮಗೆ ಈ ಬರಹ ರೀಡರ್[ಸ್] ಡೈಜೆಸ್ಟ್‌ನಲ್ಲಿ ಸಿಕ್ಕಿತೆಂತಲೂ, ತಮ್ಮ ಕಿರಿಯ ಗೆಳೆ[ಯ] ಸ್ಯಾಂಡಿ, ಸಂಜಯ, ಜೀವನ... ಇತ್ಯಾ[ದಿ] ನಾಮಾಂಕಿತ ಸಂಜಯನು ಇದನ್ನು ಕಳಿಸಿದ್ದನೆಂತಲೂ, ಇದು ತನ್ನ ಮನ[ಸ್ಸು] ಸೆಳೆಯಿತು ಎಂತಲೂ ಒಂದು ಪುಟ[ದ] ಪೀಠಿಕೆ ಹಾಕುತ್ತಾರೆ.

ಮಜಾ ಅಂದರೆ ಇಂಟರ್‌ನೆಟ್‌ನಲ್ಲಿ ಈ ಕತೆ ಓದಲು ಸಿಗುತ್ತದೆ. ಅಲ್ಲಿ ಇದನ್ನು ಹಾಕಿರುವ ಯಾರೋ ವ್ಯಕ್ತಿ 'ನನಗೆ ರೀಡರ್[ಸ್] ಡೈಜೆಸ್ಟ್‌ನಲ್ಲಿದ್ದ ಈ ಕತೇನಾ ಯಾರೋ ಕಳಿಸಿದ್ದಕ್ಕೆ ಸಿಕ್ಕಿತು. ನೀವೆಲ್ಲಾ ಓದಲಿ ಅಂತ ನೆಟ್‌ನಲ್ಲಿ ಹಾಕಿದ್ದೇನೆ' ಅಂದಿದ್ದಾನೆ. ಸಂತೋಷದ ಸಂಗತಿ ಏನಪ್ಪಾ ಅಂದರೆ ಆ ಮನುಷ್ಯ ಆಲೂರು ಮಾಡಿದಂತೆ ಮೇರಿಯ ಕತೆಯನ್ನು ತನ್ನದೇ ಹೆಸರಿನಲ್ಲಿ ಪ್ರಿಂಟು ಮಾಡಲಿಲ್ಲ ಅಷ್ಟೆ....!

ಇಲ್ಲಿ ಜೋಗಿ ಮತ್ತವರ ಬೋಗಿಗಳಿಗೆ ಒಂದೆರಡು ಕಿವಿ ಮಾತು ಹೇಳಬೇಕು. ಅದೇ ರೀತಿ ಆಲೂರು, ಮಾಲೂರುಗಳೂ ಗಮನಿಸಲಿ....

ಕನ್ನಡ ಸಾಹಿತ್ಯಕ್ಕೆ ಹೊಸ ಹೊಸದು ಏನಾದರು ಬರುತ್ತಿರಲಿ. ಆಸೆಪಟ್ಟು ಓದುವ ಜನರಿಗೆ ಹಿತ ಅನಿಸುವ, ಜೀವನ ಪ್ರೀತಿ ಹುಟ್ಟಿಸುವ, ಖುಷಿ ಕೊಡುವ, ಅಳಿಸುವ, ನಗಿಸುವ, ಬೆಳೆಸುವ ಸಾಹಿತ್ಯ ಸಿಗಲಿ. ಅಂತಾದ್ದನ್ನು ಯಾರೇ ಸೃಷ್ಟಿಸಲಿ. ಅದು ತಮ್ಮದೇ ಬರಹವಾದಲ್ಲಿ ಸಂಭ್ರಮದಿಂದ ಹೇಳಿಕೊಳ್ಳುವಂತೆಯೇ ಬೇರೊಬ್ಬರ ಬರಹವನ್ನು ಎರವಲು ಪಡೆಯುವಾಗ ಮೂಲ ಲೇಖಕರ ಹೆಸರನ್ನು ನೆನಪಿಸಿಕೊಳ್ಳಬೇಕಲ್ಲವೇ?

ಸುಸಂಸ್ಕೃತರಾದವರಿಗೆ ಇರಬೇಕಾದ ಕನಿಷ್ಠ ಸೌಜನ್[ಯ] ಇದು.

ಇನ್ನೊಂದು ವಿಚಾರ ಏನೆಂದರೆ ನಮ್ಮ ಕನ್ನಡ ಓದುಗ ಕಳೆದ ಒಂದು ನೂರು ವರ್ಷಗಳಿಂದ ವಿಶ್ವ ಸಾಹಿತ್ಯದೊಂದಿಗೆ ಒಡನಾಟ ಹೊಂದಿದ್ದಾನೆ. ಚಾಸರ್, ಷೇಕ್ಸ್‌ಪಿಯರ್‌ರಾದಿಯಾಗಿ, ವಾಲ್ಟೈರ್, ಮೊಪಾಸಾ, ಸರ್ವಾಂಟೀಸ್, ಲೂಷುನ್, ಗಾರ್ಸಿಯಾ ತರದ ನೂರಾರು ಬರಹಗಾರರನ್ನು ಕನ್ನಡಿಗರು ಕನ್ನಡದಲ್ಲೇ ಓದಿದ್ದಾರೆ.

ಈ ಹಿಂದೆ ಇಂಥವರ ಬರಹಗಳನ್ನು ಅನುವಾದ ಮಾಡಿದವರ್ಯಾರೂ ಮೂಲ ಲೇಖಕರ ಹೆಸರನ್ನು ಮರೆಮಾಚಲ್ಲ.

ಹೀಗಿರುವಾಗ ಕನ್ನಡದ ಜಾಣ ಓದುಗರೆದಿರು ಜೋಗಿ ಮತ್ತು ಆಲೂರು ಚೀಪ್ ಆಗಿ ವರ್ತಿಸಬಾರದು. ರಿಮೇಕ್ ಸಿನಿಮಾ ಮಾಡುವಷ್ಟೇ ಸಲೀಸಾಗಿ ರಿಮೇಕ್ ಸಾಹಿತ್ಯ ಸೃಷ್ಟಿಸಲು ಹೊರಡಬಾರದು. ಅದು ಆತ್ಮವಿಶ್ವಾಸವಿರದವರ, ಅಭಿರುಚಿಹೀನರ ಕೆಲಸವಷ್ಟೆ...

ಈ ಕರ್ನಾಟಕ ದೇಶದಲ್ಲಿ ಪಿಕ್‌ಪಾಕೆಟ್‌ನವರಿಗೂ, ಸಾಹಿತಿಗಳಿಗೂ ವ್ಯತ್ಯಾಸ ಉಳಿಯಬೇಕಲ್ಲವೆ?

● ಬಿಳಿದಾಳೆ ಪಾರ್ವತೀಶ

ಚಂಪಾ-70

● ಬಿ. ಶ್ರೀನಿವಾಸ

ಎಂದೋ.... ಯಾಕೋ
ಮುನಿಸಿಕೊಂಡು ಮನೆಬಿಟ್ಟು ನಡೆದ
ಹಿರಿಯ ಜೀವವೊಂದು
ಅಣ್ಣನಿಲ್ಲದ ಮನೆಗೆ
ಮಗಳು ಕರೆದಳೆಂದು
ಮನೆಗೆ ಬಂದ ಹಾಗಿತ್ತು,

ಅಣ್ಣನೆಲ್ಲೋ ಕುಂತು ನೋಡುತಿರಲು
ತಮ್ಮನ ತಮಟೆಯ ಸದ್ದಿಗೆ
ಬಳಗವೆಲ್ಲಾ ಕುಣಿವ್ಹಾಂಗಿತ್ತು,

ಜನುಮ ದಿನವೆಂಬುದು
ಕುಣಿದು ಕುಪ್ಪಳಿಸಲು
ಬರಿಯ ನೆಪವಾಗಿತ್ತು ನೋಡಾ....
ಹರ ಹರಾ.... ಚಂದ್ರಶೇಖರಾ!

ತಮಟೆ ಬಾರಿಸಿದ ಕೈಗಳಿಗೆ ಎಪ್ಪತ್ತು
ಆದರೇನು....?
ಸಮತೆಯ ಕನಸಿಗಿನ್ನೂ ಇಪ್ಪತ್ತು
ಹಲವರ ಪಾಲಿಗೆ
ಗಂಟಲಲ್ಲಿಳಿಯದ ತುತ್ತು
ಕೆಲವರ ಪಾಲಿಗೆ ಆಪತ್ತು
ಕನ್ನಡ ನುಡಿವವರ
ಪಾಲಿಗೆ ಸಂಪತ್ತು
ಥ್ರೀ ಥೌಸಂಡು... ಸಿಕ್ಸ್ ಥೌಸಂಡು ಗುರು
-ಜಗದ್ಗುರು ಎಲ್ಲಾ ನೀನೇ ನೋಡಾ....
ಹರ ಹರಾ ಚಂದ್ರಶೇಖರಾ!!



...ಣೆಲಿ ಇಬೂತಿ ಇದ್ದೊರ ಕ್ಯಲಸಾದವಂತೆ ಕಣೊ!

...ಸಿ ಸತಿ ಮುಂಗಾರು ಚನ್ನಾಗಿ ನ್ಯಡುಸ್ತದೆ ಅಂತ ... ಹೇಳಿದ್ರಲ್ಲಾ?" ಎಂದ ಸೀರ, ಅಂಗಿ ಎತ್ತಿ ... ಕೆರೆದುಕೊಂಡ.

...ನ್ನಾರು ಜೋತಿಶಿಗಾರ್ರೆ ಹೇಳಿರಬೇಕು. ಅವುರ ... ನಂಬಕಂಡು ಕುಂತಿದ್ದೆಯಲ್ಲೋ ಮಾವ" ಎಂದ

...ಂಗರವುರು ಹೇಳದ್ಯಲ್ಲ ಸುಳ್ಳೆ?"


...ಳ್ಳು ಅನ್ನದಕಿಂತ ಆ ಮುಂಡೆ ಮಕ್ಕಳದು ವಟ್ಟೆ ... ಅನ್ನಬವುದು."

...ದ್ಯಾಕ್ಲ ಅಂಗೆ ಬ್ಯೆತಿ ಅವರ" ಎಂದಳು ಜುಮ್ಮಿ.

...ಯ್ಯದಲ್ಲ, ಎದಿರಿಗೆ ಸಿಕ್ಕಿದ್ರೆ ಯಕ್ಕಡ ತಗಂಡು ... ಎಂದು ಉಗ್ರಿ ರಾಂಗಾದುದಕ್ಕೆ ಕಾಳಮಾವನೇ ... ಂಡು,

...ಗ್ಯಲ್ಲ ಅನ್ನಬ್ಯಾಡ ಕಂಡ್ಯ" ಎಂದ.

...ದ್ಲಾ ಕಣಮಾವ ನೀನೆ ಹೇಳು. ನಮ್ಮ ತಂಗ್ಯಮ್ಮನ ... ಸಾಸ್ತ್ರ ಕೇಳಿದರಂತೆ. ಹುಡುಗಿಗೆ ಸರ್ಪದೋಸ ... ಸುಬ್ರಮಣ್ಯಕ್ಕೋಗಿ ಪೂಜೆ ಮಾಡ್ಸಿ ಅಂದವ್ರೆ. ... ದಿದ್ರೆ ಬಡುವುರು. ಸುಬ್ರಮಣ್ಣಕ್ಕೋಗಿ ಪೂಜೆ ... ಆದ್ರೆ, ಏನಿಲ್ಲ ಅಂದ್ರು ಆರು ಸವುರುಪಾಯಿ ... ಹಿಂಗೂ ಶಾಸ್ತ್ರ ಹೇಳ್ಯರೆ. ಹೋಗ್ಲಿ ಸರ್ಪದೋಸ ...?"



...ರ್ಪದೋಸ ಅಂದ್ರೆ ನಾಗರಾವ ವಡದಾಕಿರಬೇಕು. ... ಳದಿರಬೇಕು. ಹಿಂಗೆ ಏನೇನೊ ದೋಸಗಳವೆ."

...ರ್ಪ ಅಂದ್ರೆ, ನಾಗರಾವು ಮಾತ್ರನೊ, ಅಥವ ...ವು, ಮಂಡ್ಯದಾವು, ಹಸರಾವು ಸೇರತವೊ?"

...ರ್ಪ ಅಂದ್ರೆ ಇಸಸರ್ಪ ಕಂಡ್ಯ. ಮನುಸರಲ್ಲಿ ... ಜಾತಿಗಳವೊ ಅಂಗೆ ಹಾವಿನಲ್ಲೂ ಜಾತಿಗಳವೆ" ... ಸೀರ.

...ದ್ಮು, ಹಾವಿನಲ್ಲೂ ಜಾತಿಗಳಿರಂಗೆ ಮನುಸುರಲ್ಲೂ ...ವೆ ಅಂತ ಒಪ್ಪಿಗಳದೆ ಆದ್ರೆ ನಾಗರಾವಿನ ಜಾತಿ ... ಅಂತ?"

...ರು ಮಚ್ಚರ ಮಡಗಿದ್ದು ಸೇಡು ತೀರಿಸಿಗತ್ತಲೊ ... ನಾಗರಾವಿನ ಜಾತಿ ಕಂಡ್ಯ" ಎಂದು ಕಾಳಮಾವ ...ಡಿತವಾಗಿ ಹೇಳಿದ. ಅವರ ನಂಬಿಕೆಗೆ ...ದ ಉಗ್ರಿ ಮುಂದುವರಿದು,

...ಗರೆ ಮಂಡ್ಯಹಾವಿನ ಜಾತಿ ಯಾರಪ್ಪ?"

"ಮಂಡ್ಯ ಹಾವು ಕಡದೇಟಿಗೆ ಸಾಯದಿಲ್ಲ, ಕಡದ ಜಾಗ ಕ್ವಳಿತ ಬತ್ತದೆ. ಅಮ್ಯಾಲೆ ಸಾಯ್ತರೆ. ಒಲ್ಲಾವಳ್ಳಿ ರಾದಣ್ಣ ಅಂಗೆ ಅಲವೆ ಸತ್ತದ್ದು? ಕೆಲವುರು ಚಾಡಿ ಮಾತೇಳತರೆ. ಆ ಚಾಡಿ ಮಾತು ನಿಧಾನಕ್ಕೆ ತನ್ನ ಕ್ಯಲಸ ಮಾಡಿ, ಬಾಳೇನಾರ ಹಾಳಾದ್ರೆ, ನೋಡಪ್ಪ ಅಂಥೊರೆ ಮಂಡ್ಯು ಹಾವು ಜಾತಿಯೋರು. ಈಗ ಅವುರೆ ಜಾಸ್ತಿಯಾಗಿರೋದು" ಎಂದ ಕಾಳಮಾವ ಉಗ್ರಿ ಕೇಳಿದ ಜಾತಿಗೆಲ್ಲಾ ವಿವರ ಕೊಡಲು ತಯಾರಾದಂತೆ ಕಂಡ.

"ಅದಾಳು ಬದ್ದೊಗ್ಲಿ ಕಣಮಾವ, ಊರುಬುಟ್ಟೊದ ಪುರೋಹಿತ್ರ ತ್ವಲಿಗಿದ್ರು ಅಂತ ಸುದರಾಯಿಸಿಗತ್ತಿದಂಗೆ, ವತ್ತರೆಲೆ ಟಿವಿಲಿ ಕಾಣಿಸಿಗಂಡು ನಕ್ಷತ್ರ ಕೇಳಿ ಭವಿಷ್ಯ ಹೇಳ್ತ ಕುಂತವುರಲ್ಲಾ, ದೇಸ ಉದ್ದಾರಾದತೆ ಹೇಳು?"

"ಯಾರ್ನ ತಿವಿಲಿ ಕಾಣಿಸಿಗೊಂಡು ಸಾಸ್ತ್ರ ಹೇಳೋನು?" ಎಂದಳು ಜುಮ್ಮಿ.

"ಯಾರು ಅಂತ ಅಲ್ಲ ಕಣೆ. ಒಂದಿಂಡು ಜನ ಬಂದವುರೆ. ಮನ್ನೆ ದಿನ ನಮ್ಮ ಸುಂದ್ರಕ್ಕಳ ಮಗಳು ಪೋನು ಮಾಡಿ, 'ಮೀನ ರಾಶಿ, ರೇವತಿ ನಕ್ಷತ್ರ. ನನಿಗೆ ಮದುವೆ ಯಾವಾಗ?' ಅಂದ್ಲಂತೆ. ಅದ್ಕೆ ಆ ಮುಂಡೆ ಮಗ, ಉಡುಪಿಗೋಗಿ ಅನಂತೇಶ್ವರ ದೇವಸ್ಥಾನದಲ್ಲಿ ಪೂಜೆ ಮಾಡ್ಸಿ ವಳ್ಳೆದಾಯ್ತದೆ ಅಂದವುನೆ" ಎಂದ ಉಗ್ರಿ.

"ಅವುರು ಮಾಯಮ್ಮನ ಒಕ್ಕಲಲವೇನ್ನ? ಉಡುಪಿಗ್ಯಂಗೋದರೂ?"

"ಅದೆ ಕಣೆ ಈಗ ಬಂದಿರೊ ಕಷ್ಟ. ಮಾಯಮ್ಮ ಸಿಟ್ಟಾಗಿ ದನನೊ ಯಮ್ಮೆನೊ ಮುರಕಂಡ್ರೆ ಗತಿಯೇನು ಅಂತ ಸುಂದ್ರಕ್ಕ ಯೇಚನೆ ಮಾಡ್ತ ಕುಂತವುಳೆ."

"ಏನೇ ಆಗ್ಲಿ, ಟಿವಿ ನೋಡದೆ ಅಲ್ಲ ಕಂಡ್ಯ" ಎಂದ ಸೀರ.

"ನೋಡಪ್ಪ, ಯಾರು ಬ್ಯಾಡ ಅಂದೋರು. ಆದ್ರೆ ಏನ್ನೊಡಬೇಕೊ ಅದ ಒಂದಿಷ್ಟು ನೋಡಿದ್ರಾಯ್ತು. ಕತ್ತಿಗೆ ಸರ ಹಾಯ್ಕಂಡು ಮೈತುಂಬ ಬೂದಿ ಬಳಕಂಡು ಬಂದು ಸುಳ್ಳು ಸಾಸ್ತ್ರ ಹೇಳೊ ನನಮಕ್ಕಳ ಮಾತ ಯಾಕ್ಕೇಳಿಸಗಬೇಕೂ ಅಂತ?"

"ಮೈತುಂಬ ಬೂದಿ ಅಂದೇಟಿಗೆ ನನಿಗೊಂದು ಜೋಕ್ ನ್ಯನಪಿಗೆ ಬಂತು ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ಏನಪ್ಪ ಅದು ಜೊಕು?"

"ಆ ಜೋಕು ನಂದಲ್ಲ, ವಿಚಾರವಾದಿ ರಾಮಸ್ವಾಮಿ ಜೋಕದು. ಏನಪ್ಪಾ ಅಂದ್ರೆ, ಬೆಳಗಾಯ್ತು ಅಂದ್ರೆ ಅವನ ಮನೆ ಮುಂದಕೆ ಸುಮಾರು ಜನ ಮೈಗ್ಯಲ್ಲ ಬೂದಿ ಪಟ್ಟೆ ಹಾಯ್ಕಂಡಿರೋರೇ ಬತ್ತರೆ."

"ಬೂದಿ ಯಾರು ಬಳಕಂಡರ್ಲ, ಇಬೂತಿ ಇರಬೇಕು" ಎಂದಳು ಜುಮ್ಮಿ.

"ಇಬೂತಿನೂ ಬಸ್ಮದಿಂದ್ಲೆ ಅಲವೇನಕ್ಕ ಆಗಿರದು. ಬೂದಿ, ಇಬೂತಿ ಯಲ್ಲ ಒಂದೆ. ಅಂಗೆ ಬೂದಿ ಬಳಕಂಡೋರ ನೋಡಿ ರಾಮಸಾಮಿ. ಏನೀತರ ಬೂದಿ



ಪಟ್ಟೆ ವಡಕಂಡಿದ್ದಿರಲ್ಲಾ ಅಂತನೆ. ಅದಕವುರು ಸ್ವರ್ಗ ಸಿಗತದೆ ಅಂತಾರೆ. ಅಂಗರೆ ನಿಮ್ಮ ಸ್ವರ್ಗದಲ್ಲಿ ಬರೀ ಕಕ್ಕಸ್ಸೇ ಇರದಾ ಅಂತ ಕೇಳ್ತನೆ. ಆಗವುರು ಸಿಟ್ಟು ಮಾಡಿಕಂಡು, ಯಾಕ್ರಿ ಅಂಗಂತಿರಿ ಅಂತರೆ. ಅದಕ್ಕವುನು ನೋಡಿ ನಮ್ಮ ಅಟ್ಟಿಲಿ ಮಕ್ಕಳು ಮರಿಗಳು ಕಕ್ಸ್ ಮಾಡಿದ್ರೆ, ಅದ್ಕೆ ಬೂದಿ ಹಾಕಿ ಗುಡಿಸಿ ಹಾಕ್ತರೆ. ಆದ್ರಿಂದ ನಿಮ್ಮ ಸ್ವರ್ಗದಲ್ಲಿ ಬರೀ ಅದೇ ಇರಬೇಕು. ಏನು ಹೇಸಿಗೆ ಜನರಿ ನೀವು ಅಂತನೆ."

"ಅವುನು ಯಾರೊ ನಿನ್ನಂತ ತಲಿಕೆಟ್ಟ ನನ್ನ ಮಗನೆ ಇರಬೇಕು ಬುಡು" ಎಂದ ಕಾಳಮಾವ.

"ಅದಂಗಲ್ಲ ದ್ವಡಪ್ಪ, ಮದ್ದಿಗೆ ಮನುಸ್ರು ಅಣೆ ಮ್ಯಾಲೆ, ಬ್ಯಾಡಿ ಮ್ಯಾಲೆ ಜಾತಿ ಬರಕಂಡು ತಿರಗರು. ಅಷ್ಟೆ ಅಲ್ಲ ಜನಗಳ ಮಧ್ಯೆ ತಾರತಮ್ಮ ಮಾಡೋರು ಅಂತ ಡರ್ಟಿ ಪೆಲೊಗಳು. ಇವತ್ತಿಗೂ ಜಾತಿ ನಾಮಜನ್ಮ ಕಂಡು ತಿರುಗ್ತರೆ ಅಂದ್ರೆ, ಇಟೀಸ್ ಸೇಂಟು ಮಾಡ್ರನ್ ಏಜ್" ಎಂದ ವಾಟಿಸ್ಸೆ.

"ಮನುಸ್ರು ಸುಮ್ಮನಿರಕ್ಯಾಗದೆ ಏನೇನೊ ಮಾಡಿಕತ್ತರೆ ಬುಡೋ ಹೋಗ್ಲಿ."

"ಬುಡೋದಲ್ಲ ಕಣೊ ಉಗ್ರಿ, ಇವತ್ತಿನ ಸಿಚುಯೇಶನ್ನು ಏನಾಗ್ಯದೆ ಗೊತ್ತಾ? ವಿಧಾನಸೌದಕ್ಕೊದ್ರೆ ಹಣೆ ಮ್ಯಾಲೆ ವಿಭೂತಿ ಇದ್ರೆ ಮಾತ್ರ ಕ್ಯಲಸಾದವಂತೆ."

"ಇಬೂತಿಯ ಬರಿ ಲಿಂಗಾಯಿತ್ರೆ ಬಳಕಂಡರೆ? ಯಲ್ಲಾ ಜಾತಿನೂ ಬಳಕತ್ತರಪ್ಪ."

"ಅದು ವಿಧಾನಸೌಧದಲ್ಲಿ ಕ್ಯಲಸ ಮಾಡೋರಿಗೆ ಗೊತ್ತಾಗಬೇಕಲ್ಲ ಹೇಳು."

"ಅಂಗರೆ ಇಬೂತಿ ಇಕ್ಕಂಡೋದೋರ ಕ್ಯಲಸ ಚಟ್ಟಂತ ಆಯ್ತಾ ಅವೆ ಅನ್ನು" ಎಂದ ಸೀರ.

"ಊ ಚಿಗಪ್ಪ, ನೀನು ಎಲ್ಯಾರ ಸರಕಾರಿ ಆಫೀಸಿಗೆ ಹೋಗದೆ ಆದ್ರೆ ಇನ್ನು ಮ್ಯಾಲೆ ಜೇಬಲ್ಲಿ ಇಬೂತಿ ಗಟ್ಟಿ ಇರ್ಲಿ" ಎಂದು ವಾಟಿಸ್ಸೆ ನಕ್ಕ.

"ಹಣೆ ನೋಡಿ ಕ್ಯಲಸ ಮಾಡೋದೆ ಆದ್ರೆ, ಅಂತ ಸರಕಾರ ಇರಬಾರ್ದು ಕಂಡ್ಯ" ಎಂದು ತೀರ್ಪು ಕೊಟ್ಟ ಕಾಳಮಾವ.

"ಏ ಇವುನೇಳ್ತನೆ ಅಂತ ಕೇಳ್ತೀಯ ಮಾವ. ಇವುನೇಳದು ಸುಳ್ಳು. ಅಂಗೇ ನೋಡಿದ್ರೆ ಲಿಂಗಾಯಿತ್ರ ಕ್ಯಲಸನೆ ಆಯ್ತಾಯಿಲವಂತೆ. ಇವತ್ತು ಕ್ಯಲಸ ಆಯ್ತಾ ಇರದು ರೆಡ್ಡಿಗಳ ಕ್ಯಲ್ತಸವಂತೆ. ನೋಡೀಗಾಗ್ಲೆ ಅವುರ ಮ್ಯಾಲಿದ್ದ ಕೇಸನ್ಯಲ್ಲ ಎಡೂರಪ್ಪ ವಾಪಸ್ ತಗಂಡವುನೆ" ಎಂದ ಉಗ್ರಿ.

"ಯಾರ ಮ್ಯಾಲಿದ್ದ ಕೇಸಾ?"

"ಈ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ ಸ್ತೀರಾಮುಲು ಅಂತ ಮಂತ್ರಿಗಳವಲ್ಲಾ ಅವ್ರೂ ಈ ಹಿಂದೆ ಮಾಡಬಾರ್ದ ಕ್ಯಲಸ ಮಾಡಿ ಕೇಸಾಕಿಸಿಗಂಡಿದ್ದವಂತೆ. ಅಕ್ರಮವಾಗಿ ಗಣಿ ಅಗದಿರೊ ಕೇಸು, ಸಾಗಸಿರೊ ಕೇಸು, ಅಮ್ಯಾಲೆ ದೇವುಸ್ಥಾನನೆ ಉಡಾಯಿಸಿರೊ ಕೇಸು, ಹಿಂಗೆ. ಏಟು ಸೆಕ್ಸನ್ನವೊ ಅಪ್ಪುನ್ನೂ ಹಾಕಿಸಿಗಂಡಿದ್ದವಂತೆ. ಎಡೂರಪ್ಪನಗೇಳಿ ಧಮಕಿ ಹಾಕಿ ಅವುನ್ಯಲ್ಲ ವಾಪಸ್ ತಗಿಸಿಗಂಡ್ರಂತೆ, ನೋಡಿದ್ಯಂಗದೆ."

"ನೋಡಪ್ಪ ಸರಕಾರ ಇಂತ ಕ್ಯಲಸನೂ ಮಾಡ್ತದೆ ಅಂದ್ರೆ ಜನಗಳ ಕತಿಯೇನು?" ಎಂದ ಕಾಳಮಾವ.

"ನೋಡು ದ್ವಡಪ್ಪ ನೈನ್‌ಟೀನ್ ನೈಂಟ ಪೋರಲ್ಲಿ, ನಾಗಮಂಗಲದ ದೊಂಬಿಲಿ ನಾನು ಇದ್ದೆ ಅಂತ ಕೇಸಿಗೆ ಸೇರಿಸಿದ್ರು. ಇವತ್ತಿಗೂ ಕೋರ್ಟಿಗೆ ಅಲಿತಾ ಇದ್ದಿನಿ. ರೈತ ಸಂಘದೋರಂತು ನಂಜುಂಡಸ್ವಾಮಿ ಕಾಲದಿಂದ್ಲೂ ಅಲಿತಾ ಅವುರೆ. ಆದ್ರೆ ಗಣಿಕಳ್ರು ಕೇಸ ಸರಕಾರನೆ ವಾಪಸ್ ತಗತದೆ ಅಂದ್ರೆ, ರೆಡ್ಡಿಗಳು ಯಡ್ಡಿಗಿಂತ ಪವರ್‌ಪುಲ್ ಅಂದಂಗಾಯ್ತು."


"ಪವರ್‌ಪುಲ್ಲು ಅನ್ನದೇನು, ಪವರ್‍ರೆ ಅವುರ ಕೈಲದೆ ಕಣೊ. ಎಡೂರಪ್ಪ ಸುಮ್ಮನೆ ಪೂಜಾರಿ ತರ ಆದ್ರೆ ಅವುನೆ. ದ್ಯಾವೇಗೌಡನ ಮಗನ ಇಪ್ಪತ್ತು ತಿಂಗಳ ತೆವುಲಿಗೆ ನಾವಿದನ್ನಲ್ಲ ನೋಡಬೇಕಾಗ್ಯದೆ." ■

...ನಾಗದವ ಏನು ಮಾಡಿಕೊಂಡ?


...ಮನುಷ್ಯನ ಸಣ್ಣತನ ಮತ್ತು ಅಸಹಾಯಕತೆ ಯಾವ ಯಾವ ರೀತಿಯಲ್ಲಿ ತೋರಿಸಿಕೊಳ್ಳುತ್ತದೆ ... ಕುತೂಹಲಕರ. ಇದು ಮನುಷ್ಯನಲ್ಲಿ ಆಳದಲ್ಲಿದ್ದು ಗುಂಪಿನಲ್ಲಿ ದೊಡ್ಡದಾಗಿ ಕಾಣಿಸಿಕೊಳ್ಳುತ್ತದೆ. ... ಆದ ಇರಾಕ್ ಯುದ್ಧದ ಒಂದು ವ್ಯಸನದ ವಿಷಯವನ್ನು ...ಕೇಂದುಕೊಂಡು ಹಾಗೇ ಮುಂದೂಡಿದ್ದೇನೆ. ಇರಾಕ್ ಬಳಸಿದ ಒಂದೇ ...ಪರಿಣಾಮಕಾರಿ ಅಸ್ತ್ರ ಸ್ಕಡ್ ಮಿಸ್ಸೈಲ್; ಅದನ್ನು ಬಳಸಿದ ಇರಾಕಿಗಳು ...ನೋಡಿ ಹೇಗೆ ಈ ಇಸ್ರೇಲಿಗಳ ಹೆಂಗುಸರು, ಮಕ್ಕಳು ಚೀರಿಕೊಳ್ತಾರೆ!" ...ಅಟ್ಟಹಾಸ ತೋರಿದರು; ಒಂದೊಂದು ಸ್ಕಡ್ ಇಸ್ರೇಲ್ ಮೇಲೆ ಬಿದ್ದಾಗಲೂ ...ನ್, ಎಮೆನ್, ಇರಾಕ್‌ನ ಪ್ಯಾಲಿಸ್ಟೇನಿಗಳು ತಾವೇ ಶತ್ರುವನ್ನೆದುರಿಸಿ ... ಖುಷಿಯಿಂದ ಕುಣಿದಾಡಿದರು. ಈ ಸಂದರ್ಭದಲ್ಲಿ ಇಸ್ರೇಲ್ ದೇಶ ...ಗೆ, ಪ್ಯಾಲಿಸ್ಟೇನಿಯನ್ನರಿಗೆ ಏನೂ ಅನ್ಯಾಯ ಮಾಡಿರಲಿಲ್ಲ; ಇರಾಕ್ ... ಆಕ್ರಮಿಸಿಕೊಂಡದ್ದಕ್ಕೆ ಅಮೆರಿಕಾ ಇರಾಕ್ ಮೇಲೆ ಎಗರಾಡಿತ್ತು, ಆದರೂ ...ಷ್ಟ ಸ್ಕಡ್ಡನ್ನು ಇಸ್ರೇಲಿಗಳ ಮೇಲೆ ತೂರಿದ್ದಕ್ಕೆ ಪ್ಯಾಲಿಸ್ಟೇನಿಗಳು ಕುಣಿದಾಡಿದರು. ...ವ ಮೈ ಪರಚಿಕೊಂಡ ಗಾದೆ ನಿಮಗೆ ಗೊತ್ತಿರಬಹುದು.

...ಮೇಲೆ ಆದದ್ದು ಎಲ್ಲರಿಗೆ ಗೊತ್ತಿದೆ. ಇರಾಕಿಗಳು ಧೂಳೀಪಟವಾಗಿ ಸದ್ದಾಂ ... ಬಾಲ ಮುದುರಿಕೊಂಡಾಗ.... ಪ್ಯಾಲಿಸ್ಟೇನಿಗಳ ದುಗುಡ ಅಷ್ಟೇ ...ಯಿತು; ಇರಾಕ್ ಸೋಲನ್ನು ಒಪ್ಪಿಕೊಂಡೊಡನೆ ಪ್ಯಾಲಿಸ್ಟೇನಿಗಳು ...ದು ಹೋದರು.

...ಇಲ್ಲಿಗೇ ಮುಗಿಯಲಿಲ್ಲ, ಜೋರ್ಡಾನ್, ಅಮ್ಮಾನ್‌ನಲ್ಲಿ ಕುಣಿದಾಡಿದ, ...ಕೂತ ಪ್ಯಾಲಿಸ್ಟೇನಿಗಳ ಹುಂಭ ಆವೇಶವೇ ಕುವೈತ್‌ನಲ್ಲಿದ್ದು ಕುವೈತನ್ನು ಪ್ರೀತಿಸುತ್ತ ... ವಿರುದ್ಧ ಹೋರಾಡಿದ ಪ್ಯಾಲಿಸ್ಟೇನಿಗಳ ಕುತ್ತಿಗೆಗೆ ಬಂತು. ಮುಖ, ಮೂತಿ ನೋಡದೆ ...ಸ್ಟೇನಿಗಳ ಮೇಲೂ ಕುವೈತ್ ಜನ ಬಿದ್ದರು; ಇವತ್ತು ಕುವೈತ್‌ನಲ್ಲಿಯ ಪ್ಯಾಲಿಸ್ಟೇನೀಯರು ... ತಬ್ಬಲಿಗಳು.



ಭಾರತದಲ್ಲಿಯೂ...



ಮೇಲಿನದನ್ನು ಹೇಳಿದ್ದು ಇದೇ ತರಹದ ಇನ್ನೊಂದು ಘಟನೆ ಹೇಳುವುದಕ್ಕಾಗಿ. ಭಾರತದ ಜನ ಕೂಡ 1940 ರಲ್ಲಿ ಪ್ಯಾಲಿಸ್ಟೇನಿಗಳಂತೆಯೇ ವರ್ತಿಸಿದರು. ಅದು ಇಂಗ್ಲೆಂಡ್ ಜಾಗತಿಕ ಯುದ್ಧದಲ್ಲಿ ಭಾಗವಹಿಸಿದ್ದ ಕಾಲ; ಭಾರತ ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕಾಲ. ಇಂಗ್ಲೆಂಡ್‌ನ ಜೊತೆಗೆ ಹೋರಾಡಲಾರದ ಭಾರತೀಯರು ಲಂಡನ್ನಿನ ಮೇಲೆ, ಪ್ಯಾರಿಸ್‌ನ ಮೇಲೆ ಬಾಂಬ್ ಬಿದ್ದಾಗಲೆಲ್ಲ ಸಂತೋಷದಿಂದ ಕುಣಿದಾಡಿದರು. ಗಾಂಧೀಜಿಗೆ ಇದನ್ನು ನೋಡಿ ದುಃಖವಾಯಿತು. ಒಮ್ಮೆ ಇಂಗ್ಲೆಂಡಿನ ವೆಸ್ಟ್‌ಮಿನಿಸ್ಟರ್ ಸ್ಮಶಾನ, ಚರ್ಚಿನ ಮೇಲೆ ಬಾಂಬ್ ಸ್ಫೋಟಗೊಂಡ ಸುದ್ದಿ ಕೇಳಿದ ಗಾಂಧೀಜಿ ದಿಕ್ಕೆಟ್ಟವರಂತೆ ಅತ್ತರು. ಇದು ಹುಚ್ಚನ ಪ್ರತಿಕ್ರಿಯೆಯಂತೆ ಅನೇಕರಿಗೆ ತೋರಿತು. ಆದರೆ ಗಾಂಧೀಜಿ ಬಯಸಿದ್ದು ಇಂಗ್ಲೆಂಡ್ ಮತ್ತು ಭಾರತಗಳೆರಡೂ ನಾಶವಾಗದೆ ಬೇರ್ಪಡಬೇಕೆಂದು, ಇಂಗ್ಲೆಂಡಿನಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕೆಂದು.

ಮೇಲಿನದನ್ನು 'ದೈ ಹ್ಯಾಂಡ್ ಗ್ರೇಟ್ ಆನಾರ್ಕ್!' ಎಂಬ ಪುಸ್ತಕದಲ್ಲಿ ವಿವರಿಸುವ ನೀರದ್ ಚೌಧುರಿ ಮನುಷ್ಯ ತನ್ನ ಹೇಡಿತನದಿಂದಾಗಿ ಎಂಥ ನೀಚನಾಗಬಲ್ಲ ಎಂದು ವರ್ಣಿಸುತ್ತಾರೆ. ಹಾಗೆಯೇ ಇನ್ನೊಂದು ಸತ್ಯವನ್ನು ನಾವೆಲ್ಲ ಅರಿಯಬೇಕಾಗಿದೆ. ಶಾಂತಿ, ಅಹಿಂಸೆಯ ಮಾತಾಡುತ್ತಿದ್ದ ಗಾಂಧೀಜಿ ಜನಕ್ಕೆ ಹಂಗಾಮಿಯಾಗಿ ಬಣ್ಣಗೆಟ್ಟವರಂತೆ ಕಂಡರು. ಅದೇ ಸಮಯದಲ್ಲಿ ಶಕ್ತಿ ಹೋರಾಟ, ರಕ್ತದ ಬಗ್ಗೆ ಮಾತಾಡುತ್ತಿದ್ದ ಸುಭಾಷ್ ಚಂದ್ರ ಬೋಸ್ ಧೀರರಾಗಿ ಕಂಡರು. ಇವತ್ತಿಗೂ ಈ ಬೋಸ್ ಮೂರ್ಖರ ರಕ್ತ ಕುದಿಸುತ್ತಾರೆ; ಈತ ಹೋಗಿ ಭಾರತದ ಬೆಂಬಲಕ್ಕಾಗಿ ಹಿಟ್ಲರನ ಕೈ ಕುಲುಕಿದ್ದು ದಿಟ್ಟತನವಾಗಿ ಈ ಮೂರ್ಖರಿಗೆ ಕಾಣಿಸುತ್ತದೆ.



–ಆಗಸ್ಟ್ 25, 1991

▶▶▶ 2

"ದೀನ ದಯಾಳು"ವಿನ ಮುಸುಕು!

ಮುಖರ್ಜಿಯವರು 1953ರಲ್ಲಿ ನಿಧನರಾದ ಮೇಲೆ ಜನಸಂಘವನ್ನು ನಡೆಸುವ ಜವಾಬ್ದಾರಿ ಹೊತ್ತುಕೊಂಡ ದೀನದಯಾಳು ಉಪಾಧ್ಯಾಯರ ಪ್ರಮುಖ ಪಾತ್ರವಿದ್ದದ್ದೆ ಜನಸಂಘದ ಪ್ರಖರ ದ್ವೇಷ ಸಿದ್ಧಾಂತಕ್ಕೆ ಆಧ್ಯಾತ್ಮದ ಮತ್ತು ಮಾನವೀಯತೆಯ ಮುಖವಾಡ ತೊಡಿಸುವಲ್ಲಿ. ಇದನ್ನು ಯಶಸ್ವಿಯಾಗಿ ನಿರ್ವಹಿಸಲು ಅವರು 1965ರಲ್ಲಿ "ಇಂಟೆಗ್ರಲ್ ಹ್ಯೂಮನಿಸಂ" ಎಂಬ ಸಿದ್ಧಾಂತವನ್ನು ಆಶ್ರಯಿಸಿದರು. "ಪಾಶ್ಚಾತ್ಯ ಭೌತಿಕವಾದ ಮತ್ತು ಕಮ್ಯುನಿಸಂ ಎರಡೂ ಜನರನ್ನು ಭ್ರಷ್ಟಗೊಳಿಸುತ್ತವೆ. ಆದ್ದರಿಂದ ಆಧ್ಯಾತ್ಮಿಕತೆ ಉಳ್ಳ ಮಾನವತಾವಾದ-ಇಂಟೆಗ್ರಲ್ ಹ್ಯೂಮನಿಸಂ-ನಮ್ಮ ಸಿದ್ಧಾಂತ"ವೆಂದು ಉಪಾಧ್ಯಾಯರು ಸುದೀರ್ಘ ವ್ಯಾಖ್ಯಾನ ನೀಡಿದರು. ಆದರೆ ಈ ಸಿದ್ಧಾಂತವನ್ನು ಅವರು ಯಾವ ಪಶ್ಚಿಮವನ್ನು ವಿರೋಧಿಸುತ್ತೇವೆಂದು ಹೇಳುತ್ತಿದ್ದರೋ ಅದೇ ಪಶ್ಚಿಮದ ಫ್ರಾನ್ಸ್‌ನ ತತ್ವಜ್ಞಾನಿ ಜಾಕ್ವೆಸ್ ಮರಿಟೈನ್‌ನಿಂದ ಅನಾಮತ್ತು ಎರವಲು ತಂದಿದ್ದರು! ಹೀಗಾಗಿ ಈ ತಂಗಳನ್ನೇ ಪರಮಾನ್ನವೆಂದು ಜನಸಂಘಿಗಳು ಪ್ರಚಾರ ಮಾಡಿದರೂ ಅವರು 50-60ರ ದಶಕದಲ್ಲಿ ಎತ್ತಿಕೊಂಡ ಗೋ ಹತ್ಯಾ ನಿಷೇಧ ಚಳವಳಿ, ಸತಿ ಪದ್ಧತಿ ಪರವಾದ ಚಳವಳಿ ಇವ್ಯಾವುದರಲ್ಲೂ ಯಾವ ಆಧ್ಯಾತ್ಮವೂ ವ್ಯಕ್ತವಾಗಲಿಲ್ಲ. ಬದಲಿಗೆ ಅಲ್ಲೆಲ್ಲಾ ವ್ಯಕ್ತವಾಗುತ್ತಿದ್ದದ್ದು ಯಾವ ನರಮನುಷ್ಯನಿಗೂ ಸಾಧ್ಯವಾಗದ ಪರಮತ ದ್ವೇಷವೇ. ಕೊನೆಗೆ ಈ ದ್ವೇಷವೇ ದೀನದಯಾಳ ಉಪಾಧ್ಯಾಯರನ್ನು 1968ರಲ್ಲಿ ಬಲಿತೆಗೆದುಕೊಂಡಿತು. ಈ ಕೊಲೆಯಲ್ಲಿ ವಾಜಪೇಯಿಯವರ ಹಸ್ತವೂ ಇತ್ತೆಂದು ಆಗ ಬಲವಾಗಿ ಅನುಮಾನ ಪಡಲಾಗುತ್ತಿತ್ತು. ಆ ಅನುಮಾನ ಈವರೆಗೂ ಬಗೆಹರಿದಿಲ್ಲ!

1980ರಲ್ಲಿ ಜನಸಂಘವು ಈಗಿನ ಭಾರತೀಯ ಜನತಾ ಪಕ್ಷವಾಗಿ ರೂಪಾಂತರಗೊಂಡ ಸಂದರ್ಭದಲ್ಲಿ ಅದರ ಅಧ್ಯಕ್ಷರಾದ ವಾಜಪೇಯಿ ಇಂಟೆಗ್ರಲ್ ಹ್ಯೂಮನಿಸಂಗೆ ಎಳ್ಳುನೀರು ಬಿಟ್ಟು ತಮ್ಮ ಪಕ್ಷದ್ದು "ಗಾಂಧಿ ಪ್ರಣೀತ ಸಮಾಜವಾದಿ ಸಿದ್ಧಾಂತ"ವೆಂದು ತುತ್ತೂರಿ ಊದಿದರು. ಆದರೆ ಅವರ ನೇತೃತ್ವದಲ್ಲಿ ಬಿಜೆಪಿ ಭಾಗವಹಿಸಿದ ಮೊದಲ ಚುನಾವಣೆಯಾದ 1984ರ ಚುನಾವಣೆಯಲ್ಲಿ ಎಂಥ ಹೀನಾಯವಾದ ಸೋಲನ್ನು ಅನುಭವಿಸಿತೆಂದರೆ ಸ್ವತಃ ವಾಜಪೇಯಿಯೂ ಸೋತಿದ್ದಲ್ಲದೆ 543 ಸೀಟುಗಳಲ್ಲಿ ಕೇವಲ ಎರಡು ಸೀಟನ್ನಷ್ಟೆ ಪಡೆಯಲು ಬಿಜೆಪಿಗೆ ಸಾಧ್ಯವಾಯಿತು. ಈ ಹೀನಾಯ ಸೋಲಿನ ನಂತರ 1985ರಲ್ಲಿ ಮತ್ತೆ ಬಿಜೆಪಿ ಇಂಟೆಗ್ರಲ್ ಹ್ಯೂಮನಿಸಂ ಸಿದ್ಧಾಂತಕ್ಕೆ ಮರಳಿತು.


ಹೀಗಾಗಿ ಬಿಜೆಪಿ 1985ರಿಂದ ಈವರೆಗೆ ನಡೆಸಿದ ಎಲ್ಲಾ ರಕ್ತದೋಕುಳಿಗಳೂ ಈ "ಸಮಗ್ರ ಮಾನವತಾವಾದ"ದಡಿಯಲ್ಲೇ ನಡೆದಿವೆ. ಆಗಲೂ ಅಡ್ವಾನಿಯೇ ಈ ಇಂಟೆಗ್ರಲ್ ಹ್ಯೂಮನಿಸಂ ರಥದ ಸಾರಥಿ. ಈಗ ಮತ್ತೆ ಬಿಜೆಪಿ ಇಂಟೆಗ್ರಲ್ ಹ್ಯೂಮನಿಸಂ ಬಗ್ಗೆ ಮಾತಾಡುತ್ತಿರುವಾಗಲೂ ಅಡ್ವಾನಿಯವರೇ ಅದರ ಸಾರಥಿಯಾಗಿದ್ದಾರೆ. ಮಾತ್ರವಲ್ಲ 1985ರಲ್ಲಿ ಅದರ ರಥಯಾತ್ರೆ ನಡೆಸಿದಂತೆ ಈ ಬಾರಿಯೂ ನಡೆಸುತ್ತಾರಂತೆ!!

ಅಂದರೆ ಇದರ ಅರ್ಥವಿಷ್ಟೆ: ನರೇಂದ್ರ ಮೋದಿಗೆ ದೀನದಯಾಳುವಿನ ಮುಖವಾಡ ತೊಡಿಸಿದ್ದಾರೆ! ಎಚ್ಚರ! ಎಚ್ಚರ!

ಚಂಪಾಯಣ ತುಂಬಾ ಚೆನ್ನಾಗಿತ್ತು

ಮಾದರ ರಂಗ, ಹರಿಹರ- ಇವರು ಬರೆದ ಕಿರುಗತೆ 'ಬಯಲು' ಓದಿದೆ. ಕತೆಯ ವಿನ್ಯಾಸ ಚೆನ್ನಾಗಿದೆ. ಬಯಲಿನಲ್ಲಿ ಕೇರಿಯಲ್ಲಿ ಹಕ್ಕಿಯಂತಾಗಿ ಆದಿ-ಹಾಡಿ ಕೊಂಡಿದ್ದ ರಂಗನೆಂಬ ಬಾಲಕನು, ಆರೆಸ್ಸೆಸ್ ಸಂಘದ ಯುದ್ಧ ಆಟವಾದ ಶಿವಾಜಿ-ಔರಂಗಜೇಬ ಆಟದಲ್ಲಿ ಶಿವಾಜಿ ಸೈನಿಕರ ಭರ್ಜಿಗೆ ಹತನಾಗಿ ಹೋಗುವುದನ್ನು; ಅಲ್ಲಿಂದ ಪಾರಾಗಿ ಬದುಕುವುದನ್ನು ಮಾದರರಂಗನವರು, ತಮ್ಮ ಕೇರಿಯ ಭಾಷೆಯ ವಾಸನೆಯಿಂದ, ಸರಳ ನಿರೂಪಣೆಯ ವಿನ್ಯಾಸದಿಂದ ಕಟ್ಟಿಕೊಟ್ಟಿದ್ದಾರೆ.

ಸಂಘದ ಹಿಡಿತಕ್ಕೆ 'ಶಿವ'ಕುಮಾರನು ಬೀರಪ್ಪನೂ ತಿಪ್ಪಣ್ಣನೂ ಕಾರ್ಲ್‌ಮಾರ್ಕ್ಸ್ ಓದಿದ ಇಬ್ರಾಹಿಂ, ಆ ಕೇರಿಯೂ ಬೆಂಕಿಯ ಆಕರ್ಷಣೆಗೆ ಸಿಕ್ಕ ಪತಂಗಗಳಂತಾಗಿ ಬಿಡುವ ಮುಗ್ಧತೆಯನ್ನು ಕತೆಗಾರರು ಮಾರ್ಮಿಕವಾಗಿ ಬಿಂಬಿಸಿದ್ದಾರೆ. ಆರಂಭದಲ್ಲಿ ಸಂಘದ ಹಿಡಿತದಿಂದ ದೂರ ಸರಿಯುವ ಬಾಲಕ ರಂಗನು ಜಬೀ ಎಂಬ ಮುಸ್ಲಿಂ ಗೆಳೆಯನ ಮನವೊಲಿಸಿ ಇಲ್ಲಿಗೆ ಕರೆತರುವ ಮಟ್ಟಕ್ಕೆ ಬದಲಾಗಿರುತ್ತಾನೆ. ನಮ್ಮ ಅರಿವಿನ ಮುಗ್ಧತೆಗೆ ಅಲ್ಲಿನ ಪ್ರಾಮಾಣಿಕತೆಗೆ ನಿಲುಕದ ಹಾಗೆ ಸಂಘದ ಒಳಕ್ರೌರ್ಯವು ರಂಗ ಮತು ಜಬೀಯಂಥವರನ್ನು ಶಿವಾಜಿ ಹೆಸರಿನಿಂದ ಕೊಲ್ಲಿಸಬಲ್ಲವು ಎಂಬುದು ಕತೆಯ ಉದ್ದೇಶವಾಗಿರುವಂತಿದೆ.



ಕತೆಯ ಆರಂಭದಲ್ಲಿದ್ದ ಗೊತ್ತು-ಗುರಿಗಳು ಅಂತ್ಯದಲ್ಲಿ ಎಲ್ಲೋ ಎಡವಿ ಮುಗ್ಗರಿಸಿದಂತಾಗಿ, ಕತೆಯ ತೀವ್ರತೆ ಓದುಗನಿಗೆ ತಲುಪದೆ ಹೋದಂತಾಗಿದೆ. ಅಂದರೆ ಗದ್ಯದಿಂದ ಪದ್ಯ ರೂಪಕ್ಕೆ ಬರುವ ಕತೆಗಾರ ಹೇಳುವುದು. '....ಶಿವಾಜಿ ಸೈನಿಕರು ಚುಚ್ಚಿದ ಭರ್ಜಿಗೆ ಸಾಯುವ ಸೈನಿಕನಾದೆ... ಮತ್ತೆ ಬದುಕಿದೆ ಧ್ವಂಸಗೊಂಡ ಆಲಯದಲ್ಲಿ...' ಎಂದು. ಹಾಗಾದರೆ ರಂಗನು 'ಮನವೊಲಿಸಲು' ತಂದ ಜಬೀ ಏನಾದನು? ಸಾಯುವ ಸೈನಿಕನಾದ ರಂಗನು ಜೀವ ಉಳಿಸಿಕೊಂಡು ಬದುಕಿ ಬಂದದ್ದಾದ್ರೂ ಹೇಗೆ? ಈ ಗ್ಯಾಪ್‌ನಲ್ಲಿರುವ ವಿವರಗಳನ್ನು ತುಂಬಿಸಿಕೊಡುವಲ್ಲಿ ಕತೆಗಾರ ಎಡವಿದ್ದಾರೆ.

ಕೊನೆಯಲ್ಲಿ ರಂಗನು ತನ್ನ ಕೇರಿಯ ಬಯಲಿಗೆ ಮರಳಿದ ಸೂಚನೆಯನ್ನು ನೀಡಿದ್ದು ಅರ್ಥಪೂರ್ಣವೆನಿಸುವಂತಿದೆ, ತಮಾಷೆ ಮಾಡಿದ ಹುಡುಗರ ಸೇರಿಕೊಳ್ಳುವಂತಿದೆ.

-ಸಿ. ರಾಮಸ್ವಾಮಿ, ಮಡಿಕೇರಿ

ಸಿನಿಮಾ ನಟನಟಿಯರೋ, ರಾಜಕಾರಣಿಗಳೋ ಆದರೆ ಮುಗಿಬಿದ್ದು ಹುಟ್ಟುಹಬ್ಬ ಆಚರಿಸುವವರು ಇದ್ದಾರೆ. ಕವಿಗಳು, ಸಾಹಿತಿಗಳು ಎಂದರೆ ಮೂಗುಮುರಿಯುವ ಜನರ ಮಧ್ಯೆ ಚಂಪಾರಂತಹ ಒಬ್ಬ ವಿಶೇಷ, ವಿಭಿನ್ನ ವ್ಯಕ್ತಿತ್ವದ ಹಿರಿಯ ಸಾಹಿತಿಯೊಬ್ಬರ ಜನ್ಮದಿನದ ನೆನಪಿಗೆ ನಿಮ್ಮ ಪತ್ರಿಕೆಯಲ್ಲಿ ಸುಂದರವಾದ ಲೇಖನಗಳನ್ನು ಪ್ರಕಟಿಸಿದಕ್ಕಾಗಿ ಧನ್ಯವಾದಗಳು.

-ಶುಭ ಜಯರಾಂ

ಹೊಗಳಿಕೆ ತೆಗಳಿಕೆ


ಲೋಕಸಭಾ ಚುನಾವಣೆ ಮುಗಿದು, ಕೇಂದ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ರಾಜ್ಯದಲ್ಲಿನ ಅನೇಕ ಶಾಸಕರು ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದರು. ಅವರಲ್ಲಿ ಸಾಕಷ್ಟು ಮಂದಿಯನ್ನು ನಮ್ಮ ಜನರು ಆರಿಸಿದರು...! ಆಶ್ಚರ್ಯ!! ಅವರು ಹೆಚ್ಚು ಸಾಮರ್ಥ್ಯ ಹೊಂದಿದ್ದು ಪದೋನ್ನತಿ ಪಡೆದರೆಂದು ಅದನ್ನು ಅರ್ಥೈಸುವ ಜನ ನಮ್ಮಲ್ಲಿದ್ದಾರೆ. ಅದು ವ್ಯಕ್ತಿ ಸ್ವಾತಂತ್ರ್ಯ ಎಂದೂ ಅರ್ಥೈಸುತ್ತಾರೆ(?)

ಆದರೆ ಅವರು ತೆರವು ಮಾಡಿದ ಸ್ಥಾನಗಳಿಗೆ ಮತ್ತೆ ಚುನಾವಣೆ ನಡೆಸಬೇಕಾಗಿದೆ. ಅದಕ್ಕೆ ಎಷ್ಟು ಹಣ ಖರ್ಚಾಗುತ್ತದೆ? ಎಷ್ಟು ಸಮಯ ವ್ಯಯವಾಗುತ್ತದೆ? ಅದರಲ್ಲಿ ಸರ್ಕಾರಕ್ಕೆ ಎಷ್ಟು ನಷ್ಟ? ಸಾರ್ವಜನಿಕರಿಗೆ ಎಷ್ಟು ನಷ್ಟ? ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಆಗುವ ಖರ್ಚೆಷ್ಟು? ಎಂಬುದನ್ನು ಯಾರಾದರೂ ಲೆಕ್ಕ ಹಾಕಿದ್ದಾರೆಯೇ? ಜನಸಾಮಾನ್ಯನಾದ ನನ್ನ ಅನಿಸಿಕೆ ಏನೆಂದರೆ ಪ್ರತಿಯೊಂದು ಸ್ಥಾನಕ್ಕೂ ಆಗುವ ಖರ್ಚು ಅಷ್ಟಿಷ್ಟಲ್ಲ, ಸಾರ್ವಜನಿಕರು ಮತ ಹಾಕಲು ಒಬ್ಬೊಬ್ಬರಿಗೂ ಒಂದೊಂದು ಗಂಟೆಯಾದರೂ ಬೇಕಾಗುತ್ತದೆ. ಆ ಸಮಯದ ಬೆಲೆ ಎಷ್ಟು? ಮತಗಟ್ಟೆಗೆ ಹೋಗಿಬರಲು ಆಗುವ ಖರ್ಚೆಷ್ಟು? ನೋಟಿಫಿಕೇಷನ್‌ಗೆ, ಚುನಾವಣಾ ಸಿಬ್ಬಂದಿ ನೇಮಕಕ್ಕೆ, ಮತ ಪತ್ರಕ್ಕೆ, ಮತಪೆಟ್ಟಿಗೆಗೆ, ಸಿಬ್ಬಂದಿ ಸಂಭಾವನೆಗೆ, ಪೊಲೀಸ್ ವ್ಯವಸ್ಥೆಗೆ, ಸಾರಿಗೆಗೆ, ಮತ ಎಣಿಕೆಗೆ, ಗೆದ್ದ ಅಭ್ಯರ್ಥಿಗೆ ರಾಜ್ಯಪಾಲರು ಪ್ರಮಾಣವಚನ ಬೋಧಿಸಲು ಮುಂತಾದವಕ್ಕೆಲ್ಲಾ ಅಪಾರವಾದ ಸಮಯ ಮತ್ತು ಹಣ ವ್ಯಯವಾಗುತ್ತದೆ. ಇನ್ನು ಅಭ್ಯರ್ಥಿಗಳು ಮಾಡುವ ಖರ್ಚನ್ನು ಊಹಿಸಲೂ ಸಾಧ್ಯವಿಲ್ಲ. ಈ ಎಲ್ಲಾ ಖರ್ಚುಗಳೂ ಸೇರಿದರೆ ಕನಿಷ್ಠವೆಂದರೆ ಪ್ರತಿಕ್ಷೇತ್ರಕ್ಕೆ 20 ಕೋಟಿ ರೂ. ಆದರೂ ಆಗುತ್ತದೆ....!!! ಈ ಖರ್ಚನ್ನೆಲ್ಲ ಕೊಡುವವರ್‍ಯಾರು?

ಅಂದರೆ ಒಬ್ಬ ಎಂಎಲ್‌ಎ, ಎಂ.ಪಿ. ಚುನಾವಣೆಗೆ ಸ್ಪರ್ಧಿಸುವುದೆಂದರೆ ಕನಿಷ್ಠ 20 ಕೋಟಿ ರೂ. ಸಾರ್ವಜನಿಕ ಹಣವನ್ನು ವ್ಯರ್ಥ ಮಾಡುವುದು ಎಂದು ಅರ್ಥ. ಇದು ಜನಪರ ಅರ್ಥ. ಅಂತಹ ಅಭ್ಯರ್ಥಿಗಳನ್ನು ಬೆಂಬಲಿಸಬೇಕೋ, ವಿರೋಧಿಸಬೇಕೋ ಎಂಬುದನ್ನು ನಾನು ಹೇಳುವುದಿಲ್ಲ, ಮತದಾರರು ಜನಪರ ಅರ್ಥವನ್ನೊಳಗೊಂಡಂತೆ ಸಂಪೂರ್ಣ ಮಾಹಿತಿ ತಿಳಿದು ಅವರೇ ನಿರ್ಧರಿಸಬೇಕಾದ ವಿಷಯ.

ನನ್ನ ಮಟ್ಟಿಗೆ ಹೇಳುವುದಾದರೆ, ಈ ರೀತಿ ಸಾರ್ವಜನಿಕ ಹಣವನ್ನು ಪೋಲು ಮಾಡಲು ಹೇಸದ ಜನರನ್ನು ರಾಜಕೀಯದಲ್ಲಿ ಸೇರಿಸಲೇಬಾರದು.

-ವೀರಖ್ಯಾತಯನ, ಬೆಂಗಳೂರು.



ಡಬ್ಬಲ್ ಗೇಮ್ ನಿರ್ಮಾಪಕರ ಡಬ್ಬಿಂಗ್ ಸಿನಿಮಾ

ಸುವರ್ಣ ಚಾನೆಲ್ ಕಳೆದ ವಾರ ಎರ... ಕಾರಣಗಳಿಗಾಗಿ ಸುದ್ದಿಯಲ್ಲಿತ್ತು. ಮೊದಲನೆಯದು '... ಕಥೆಯಲ್ಲ ಜೀವನ' ಎಂಬ ಹೊಸ ರಿಯಾಲಿಟಿ ... ಆರಂಭ ಮಾಡುವ ಮುಖಾಂತರ. ಇದನ್ನು ಪಂಚಭೂ...ತಾರೆ ಲಕ್ಷ್ಮಿ ನಿರೂಪಿಸುವುದರಿಂದ ಅದಕ್ಕೊಂದು ಸ್ಟಾ... ವ್ಯಾಲ್ಯೂ ಸಿಕ್ಕಿತ್ತು. ಲಕ್ಷ್ಮಿ ಈ ಕಥನದ ಬಗ್ಗೆ ಪತ್ರಿಕಾಗೋಷ್ಠಿಯ... ಪತ್ರಕರ್ತರ ಪ್ರಶ್ನೆಗಳಿಗೆ ಜಾಣತನದಿಂದ ಉತ್ತರಿಸಿ ... ಮಾತುಗಾರಿಕೆಯ ಝಲಕ್‌ಅನ್ನು ತೋರಿಸಿದರು.

ಎರಡನೆಯದಾಗಿ ಸುವರ್ಣ ಚಾನೆಲ್‌ನಲ್ಲಿ ... ರಾಮಮೂರ್ತಿ ನಿರ್ದೇಶನದ ಬೇಬಿ ಶ್ಯಾಮಿಲಿ ನಟಿಸಿರ... 'ಶ್ವೇತಾಗ್ನಿ' ಎಂಬ ಚಿತ್ರ ಪ್ರಸಾರವಾಯಿತು. ವಾಸ್ತವವಾ... ಈ ಚಿತ್ರ ಡಬ್ಬಿಂಗ್ ಚಿತ್ರವೆಂದು ನಾಗಾಭರಣ ನೇತೃತ್ವ... ಸಮಿತಿ ಬಹಳ ಹಿಂದೆ ವರದಿಯನ್ನು ನೀಡಿತ್ತು. ಕರ್ನಾಟಕದ... ಡಬ್ಬಿಂಗ್ ಚಿತ್ರಗಳ ಪ್ರಸಾರಕ್ಕೆ ಅವಕಾಶವಿಲ್ಲದಿರುವುದರಿಂ... ಸುವರ್ಣ ಚಾನೆಲ್ 'ಶ್ವೇತಾಗ್ನಿ' ಚಿತ್ರವನ್ನು ಪ್ರಸಾರ ಮಾಡಿ... ಬಗ್ಗೆ ಅನೇಕ ಬುದ್ಧಿಜೀವಿಗಳು ತೀವ್ರವಾದ ಆಕ್ಷೇಪವ... ವ್ಯಕ್ತಪಡಿಸಿದ್ದಾರೆ.

ಇದೊಂದು ಅಚಾತುರ್ಯ, ದಯವಿಟ್ಟು ಕ್ಷಮಿಸಿಬಿ... ಎಂದು ಚಾನೆಲ್‌ನವರು ಖಾಸಗಿಯಾಗಿ ಈಗ ಹೇಳುತ್ತಿದ್ದಾರ... ಆದರೆ ಈ ಮಧ್ಯೆ ನಿರ್ಮಾಪಕರ ಸಂಘದ ಅಧ್ಯಕ್ಷರಾ... ಕೆ.ಸಿ.ಎನ್. ಚಂದ್ರು ಮತ್ತು ಅಜಂತ ರಾಜು ಇಬ್ಬರ... ಜಂಟಿಯಾಗಿ ಇದು ಡಬ್ಬಿಂಗ್ ಚಿತ್ರ ಅಲ್ಲ ಎಂದ... ಹೇಳುತ್ತಿರುವುದರಿಂದ ಈ ವಿವಾದಕ್ಕೊಂದು ಹೊ... ಆಯಾಮ ಬಂದಿದೆ.

ಚಂದ್ರು ಮತ್ತು ಅಜಂತ ರಾಜು ಸದ್ಯದಲ್ಲೇ ಎ... ಡಾಕ್ಯುಮೆಂಟ್ಸ್‌ಗಳನ್ನು ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತ... ಮುಂದಿಟ್ಟು ತಮ್ಮ ವಾದವನ್ನು ಮಂಡಿಸಲಿದ್ದಾರಂ... ವಾಸ್ತವವಾಗಿ ಕನ್ನಡ ಚಿತ್ರರಂಗದ ಉದ್ಧಾರಕ್ಕೆ ಟೊಂಕ ಕ... ದುಡಿಯುತ್ತಿರುವಂತೆ ಪೋಸು ಕೊಡುವ ಚಂದ್ರು ಅ... ಪ್ರಾಮಾಣಿಕತೆಯ ಬಗ್ಗೆಯೇ ಈಗ ಸಂಶಯ ಹುಟ್ಟಿಕೊಂಡಿ...

ಡಾ. ರಾಜ್‌ಕುಮಾರ್ ಅವರು ಜೀವಂತವಿದ್ದಾ... ಇಂತಹ ಯಾವುದೇ ಘಟನೆಗಳು ನಡೆಯುತ್ತಿರಲಿಲ್ಲ. ಡಬ್ಬಿಂ... ಪರವಾಗಿ ಇಡೀ ಉದ್ಯಮದಲ್ಲಿ ಒಬ್ಬನೇ ಒಬ್ಬ ವ್ಯ... ಮಾತನಾಡುತ್ತಿರಲಿಲ್ಲ. ಆದರೆ ಈಗ ಕೆಲವು ವ್ಯಕ್ತಿಗಳು ... ರೀತಿ ಡಬ್ಬಿಂಗ್ ಪರ ಮಾತನಾಡುವುದು ಖಂಡಿತವಾಗಿಯ... ಕನ್ನಡ ವಿರೋಧಿ ಕೃತ್ಯ ಎಂದೇ ಭಾವಿಸಬೇಕಾಗುತ್ತ... ಇಂತಹ ಕೃತ್ಯವನ್ನು ಆರಂಭದಲ್ಲೇ ಚಿವುಟಿ ಹಾಕದಿದ್ದ... ಮುಂಬರುವ ದಿನಗಳಲ್ಲಿ ಇದು ಬೃಹತ್ ರೀತಿಯ... ಬೆಳೆದು ನಿಲ್ಲುವ ಅಪಾಯ ಇದೆ. ಉದ್ಯಮ... ಒಳ-ಹೊರಗನ್ನು ಸಂಪೂರ್ಣವಾಗಿ ಅರಿತಿರುವ ಚಂದ್ರುರಂ... ಹಿರಿಯ ನಿರ್ಮಾಪಕರು ಡಬ್ಬಲ್ ಗೇಮ್ ಮಾಡುವುದನ್ನ... ಬಿಟ್ಟು ಉದ್ಯಮದ ಒಳಿತಿಗಾಗಿ ಒಂದು ಸ್ಪಷ್ಟ ನಿಲುವಿ... ಬದ್ಧರಾಗಲಿ.

sms ಜೋಕ್ಸ್

ಮದುವೆ ಸಮಾರಂಭಗಳಲ್ಲಿ ಮುದಿಯರೆಲ್ಲ ನನ್ನ ಗಲ್ಲಗಳನ್ನು ಚಿವುಟಿ "ಮುಂದಿನ ಸರದಿ ನಿನ್ನದು" ಎಂದು ಚುಡಾಯಿಸುವ ಮೂಲಕ ನನಗೆ ಹಿಂಸೆ ನೀಡುತ್ತಿದ್ದರು. ಆದರೆ ಅದನ್ನೆಲ್ಲ ಈಗ ನಾನು ಬಗೆಹರಿಸಿದ್ದೇನೆ.

ಹೇಗೆ ಗೊತ್ತಾ?

ಎಲ್ಲಾ ತಿಥಿಗಳಲ್ಲಿ ನಾನೂ ಹಾಗೆ ಅವರಿಗೆ ಮಾಡುವ ಮೂಲಕ!

****

ಪುರುಷ: ವಯಾಗ್ರಾದ ಮೂರು ಮಾತ್ರೆಗಳನ್ನು ಕೊಡು.

ಔಷಧಿ ಅಂಗಡಿಯವ: ಯಾಕಪ್ಪಾ?

ಪುರುಷ: ಇವತ್ತು ನನ್ನ ಮನೆಗೆ ಮೂರು ಹುಡುಗಿಯರು ಬರಲಿದ್ದಾರೆ.

ಮಾರನೆ ದಿನ

ಪುರುಷ: ನನಗೆ ಐಯೋಡೆಕ್ಸ್ ಕೊಡು.

ಅಂಗಡಿಯವ: ಯಾಕಪ್ಪಾ?

ಪುರುಷ: ಐಯೋಡೆಕ್ಸ್ ನನ್ನ ಕೈ ನೋವಿಗೆ. ನಿನ್ನೆ ರಾತ್ರಿ ಆ ಹುಡುಗಿಯರು ಬರಲೇ ಇಲ್ಲ.

****



ಭಗ್ನಪ್ರೇಮಿಯನ್ನು ಗೆಳೆಯ ಕೇಳಿದ: ನೀನು ಅವಳನ್ನು ಬಿಟ್ಟೆಯೋ, ಅಥವಾ ಆಕೆ ನಿನ್ನನ್ನು ಬಿಟ್ಟಳೋ?

ಪ್ರೇಮಿ ಉತ್ತರಿಸಿದ: ಇಲ್ಲ, ಪ್ರೇಮ ನಮ್ಮಿಬ್ಬರನ್ನು ಬಿಟ್ಟಿತು.

****

ಕಂಡು ಹಿಡಿದವರು:

ವಿಮಾನ: ರೈಟ್ ಸಹೋದರರು

ಸೈಕಲ್: ಮ್ಯಾಕ್‌ಮಿಲನ್

ಟೆಲಿಫೋನ್: ಗ್ರಾಹಮ್ ಬೆಲ್

ಟೆಲಿಸ್ಕೋಪ್: ಗೆಲಿಲಿಯೋ

ಪರೀಕ್ಷೆಗಳು: ಹುಡುಕ್ತಾ ಇದ್ದೇವೆ. ಸಿಕ್ಕಿದ್ರೆ ಮಾತ್ರ ಹುಚ್ಚು ನಾಯಿಗೆ ಹೊಡೆದಂಗೆ ಹೊಡೆಯುತ್ತೇವೆ.

****

ಡಾಕ್ಟರ್ ಹೇಳುತ್ತಾರೆ "ನಿಮ್ಮ ಬಟ್ಟೆಗಳನ್ನು ಬಿಚ್ಚಿರಿ" ಎಂದು.

ದಂತ ವೈದ್ಯರು ಹೇಳುತ್ತಾರೆ "ಇನ್ನಷ್ಟು ಅಗಲಿಸಿ" ಎಂದು.

ವಾಸ್ತುಶಿಲ್ಪಿ ಹೇಳುತ್ತಾರೆ "ನಾನು ಒಳಗೆ ಹೊಕ್ಕ ನಂತರ ನಿಮಗೆ ಗೊತ್ತಾಗುತ್ತೆ" ಎಂದು.


ಟೆಲಿಫೋನ್ ವ್ಯಕ್ತಿ ಕೇಳುತ್ತಾನೆ "ನಿಮಗೆ ಟೇಬಲ್ ಮೇಲೆ ಬೇಕೋ ಅಥವಾ ಗೋಡೆ ಮೇಲೆ ಬೇಕೋ" ಎಂದು.

ನಲ್ಲಿ ರಿಪೇರಿಯವ ಹೇಳುತ್ತಾನೆ "ಇದು ಮತ್ತೆ ಒದ್ದೆಯಾದಾಗ ನನ್ನನ್ನು ಕರೆಯಿರಿ" ಎಂದು.

ಶವಪರೀಕ್ಷಿಸುವವ ಹೇಳುತ್ತಾನೆ "ನನ್ನನ್ನು ನಂಬಿ. ಇದರಿಂದ ನಿಮಗೆ ನೋವು ಆಗುವುದಿಲ್ಲ" ಎಂದು.



ಹಂಸದ ದೇಸೀ ರಾಗ



ಂಸಲೇಖ ಮೊನ್ನೆ ತಮ್ಮ ಹುಟ್ಟುಹಬ್ಬವನ್ನು ರೀತಿಯಲ್ಲಿ ಆಚರಿಸಿಕೊಂಡರು. ಜೂನ್ ಅವರ ಕನಸಿನ ಕೂಸಾದ ಹಂಸಲೇಖ ಆರ್ಟ್ ರ್ಫಾರ್ಮೆನ್ಸ್ ಅಂಡ್ ರಿಸರ್ಚ್ ಕಾಲೇಜಿಗೆ ಪನೆ ಮಾಡುವ ಮುಖಾಂತರ ತಮ್ಮ ಹುಟ್ಟು ನ್ನು ಆಚರಿಸಿದರು.

ಒಂದು ಕಾಲವಿತ್ತು, ಹಂಸಲೇಖ ಅವರ ಹುಟ್ಟು ದರೆ, ಅವರಿಗೆ ಹೂವಿನ ಬೊಕೆ ಕೊಡಲು ದವರು ಬೆಳಗ್ಗಿನಿಂದಲೇ ಮನೆಯ ಮುಂದೆ ಯುತ್ತಿದ್ದರು. ಅದರಲ್ಲಿ ದೊಡ್ಡ ದೊಡ್ಡ ಹೀರೋಗಳು ಸೇರಿರುತ್ತಿದ್ದರು. ಆದರೆ ಮೊನ್ನೆ ಹಂಸಲೇಖ ಹುಟ್ಟುಹಬ್ಬದ ದಿನದಂದು ತಮ್ಮ ಕಾಲೇಜಿನ ಪನೆ ಮಾಡುವಾಗ ಉದ್ಯಮದ ನರಪಿಳ್ಳೆಯೂ ಣಿಸಲಿಲ್ಲ. ಅಲ್ಲಿ ಕಾಣಿಸಿಕೊಂಡ ಏಕೈಕ ನಾಯಕ ದರೆ 'ನೆನಪಿರಲಿ' ಖ್ಯಾತಿಯ ಪ್ರೇಂ ಮಾತ್ರ. ಇನ್ನುಳಿ ಜಕಾರಣಿಯೂ ಆಗಿರುವ ಬಿ.ಸಿ. ಪಾಟೀಲ್ ಐಎಎಸ್ ಅಧಿಕಾರಿಯೂ, ನಾಯಕ ನಟನೂ ಕೆ. ಶಿವರಾಂ ಉಪಸ್ಥಿತರಿದ್ದರು. ಅಂದರೆ, ಹಂಸಲೇಖ ಉದ್ಯಮದ ಜನರಿಗೆ ಬೇಡವಾಗಿ ದ್ದಾರೆ. ಆದರೂ ಇಂತಹ ದೊಡ್ಡ ಯೋಜನೆ ಯನ್ನು ಹಂಸ್ ಏಕಾಂಗಿಯಾಗಿ ಕೈಗೆತ್ತಿಕೊಂಡಾಗ ಉದ್ಯಮ ದವರು ಬಂದು ಅವರಿಗೆ ಶುಭ ಹಾರೈಸಬಹುದಿತ್ತು.

ಇದೇನೇ ಇರಲಿ, ಹಂಸಲೇಖ ಸಂಪೂರ್ಣವಾಗಿ ತನ್ನ ಟ್ರ್ಯಾಕ್‌ಅನ್ನು ಬದಲಾಯಿಸಿದಂತೆ ಕಾಣಿಸುತ್ತಿದೆ. ಕಳೆದ ನಾಲ್ಕೈದು ವರ್ಷಗಳಿಂದ ಅಲ್ಲೊಂದು ಇಲ್ಲೊಂದು ಚಿತ್ರಕ್ಕೆ ಸಂಗೀತ ನಿರ್ದೇಶನ ನೀಡುತ್ತಿರುವ ಹಂಸಲೇಖ ಈಗ ತನ್ನ ತನು, ಮನ, ಧನವನ್ನು ಸಂಪೂರ್ಣವಾಗಿ ಕಾಲೇಜು ಸ್ಥಾಪನೆಗೆ ಮೀಸಲಿಟ್ಟಿದ್ದಾರೆ. ಅಂದು ಉದ್ಘಾಟನೆಗೆ ಮುಖ್ಯ ಮಂತ್ರಿ ಯಡಿಯೂರಪ್ಪ ಮತ್ತು ಸಿದ್ಧಗಂಗಾಮಠದ ಶಿವ ಕುಮಾರ ಸ್ವಾಮೀಜಿ ಬರಬೇಕಿತ್ತು. ಹಾಗಂತ ಅವರ ಗೈರುಹಾಜರಿ ಹಂಸಲೇಖರ ಸ್ಪಿರಿಟ್‌ಅನ್ನು ಕಡಿಮೆ ಮಾಡಲಿಲ್ಲ.

ಚನ್ನಪಟ್ಟಣದ ಬಳಿ ಈಗಾಗಲೇ ಸುಮಾರು ಐವತ್ತು ಎಕರೆಯ ವಿಶಾಲವಾದ ಜಮೀನಿನಲ್ಲಿ ಕಾಲೇಜು ಸ್ಥಾಪಿಸಲು ಹೊರಟಿದ್ದಾರೆ. ಅದನ್ನು ಜನಪದ ವಿಶ್ವವಿದ್ಯಾಲಯ ವನ್ನಾಗಿಸಲು ಕೂಡಾ ಹಂಸಲೇಖ ಪ್ರಯತ್ನ ಪಡುತ್ತಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ಕನ್ನಡ ನೆಲದ ಸೊಗಡು ಮತ್ತು ಸೊಗಸನ್ನು ಪ್ರತಿಬಿಂಬಿಸುವ ಜನಪದ ಸಾಹಿತ್ಯವನ್ನು ಇಂದಿನ ಜನಾಂಗದ ಮಕ್ಕಳಿಗೆ ತಿಳಿಸುವುದೇ ಇವರ ಸದುದ್ದೇಶ. ತಮಾಷೆಯೆಂದರೆ, 'ನಿಂಬೆಹಣ್ಣಿನಂಥ ಹುಡುಗಿ ಬಂದ್ಲು ನೋಡು' ಎಂಬ ಚಿತ್ರ ಸಾಹಿತ್ಯದಿಂದ ಕನ್ನಡಿಗರ ಹೃದಯವನ್ನು ಗೆದ್ದ ಹಂಸಲೇಖ ಈಗ ಜನಪದ ಸಾಹಿತ್ಯದ ಮುಖಾಂತರ ಸಾಂಸ್ಕೃತಿಕ ರಾಯಭಾರಿಯಾಗಲು ಹೊರಟಿರುವುದು.

ಸುಮಾರು ಹದಿನೆಂಟು ವರ್ಷಗಳ ಕಾಲ ಕನ್ನಡ ಚಿತ್ರರಂಗದ ಸಂಗೀತ ಕ್ಷೇತ್ರದಲ್ಲಿ ಸಾರ್ವಭೌಮನಾಗಿ ಮೆರೆದ ಹಂಸಲೇಖ ಹಲವಾರು ಉತ್ತಮ ಸಾಹಿತ್ಯಗಳಿಂದ ಮನ ಗೆದ್ದವರು. ಅಷ್ಟೇ ಸಂಖ್ಯೆಯಲ್ಲಿ ಅವರ ಅನೇಕ ಸಾಹಿತ್ಯಗಳೂ ವಿವಾದಕ್ಕೆ ಕೂಡಾ ಈಡಾಗಿದ್ದವು. ಅನಂತರ ಮನೋಹರ್, ಕಲ್ಯಾಣ್, ಅರ್ಜುನ್, ಶ್ರೀಧರ್ ಮೊದಲಾದ ಯುವ ಸಂಗೀತ ನಿರ್ದೇಶಕರು ಗಾಂಧಿನಗರಕ್ಕೆ ಲಗ್ಗೆಯಿಡುತ್ತಿದ್ದಂತೇ ಹಂಸಲೇಖ ಮೂಲೆಗುಂಪಾದರು. ಅದರಲ್ಲೂ ಹಂಸ ಲೇಖಾ ಅವರ ಖಾಯಂ ಗಿರಾಕಿಗಳಾದ ರಾಜೇಂದ್ರ ಸಿಂಗ್ ಬಾಬು, ನಂಜುಂಡೇಗೌಡ, ಎಸ್. ನಾರಾಯಣ್, ಮಹೇಂದರ್ ಮೊದಲಾದ ನಿರ್ದೇ ಶಕರುಗಳೇ ಬೇರೆ ಸಂಗೀತ ನಿರ್ದೇಶಕ ರತ್ತ ಹೋದಾಗ ಹಂಸಲೇಖ ಕೆಲಸ ವಿಲ್ಲದೇ ನಿರುದ್ಯೋಗಿಯಾದರು. ಅದೇ ಸಂದರ್ಭದಲ್ಲಿ ಹಂಸಲೇಖ ಮತ್ತು ರವಿಚಂದ್ರನ್ ಸಂಬಂಧ ಕೂಡಾ ಹಳಸಿ ಹೋಗಿತ್ತು. ಇದೆಲ್ಲ ನೋಡಿ, ಅನುಭವಿಸಿದ ಹಂಸಲೇಖ ಸಿನಿಮಾದವರೆಂದರೆ ಇಷ್ಟೇ ಎಂಬ ತೀರ್ಮಾನಕ್ಕೆ ಬಂದಿದ್ದರು.




ಹಾಗೆ ನೋಡಿದರೆ, ಹಂಸಲೇಖ ಆರಂಭದಿಂದಲೂ ವಿವಿಧ ಕನಸುಗಳನ್ನು, ಯೋಜನೆಗಳನ್ನು ಬಿತ್ತುತ್ತಲೇ ಬಂದಿದ್ದಾರೆ. ಉದಾಹರಣೆಗೆ, ಕನ್ನಡದ ವಾದ್ಯಗಾರರನ್ನು ಸೇರಿಸಿ 'ಸಂಸಂ' (ಸಂಗೀತ ಸಂಘ) ಎಂಬ ಸಂಸ್ಥೆ ಹುಟ್ಟು ಹಾಕಿದ್ದರು. ಆದರೆ ಅದೇನೂ ಅಂತಹ ಬೆಳವಣಿಗೆ ಕಾಣದೆ ಬಾಲ್ಯದಲ್ಲೇ ಚಿವುಟಿಹೋಯಿತು. ಅನಂತರ 'ನಾಟಕ ಬಜಾರ' ಎಂಬ ಇನ್ನೊಂದು ಸಂಸ್ಥೆ ಕಟ್ಟಿ ರಂಗಭೂಮಿಯ ಪುನರುತ್ಥಾನಕ್ಕೆ ಕೈಹಾಕಿದರು. "ನೀವು ಮೊದಲು ಸಿನಿಮಾ ಉದ್ಧಾರ ಮಾಡಿ, ರಂಗಭೂಮಿಯ ಉಸಾಬರಿ ನಿಮಗೇಕೆ?" ಎಂದು ರಂಗಕರ್ಮಿಗಳು ಅಪಸ್ವರ ತೆಗೆದರು. ಅದಾದ ನಂತರ 'ಕಥಾ ಕಣಜ' ಎಂಬ ಇನ್ನೊಂದು ಸಂಸ್ಥೆ ಜನ್ಮಕ್ಕೂ ಕಾರಣರಾದರು. ಹೊಸ ನಿರ್ದೇಶಕರಿಗಾಗಿ ಕಥೆ ಮತ್ತು ಚಿತ್ರಕತೆಯನ್ನು ಪ್ಯಾಕೇಜ್ ರೂಪದಲ್ಲಿ ನೀಡುವ ಯೋಜನೆಯದು. ದುರದೃಷ್ಟವಶಾತ್ ಒಂದೇ ಒಂದು ಕಥೆಯೂ 'ಕಣಜ'ದಿಂದ ಹೊರಬಂದು ಸಿನಿಮಾವಾಗಲೇ ಇಲ್ಲ. ಇದೆಲ್ಲ ಅನುಭವದ ನಂತರ ಹಂಸಲೇಖ ದೇಸೀ ಸಂಸ್ಕೃತಿಯನ್ನು ಉಳಿಸುವ ಹೊಸ ಯೋಜನೆ ಕೈಗೆತ್ತಿಕೊಂಡರು. ಇದರ ಫಲವೇ ಈಗ ಈ ಕಾಲೇಜಿನ ಶಂಕುಸ್ಥಾಪನೆ.

ಖಂಡಿತವಾಗಿಯೂ ಹಂಸಲೇಖ ಕನ್ನಡ ಚಿತ್ರರಂಗ ಕಂಡ ಅತ್ಯಂತ ಪ್ರತಿಭಾನ್ವಿತ ಸಂಗೀತ ನಿರ್ದೇಶಕ ಎಂಬುದರಲ್ಲಿ ಡೌಟೇ ಇಲ್ಲ. ಉದ್ಯಮ ಅವರ ಪ್ರತಿಭೆಯನ್ನು ಬಳಸಲಿಲ್ಲವೋ ಅಥವಾ ಹಂಸಲೇಖ ಉದ್ಯಮದ ಬಗ್ಗೆ ತಾತ್ಸಾರ ಮನೋಭಾವ ಹೊಂದಿದರೋ ಗೊತ್ತಿಲ್ಲ. ಹೀಗಾಗಿ ಇತ್ತೀಚೆಗೆ ಹಂಸ ಲೇಖಾ ಬತ್ತಳಿಕೆಯಿಂದ ಅಂತಹ ಗುನುಗುವಂತಹ ಟ್ಯೂನುಗಳೇ ಹುಟ್ಟಿ ಬರಲಿಲ್ಲ. ಹಂಸಲೇಖ ಈ ಗೊಂದಲದಲ್ಲಿ ಕಳೆದುಹೋದರೇನೋ ಎಂದು ಭಾವಿಸುವಷ್ಟರಲ್ಲಿ ಈಗ ಮತ್ತೆ ಹೊಸ ಅವತಾರದಲ್ಲಿ ಕಾಣಿಸಿ ಕೊಂಡಿದ್ದಾರೆ. ಎಲ್ಲ ಕ್ಷೇತ್ರಗಳಲ್ಲಿ ಈಗ ಜಾಗತೀಕರಣದ ಪ್ರಭಾವ ಬೀರುತ್ತಿರುವಾಗ ಹಂಸಲೇಖ ದೇಸೀ ಸಂಸ್ಕೃತಿಯನ್ನು ಉಳಿಸುತ್ತೇನೆ ಎಂದು ಹೊರಟಿರುವುದು ವ್ಯಂಗ್ಯದಂತೆ ಕಾಣುತ್ತಿದೆ.

● ಶೆಣೈ

ಕಿರುತೆರೆ ಬರ್ಬಾದ್





ನ್ನಡದ ಕಿರುತೆರೆ ಅವನತಿಯ ಅಂಚಿಗೆ ನಿಂತಂತೆ ಕಾಣುತ್ತಿದೆ. ದ ದಿನಕ್ಕೆ ಯಲ್ಲಿ ಹೆಚ್ಚುತ್ತಿರುವ ದ್ಯೋಗವನ್ನು ವರೆ ಇಲ್ಲಿನ ಹಿ ಮತ್ತು ಅದರ ಯರಿಗೆ ಇನ್ನು ಬವಿಲ್ಲವೆ? ಎಂಬ ಮೂಡುತ್ತಿದೆ.

ದ 25 ವರ್ಷಗಳಿಂದ ತನ್ನ ವ್ಯಾಪ್ತಿಯನ್ನು ಕೊಳ್ಳುತ್ತಾ ದಿನೇದಿನೇ ಬೆಳೆದುಬಂದ, ಅದರಲ್ಲೂ ಂದು ದಶಕದಿಂದ ಸಿನಿಮಾ ಮತ್ತು ರಂಗಭೂಮಿ ಕ್ಕೆಡಿಗೆ ಸರಿಸಿ ಸಾಂಸ್ಕೃತಿಕ ವಲಯವನ್ನು ಆಳಿದ ಇಂದು ಸತ್ತಹೆಣದಂತೆ ಕಾಲು ಮಡಚಿ, ಅಂಗಾತ ಬಿಟ್ಟಿದೆ. ಒಂದು ಕಡೆ ಸಿನಿಮಾರಂಗ ತನ್ನ ಕೃತ ಅಪರಾಧಗಳಿಂದ ತೋಪೆದ್ದು ಕೂತಿದ್ದರೆ, ದೆಡೆ ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಟೀವಿ ಪ್ರಪಂಚ ೩.


ಮಿತ ಮಾರುಕಟ್ಟೆಯಿರುವ ಕರ್ನಾಟಕದಲ್ಲಿ ಕಳೆದ ವರ್ಷಗಳಿಂದೀಚೆಗೆ ಕೇಡುಗಾಲಕ್ಕೋ ಏನೋ ಒಂದರ ಹಿಂದೆ ಒಂದು ಚಾನೆಲ್ ಆರಂಭವಾಗಿದ್ದವು. ಚಾನೆಲ್‌ಅನ್ನು ಡದವರೆಲ್ಲಾ ಗೃಹಿಣಿಯರು ಹಾಗೂ ವರ್ಗದ ವೀಕ್ಷಕರನ್ನು ಸೆಳೆಯಲು ಟ್ಟಿಲೆ ಧಾರಾವಾಹಿಗಳನ್ನು ಆರಂಭ ಅಂಥ ಸಮಯದಲ್ಲಿ ರಂಗಭೂಮಿ ಪ್ರತಿಭಾವಂತರು, ಸಿನಿಮಾಗಳಿಲ್ಲದೆ ದ್ಯೋಗಿಗಳಾಗಿದ್ದ ನಟ, ನಟಿ ಮತ್ತು ಕರುಗಳನ್ನು ಕೈಹಿಡಿದು ಅವರ ಬದುಕನ್ನು ದ್ದು ಇದೇ ಕಿರುತೆರೆ.



ಧಾರಾವಾಹಿಗಳ ವೈಂಡಪ್

ಡದ ಐದಾರು ಗಳಲ್ಲಿ ವರ್ಷಕ್ಕೆ ಂದರೂ ದ ಎಂಭತ್ತು ಹಿಗಳು ವಾಗುತ್ತಿದ್ದವು. ಈಗ ಆ ಹಿಗಳ ಸಂಖ್ಯೆ ಶಷ್ಟಕ್ಕೂ, ಕ್ಕೂ ಇಳಿದಿದೆ. ಧಾರಾವಾಹಿಗಳ ಸಂಖ್ಯೆ ಒಂದೇ ಏಟಿಗೆ ಶೇ.೫೦ ಕ್ಕಿಂತ ಕಮ್ಮಿಯಾದರೆ ಅದರಲ್ಲಿ ಕೆಲಸ ಮಾಡುವ ಕಾರ್ಮಿಕರ, ತಂತ್ರಜ್ಞರ ಹಾಗೂ ಕಲಾವಿದರ ಬದುಕು ಮೂರಾಬಟ್ಟೆಯಾಗದೆ, ಮತ್ತೇನಾಗಲು ಸಾಧ್ಯ?

ಕಳೆದ ಮೂರು ತಿಂಗಳಲ್ಲಿ ಕನ್ನಡ ವಾಹಿನಿಗಳಲ್ಲಿ ವೈಂಡಪ್ ಆಗಿರುವ ಸೀರಿಯಲ್‌ಗಳು ಒಂದೆರಡಲ್ಲ. ಉದಯ ಟಿವಿಯಲ್ಲಿ ಮೂಡಿಬರುತ್ತಿದ್ದ ಬಿ.ಸುರೇಶ್ ಅವರ 'ಥಕದಿಮಿಥಾ' ಮತ್ತು 'ನಾಕು ತಂತಿ'ಯಂಥ ಯಶಸ್ವೀ ಧಾರಾವಾಹಿಗಳೇ ಈಗ ವೈಂಡಪ್ ಆಗಿವೆ. ಕಸ್ತೂರಿ ಚಾನೆಲ್‌ನಲ್ಲಿ ಮೂಡಿ ಬರುತ್ತಿದ್ದ ಬುಕ್ಕಾಪಟ್ಟಣ ವಾಸು ಅವರ 'ಸೌಂದರ್ಯ ಲಹರಿ', ಶ್ರೀನಿವಾಸ್ ಅವರ 'ಮಣ್ಣಿನ ಋಣ', ಹುಲಿ ಚಂದ್ರಶೇಖರ್ ನಿರ್ದೇಶನದ 'ಮಹಾಯಾನ', ಟಿ.ಎನ್. ಸೀತಾರಾಂ ಕ್ಯಾಂಪ್‌ನವರ 'ಮುಂಬೆಳಗು', ಸಿಹಿಕಹಿ ಚಂದ್ರು ಶಿಷ್ಯರ 'ಪಾಯಿಂಟ್ ಪರಿಮಳ' ಮುಂತಾದವು ಅಕಾಲ ಮರಣಕ್ಕೀಡಾಗಿವೆ.



ಸುರ

ಸುವರ್ಣ ಚಾನೆಲ್‌ನ 'ಪತಿ ಪತ್ನಿ ಗುಲಾಮ', ಮಲಯಾಳಂನ ರಿಮೇಕ್ ಧಾರಾವಾಹಿ 'ಮೇಘ ಮಂದಾರ' ಗಳೂ ವೈಂಡಪ್ ಆಗಿವೆ. ಸುನಿಲ್ ಪುರಾಣಿಕ್ ನಿರ್ದೇಶನದ 'ಶಿವಲೀಲಾಮೃತ' ಎಂಬ ಪೌರಾಣಿಕ ಧಾರಾವಾಹಿಯನ್ನು ಸಲಹುವುದು ಕಷ್ಟವಾಗಿರುವುದರಿಂದ ಇಷ್ಟರಲ್ಲೇ ಶಿವಲೀಲೆಯೂ ನಿಲ್ಲುವ ಸಾಧ್ಯತೆಯಿದೆ.

ಈ ಟಿವಿಯಲ್ಲಿ ಕಿರುತೆರೆ ದಿಗ್ಗಜ ರವಿಕಿರಣ್ ನಿರ್ದೇಶನದ 'ಸುಕನ್ಯಾ' ಮತ್ತು 'ಮತ್ತೆ ಬರುವನು ಚಂದಿರ' ಧಾರಾವಾಹಿಗಳೂ ಜೀವಬಿಟ್ಟಿವೆ. ಒಂದು ಎಪಿಸೋಡಿಗೆ ಐವತ್ತರಿಂದ ಅರವತ್ತು ಸಾವಿರ ಬಂಡವಾಳ ಹೂಡಿದರೂ ಜಾಹೀರಾತುಗಳ ರೆವಿನ್ಯೂ ದೊರಕದ ಕಾರಣ ಬಹುತೇಕ ಎಲ್ಲ ಚಾನೆಲ್‌ನವರು ಈಗ ಔಟ್ ಸೋರ್ಸ್ ಧಾರಾವಾಹಿಗಳನ್ನು ನಿಲ್ಲಿಸಿ ಕಡಿಮೆ ವೆಚ್ಚದಲ್ಲಿ ತಮ್ಮದೇ ಇನ್‌ಹೌಸ್ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿದ್ದಾರೆ. ಇದ್ದುದರಲ್ಲೇ ಸ್ವಲ್ಪ ಚೇತೋಹಾರಿ ಯಾಗಿರುವುದು ಉದಯ ಟಿವಿಯ ರಿಮೇಕ್ ಧಾರಾವಾಹಿಗಳು. ರಾಡಾನ್, ನಿಂಬಸ್‌ನಂಥ ತಮಿಳುನಾಡು ಮೂಲದ ಕಿರುತೆರೆ ನಿರ್ಮಾಣ ಸಂಸ್ಥೆಗಳು ತಮಗೆ ಬೇಕಿರುವಷ್ಟು ಸ್ಲಾಟ್ ಖರೀದಿಸಿ, ತಮ್ಮದೇ ಕಾಂಟ್ಯಾಕ್ಟುಗಳ ಮೂಲಕ ಜಾಹೀರಾತುಗಳನ್ನೂ ಪಡೆದು ಧಾರಾವಾಹಿಗಳನ್ನು ನಿಭಾಯಿಸುತ್ತಿದ್ದಾರೆ.

ಆದರೆ ಸಮಸ್ಯೆಯಾಗಿರುವುದೇ ನಮ್ಮ ಕನ್ನಡದ ಧಾರಾವಾಹಿ ನಿರ್ಮಾಪಕರು ಮತ್ತು ಕಲಾವಿದರಿಗೆ. ಇಲ್ಲಿ ಬಹುತೇಕರು ನಿರ್ದೇಶನ ಮತ್ತು ನಿರ್ಮಾಣವನ್ನೂ ಮಾಡುತ್ತಿದ್ದರಿಂದ ತಮ್ಮದೇ ಯೂನಿಟ್‌ಗಳು ಹಾಗೂ ಕ್ರಿಯೇಟೀವ್ ಟೀಂಗಳನ್ನು ಹೊಂದಿದ್ದರು. ಈಗ ಏಕಾಏಕಿ ಧಾರಾವಾಹಿಗಳು ವೈಂಡಪ್ ಆಗಿರುವುದರಿಂದ ತಮ್ಮನ್ನು ನಂಬಿರುವ ಹತ್ತಿಪ್ಪತ್ತು ಜನರನ್ನು ಸಾಕುವುದು ಕಿರುತೆರೆಯ ನಿರ್ಮಾಪಕ, ನಿರ್ದೇಶಕರಿಗೆ ಹೊರೆಯಾಗಿದೆ.



ರವಿಕಿರಣ್

ಹೊಸ ಧಾರಾವಾಹಿಗಳನ್ನು ಆರಂಭಿಸಲು ಕಥೆ ಹಿಡಿದು ಚಾನೆಲ್ ಕಚೇರಿಗಳಿಗೆ ಹೋದರೆ, ಅಲ್ಲಿನ ಮುಖ್ಯಸ್ಥರು "ರಿಯಾಲಿಟಿ ಶೋಗಳ ಕಾನ್ಸೆಪ್ಟ್ ಇದ್ದರೆ ತನ್ನಿ, ಧಾರಾವಾಹಿಗಳ ಸಹವಾಸವೇ ಬೇಡ" ಎನ್ನುತ್ತಿದ್ದಾರೆ. ಹೀಗಾಗಿ ಎಷ್ಟೋ ಜನ ಕಿರುತೆರೆ ನಿರ್ದೇಶಕರು ಈಗ ಧಾರಾವಾಹಿಗಳಿಗೆ ವಿದಾಯ ಹೇಳಿ ಸಣ್ಣ ಪುಟ್ಟ ಡಾಂಕ್ಯುಮೆಂಟರಿ ಮಾಡಿಕೊಂಡು ಬದುಕು ನಡೆಸಬೇಕಾದ ಅನಿವಾರ್ಯತೆ ಉಂಟಾಗಿದೆ.

ಕಷ್ಟಕ್ಕೆ ಸಿಲುಕಿದ ಕಲಾವಿದರು

ಇನ್ನು ಧಾರಾವಾಹಿಗಳಲ್ಲಿ ಕೈತುಂಬ ಅವಕಾಶ ಗಿಟ್ಟಿಸಿಕೊಂಡಿದ್ದ ನಟನಟಿಯರ ಪಾಡಂತೂ ಹೇಳತೀರದಾಗಿದೆ. ದಿನವೊಂದಕ್ಕೆ ಏಳುನೂರರಿಂದ ಎರಡು ಮೂರು ಸಾವಿರದ ತನಕ ಸಂಭಾವನೆ ಪಡೆಯುತ್ತಿದ್ದ ಕಲಾವಿದರಿಗೆ ಇಂದು ದಿನಕ್ಕೆ ಐನೂರು ರೂಪಾಯಿಯ ಪಗಾರವೂ ಸಿಗುತ್ತಿಲ್ಲ. ಕೈತುಂಬ ಕಾಸು ಬರುತ್ತಿದ್ದ ಸಮಯದಲ್ಲಿ ಎಷ್ಟೋ ಜನ ಯುವ ನಟ/ನಟಿಯರು ಕಿರುತೆರೆಯ ಸಂಪಾದನೆಯನ್ನು ನಂಬಿ ಬ್ಯಾಂಕ್ ಸಾಲದಲ್ಲಿ ಮಜಬೂತಾದ ಕಾರುಗಳನ್ನು ಕೊಂಡುಕೊಂಡಿದ್ದರು. ಈಗ ಅದರ ಮಾಸಿಕ ಕಂತನ್ನು ತುಂಬುವುದೇ ಕಷ್ಟವಾಗಿದೆ.



ಒಟ್ಟಾರೆಯಾಗಿ ಕಿರುತೆರೆಯ ಕಲಾವಿದರ ಮತ್ತು ತಂತ್ರಜ್ಞರ ಬದುಕು ನೀರ ಮೇಲಿನ ಗುಳ್ಳೆಯಂತೆ ಹಠಾತ್ತನೆ ಒಡೆದು ಶೂನ್ಯತೆ ಆವರಿಸಿದೆ.

● ಅರುಣ್.ಜಿ

ಎತ್ತಿಗೆ ಜ್ವರ-ಎಮ್ಮೆಗೆ ಬರೆ

ಸಿನಿಮಾದ ನಾಯಕನಟರುಗಳ ಕೋಟಿಗಟ್ಟಲೆ ಸಂಭಾವನೆಗೆ ಕತ್ತರಿ ಹಾಕಿ ಸಿನಿಮಾ ನಿರ್ಮಾಣ ವೆಚ್ಚವನ್ನು ಕಡಿತಗೊಳಿಸುವ ಧೈರ್ಯವಿಲ್ಲದ ನಿರ್ಮಾಪಕರ ಸಂಘ ಈಗ ಕಾರ್ಮಿಕರನ್ನು ಶೋಷಣೆಗೀಡುಮಾಡುತ್ತಿದೆ. ಈಗ ಕಾರ್ಮಿಕರ ಎಂಟು ಗಂಟೆ ಅವಧಿಯ ಕೆಲಸವನ್ನು ಹನ್ನೆರಡು ಗಂಟೆಗೆ ಏರಿಸಲು ಮುಂದಾಗಿದೆ. ಚಿತ್ರೀಕರಣದ ನಿಮಿತ್ತ ಹೊರ ಊರುಗಳಿಗೆ ಹೋದಾಗ ಈಗ ನೀಡುತ್ತಿರುವ ಹೆಚ್ಚುವರಿ ಬಾಟಾ ಕೂಡಾ ಇನ್ನು ಮುಂದೆ ಕಟ್ ಆಗಲಿದೆ. ಇದಕ್ಕಿಂತ ಅಮಾನವೀಯ ವಿಷಯವೆಂದರೆ, ಹಗಲಿಡೀ ದುಡಿಯುವ ಕಾರ್ಮಿಕರಿಗೆ ರಾತ್ರಿಯ ಊಟವನ್ನೂ ನೀಡುವುದಿಲ್ಲವಂತೆ. 'ಉಚ್ಚೇಲಿ ಮೀನು ಹಿಡಿಯ ಹೊರಟರುವ' ಎಂಬಂತೆ ನಿರ್ಮಾಪಕರ ಸಂಘ ಹೀರೋಗಳ ಬೇಡಿಕೆಗಳನ್ನು ಮಣಿಸಲಾರದೇ ಬಡ ಕಾರ್ಮಿಕರಿಗೆ ಬರೆ ಹಾಕುತ್ತಿರುವುದು ಎಷ್ಟು ಸರಿ?

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 08-07-2009 RNI No. KARKAN2005/14

ಮಾತು ಕೊಟ್ಟ ಕೃಷ್ಣಪ್ಪ ಕೈ ಕೊಟ್ಟರು!



‘ನಿನ್ನ ಸಿನಿಮಾವನ್ನು ನಿರ್ಮಿಸುತ್ತೇನೆ’’ ಎಂದು ಗಣೇಶನಿಗೆ ಮಾತುಕೊಟ್ಟ ಒಂದೇ ಕಾರಣಕ್ಕಾಗಿ ಯಶಸ್ವಿನ್ ಟಿವಿ ನಿರೂಪಕನಾಗಿದ್ದ ಗಣೇಶನ ಮೇಲೆ ಕೋಟಿಗಟ್ಟಲೆ ಹಣ ಸುರಿದು ಸಿನಿಮಾ ಮಾಡಿದ ಕೃಷ್ಣಪ್ಪ ಈಗೀಗ ಕೊಟ್ಟ ಮಾತಿಗೆ ತಪ್ಪುವ ಚಾಳಿಯನ್ನು ಬೆಳೆಸಿಕೊಂಡಿದ್ದಾರಾ? ಇತ್ತೀಚೆಗೆ ಕೃಷ್ಣಪ್ಪನವರು ಚಿತ್ರರಂಗದವರೊಂದಿಗೆ ನಡೆದುಕೊಳ್ಳುತ್ತಿರುವ ರೀತಿ, ಮಾತಿನ ಧಾಟಿಯನ್ನು ಕಂಡ ಯಾರಿಗೇ ಆದರೂ ಹೀಗನ್ನಿಸದೇ ಇರಲಾರದು.

ಇನ್ನೇನು ಶೂಟಿಂಗ್ ಶುರು....

‘ಮುಂಗಾರು ಮಳೆ’ ಮತ್ತು ‘ಮೊಗ್ಗಿನ ಮನಸು’ ಎಂಬೆರಡು ಚಿತ್ರಗಳ ನಂತರ ಕೃಷ್ಣಪ್ಪನವರು ನಿರ್ಮಿಸಲು ತೀರ್ಮಾನಿಸಿದ್ದ ಎಲ್ಲ ಚಿತ್ರಗಳನ್ನೂ ಮಾಡಿದ್ದರೆ ಇಷ್ಟೊತ್ತಿಗೆ ಅರ್ಧ ಡಜನ್‌ಗಿಂತ ಹೆಚ್ಚು ಸಂಖ್ಯೆಯನ್ನು ಮೀರುತ್ತಿತ್ತು. ‘ಮೊಗ್ಗಿನ ಮನಸ್ಸು’ ಚಿತ್ರ ಕೃಷ್ಣಪ್ಪನವರಿಗೆ ಹೇಳಿಕೊಳ್ಳುವಂತ ಲಾಭವನ್ನು ತಂದುಕೊಡದಿದ್ದರೂ ಆ ಚಿತ್ರಕ್ಕೆ ದೊರಕಿದ ಅದ್ಭುತ ರೆಸ್ಪಾನ್ಸ್‌ನಿಂದ ಹಿರಿಹಿರಿ ಹಿಗ್ಗಿದ್ದ ಕೃಷ್ಣಪ್ಪನವರು ಮತ್ತೊಮ್ಮೆ ಶಶಾಂಕ್ ಅವರಿಗೇ ನಿರ್ದೇಶನದ ಅವಕಾಶವನ್ನು ನೀಡಿ ಹೊಸ ಚಿತ್ರವನ್ನು ಆರಂಭಿಸುವಂತೆ ಆಜ್ಞೆ ಮಾಡಿದ್ದರು. ಶಶಾಂಕ್ ಕೂಡ ಇದೇ ಹುಮ್ಮಸ್ಸಿನಲ್ಲಿ ತಮ್ಮ ಹಿಂದಿನ ‘ಸಿಕ್ಸರ್’ ಹಾಗೂ ‘ಮೊಗ್ಗಿನ ಮನಸು’ ಗಳಿಗಿಂತ ಹೆಚ್ಚು ಶ್ರಮ ವಹಿಸಿ ‘ಪ್ರೇಮಂ ಶರಣಂ ಗಚ್ಛಾಮಿ’ ಎಂಬ ಟೈಟಲ್‌ಗೆ ಕಥೆ ಚಿತ್ರಕಥೆ ರೆಡಿ ಮಾಡಿ ಕೊಂಡಿದ್ದರು. ಹರಿಕೃಷ್ಣ ಸಂಗೀತ ನಿರ್ದೇಶನದಲ್ಲಿ 30 ಲಕ್ಷ ವೆಚ್ಚದಲ್ಲಿ ಹಾಡುಗಳೂ ಸಿದ್ಧಗೊಂಡವು. ನಟ-ನಟಿಯರು, ತಂತ್ರಜ್ಞರೆಲ್ಲರ ಕಾಲ್‌ಶೀಟು ಪಡೆದು, ಇನ್ನೇನು ಆಕ್ಷನ್ ಎನ್ನುವುದೊಂದೇ ನಿರ್ದೇಶಕ ಶಶಾಂಕ್‌ಗೆ ಬಾಕಿಯಿದ್ದದ್ದು. ಇನ್ನು ಪತ್ರಕರ್ತ ಶೆಟ್ಟಿ ಮೊದಲ ಬಾರಿ ನಿರ್ದೇಶಿಸಬೇಕಿದ್ದ ‘ಮಾತೃಭೂಮಿ’ಯ ಕತೆ ಕೂಡ ಇದಕ್ಕೆ ಭಿನ್ನವಾಗಿರಲಿಲ್ಲ. ‘ಮಾತೃಭೂಮಿ’ಯ ಚಿತ್ರೀಕರಣಕ್ಕಾಗಿ ಇಡೀ ತಂಡದವರು ಲೊಕೇಶನ್‌ಗಳನ್ನೂ ನೋಡಿಬಂದಿದ್ದರು. “ಈ ಚಿತ್ರದಲ್ಲಿ ಏಳು ಜನ ಹೊಸ ನಟರಿಗೆ ಅವಕಾಶ ಕೊಡುತ್ತೇವೆ’’ ಎಂದಾಗ ಸಾವಿರಾರು ಜನ ಆಕಾಂಕ್ಷಿಗಳು ಅವಕಾಶದ ಕನಸನ್ನು ಕಂಡು ಫೋಟೋ ಲಗತ್ತಿಸಿ ಅರ್ಜಿ ಹಾಕಿದ್ದರು.



ಈ ಎರಡು ಸಿನಿಮಾಗಳ ಆರಂಭಕ್ಕೆ ಮುಂಚೆಯೇ ಕೃಷ್ಣಪ್ಪ ಇನ್ನೂ ಮೂರು ಜನ ನಿರ್ದೇಶಕರಿಗೆ ಇಂತಹುದ್ದೇ ಆಶ್ವಾಸನೆ ನೀಡಿದ್ದರು. ಎಸ್. ಮಹೇಂದರ್ ನಿರ್ದೇಶನದಲ್ಲಿ ಸಂಪೂರ್ಣ ರೈಲಿನಲ್ಲೇ ನಡೆಯುವ ವಿನೂತನ ಶೈಲಿಯ ಚಿತ್ರವೊಂದನ್ನು ನಿರ್ಮಿಸುವುದಾಗಿ ಕೃಷ್ಣಪ್ಪ ಮಹೇಂದರ್‌ಗೆ ಪ್ರಾಮಿಸ್ ಮಾಡಿದ್ದರು. ಚಿತ್ರ ಸಾಹಿತಿ ಕವಿರಾಜ್ ಕೂಡಾ ಒಂದು ಕಥೆಯನ್ನು ತಂದು ಕೃಷ್ಣಪ್ಪರ ಕಿವಿಯಲ್ಲಿ ಉದಿದ್ದರು. ಕ್ಲೈಮ್ಯಾಕ್ಸ್‌ನಲ್ಲಿ ಹೀರೋ ಹಿಮಾಲಯಕ್ಕೆ ಹೋಗುವ ಬದಲು ವೈಷ್ಣೋದೇವಿಗೆ ಹೋಗುವುದನ್ನು ಬಿಟ್ಟರೆ ವಿಕ್ರಾಂತ ಮಹೇಂದರ್ ಹೇಳಿದ್ದ ಕಥೆಯನ್ನೇ ಯಥಾವತ್ತಾಗಿ ಇವರೂ ಹೇಳಿದ್ದರಾದ್ದರಿಂದ ಕೃಷ್ಣಪ್ಪ ಅದನ್ನು ಒಪ್ಪಿರಲಿಲ್ಲ! ಇನ್ನು ದಿನೇಶ್ ಬಾಬು ನಿರ್ದೇಶನದ ಕೇವಲ ಹತ್ತು ದಿನಗಳಲ್ಲಿ ಚಿತ್ರೀಕರಣ ಮಾಡಲು ಪ್ಲಾನ್ ಮಾಡಿದ್ದ ಚಿತ್ರದಲ್ಲಿ ರಮೇಶ್ ಅರವಿಂದ್ ನಟಿಸಬೇಕಿತ್ತು.



ಇನ್ನೇನು ಈ.ಕೆ. ಎಂಟರ್‌ಟೈನರ್ಸ್ ಬ್ಯಾನರ್‌ನಲ್ಲಿ ಇವೆಲ್ಲಾ ಸಿನಿಮಾಗಳು ಶುರುವಾಗೇ ಹೋಯ್ತು ಎನ್ನುವಷ್ಟರಲ್ಲಿ ಅಡ್ಡಗಾಲಾಗಿ ಬಂದಿದ್ದು ಎಲೆಕ್ಷನ್.

ಎಲೆಕ್ಷನ್ ನೆಪ

“ಈಗ ನಾನು ಎಲೆಕ್ಷನ್‌ಗೆ ನಿಲ್ತೀನಿ. ಓಡಾಟ, ಪ್ರಚಾರಗಳ ನಡುವೆ ಪ್ರೊಡಕ್ಷನ್ ಕೆಲಸಕ್ಕೆ ತೊಂದರೆ ಆಗುತ್ತೆ, ಎಲೆಕ್ಷನ್ ಮುಗಿದ ತಕ್ಷಣ ಶೂಟಿಂಗ್ ಶುರು ಮಾಡನ’’ ಎಂದು ಬಿಟ್ಟರು ಕೃಷ್ಣಪ್ಪ. ನಂತರ ಚುನಾವಣಾ ಪ್ರಕ್ರಿಯೆಯೂ ಆರಂಭವಾಯಿತಾದರೂ ಕೃಷ್ಣಪ್ಪನವರಿಗೆ ಟಿಕೆಟ್ ಸಿಗಲಿಲ್ಲ. ಇನ್ನು ಓಡಾಟ, ಪ್ರಚಾರದ ಮಾತೇ ಇರಲಿಲ್ಲ. “ಇನ್ನಾದರೂ ಚಿತ್ರೀಕರಣ ಆರಂಭಿಸುತ್ತಾರೆ’’ ಎಂದು ಕೃಷ್ಣಪ್ಪನವರನ್ನು ನಂಬಿದ್ದ ಎಲ್ಲರೂ ಬಸವೇಶ್ವರನಗರದ ಅವರ ಆಫೀಸಿನಲ್ಲಿ ಕಾದುಕುಳಿತಿದ್ದೇ ಬಂತು. ಆದರೆ, ಮತ್ತೆ ಅವರು ಚಿತ್ರ ನಿರ್ಮಾಣ ಆರಂಭಿಸುವ ಸಣ್ಣ ಸುಳಿವೂ ದೊರೆಯಲಿಲ್ಲ.

ಕೃಷ್ಣಪ್ಪ ಬರೀ ಬಾಯಿ ಮಾತಿನಲ್ಲಿ ಇವರಿಗೆಲ್ಲ ಮಣೆಹಾಕಿದ್ದರೆ ಯಾರೂ ಅಷ್ಟು ವಿಚಲಿತರಾಗುತ್ತಿರಲಿಲ್ಲವೇನೋ? ಪ್ರತಿಯೊಂದು ಚಿತ್ರಕ್ಕೂ ಒಂದೊಂದು ಪತ್ರಿಕಾಗೋಷ್ಠಿಯನ್ನು ಕರೆದು ಪ್ರಚಾರ ಪಡೆದಿದ್ದರು ಕೃಷ್ಣಪ್ಪ. ಪ್ರೆಸ್‌ಮೀಟುಗಳಲ್ಲಿ ಕುಳಿತು ಪಟಪಟ ಎಂದು ಮಾತಾಡಿ ಪತ್ರಿಕೆಗಳಲ್ಲಿ ಪುಟಗಟ್ಟಲೆ ಸುದ್ದಿಯಾದ ಕೃಷ್ಣಪ್ಪ ಈಗ “ನನ್ನ ಗಾರ್ಮೆಂಟ್ಸ್ ಲಾಸಾಗಿದೆ. ರಿಯಲ್ ಎಸ್ಟೇಟ್ ಬಿದ್ದುಹೋಗಿದೆ. ನನ್ನಿಂದ ಸಿನಿಮಾ ಮಾಡಲು ಆಗೊಲ್ಲ’’ ಎನ್ನುತ್ತಿದ್ದಾರೆ.

ನಿಜಕ್ಕೂ ಸಿನಿಮಾ ನಿರ್ಮಿಸುವ ಮನಸ್ಸಿದ್ದರೆ, ‘ಮುಂಗಾರು ಮಳೆ’ಯಿಂದ ಬಂದ ಪ್ರಾಫಿಟ್ಟೇ ಸಾಕಾಗುತ್ತಿತ್ತು. ಏಕೆಂದರೆ ಇವೆಲ್ಲಕ್ಕೂ ಹೆಚ್ಚೆಂದರೆ ಹತ್ತೋ ಹದಿನೈದೋ ಕೋಟಿ ರೂಪಾಯಿಗಳು ಮಾತ್ರ ಸಾಕಾಗುತ್ತಿತ್ತು, ಕೃಷ್ಣಪ್ಪನವರಿಗೆ ಅದೇನು ದೊಡ್ಡ ಮೊತ್ತವಲ್ಲ. ಕನ್ನಡ ಚಿತ್ರರಂಗದ ಏಳ್ಗೆಗೆ ನೆರವಾಗಿ, ಸದಭಿರುಚಿಯ ಸಿನಿಮಾಗಳ ನಿರ್ಮಾತೃವಾಗುತ್ತಾರೆ ಕೃಷ್ಣಪ್ಪ ಎಂದು ನಂಬಿದ್ದ ಉದ್ಯಮದವರನ್ನು ಕೃಷ್ಣಪ್ಪ ನಿರಾಶೆಗೊಳಿಸಿದ್ದಾರೆ.

● ಅರುಣ್.ಜಿ

‘ಮಳೆ ಜೊತೆಯಲಿ’ ಗಣೇಶನ ಗಾನ!



ಗಣೇಶ್ ಈಗ ತನ್ನ ಸ್ವಂತ ಬ್ಯಾನರ್‌ನಲ್ಲಿ ಚಿತ್ರ ನಿರ್ಮಿಸುತ್ತಿರುವುದು ಹಳೇ ವಿಷಯ. ಪ್ರೀತಂ ಗುಬ್ಬಿ ‘ಮಳೆಯಿರಲಿ ಜೊತೆಯಲಿ’ ಚಿತ್ರವನ್ನು ಗಣೇಶ್‌ಗಾಗಿ ನಿರ್ದೇಶಿಸುತ್ತಿದ್ದಾರೆ. ವಿಶೇಷವೆಂದರೆ, ಈ ಚಿತ್ರದ ಮುಖಾಂತರ ಗಣೇಶ್ ಹಿನ್ನೆಲೆ ಗಾಯಕರಾಗಿಯೂ ಪ್ರೇಕ್ಷಕರಿಗೆ ರಂಜನೆ ನೀಡಲಿದ್ದಾರೆ. ಇದು ಗಣೇಶ್ ವೃತ್ತಿ ಜೀವನದ 25ನೇ ಚಿತ್ರ ಕೂಡ. ಪ್ರೇಮ್‌ನಂಥ ನಾಯಕನಟ ಒಂದೆರಡು ಚಿತ್ರಗಳಲ್ಲಿ ನಟಿಸಿದ ಕೂಡಲೇ ಹಿನ್ನೆಲೆ ಗಾಯಕನಾಗಿ ಟ್ರೈ ಮಾಡಿದ್ದುಂಟು. ವಿಜಯ ರಾಘವೇಂದ್ರ, ಪುನೀತ್ ಕೂಡ ಒಂದೆರಡು ಚಿತ್ರಗಳಲ್ಲಿ ತಮ್ಮ ಕಂಠಮಾಧುರ್ಯವನ್ನು ಪ್ರೇಕ್ಷಕರಿಗೆ ಪರಿಚಯಿಸಿದ್ದರು. ಆರಂಭದಲ್ಲಿ ಸುದೀಪ್ ಕೂಡ ಈ ಬಗ್ಗೆ ವಿಶೇಷ ಆಸಕ್ತಿ ತೋರಿಸಿದ್ದರು. ಅಷ್ಟೇ ಯಾಕೆ, ನಿರ್ದೇಶಕ ಪ್ರೇಮ್‌ಗೂ ಯಾವಾಗಲೂ ಹಾಡುವ ಹುಚ್ಚು, ಈ ಹುಚ್ಚಲ್ಲೇ ಬೆಳೆದ ಮತ್ತೊಬ್ಬ ನಿರ್ದೇಶಕನೆಂದರೆ ಮಹೇಂದರ್. ಇದೇ ಸಾಲಿಗೆ ಸೇರುವ ನಾಯಕ ಕಂ ನಿರ್ದೇಶಕ ಉಪೇಂದ್ರ ಕೂಡಾ ‘ಚಿತ್ರಾನ್ನ’ದಂಥ ಹಾಡನ್ನು ಹಾಡಿ ಹಿನ್ನೆಲೆ ಗಾಯಕ ಎನಿಸಿಕೊಂಡರು. ಹೀಗೆ ನಾಯಕರಾಗಲಿ, ನಿರ್ದೇಶಕರಾಗಲಿ ಎಲ್ಲರಿಗೂ ಹಾಡುವ ಹುಚ್ಚು, ಈಗ ಇಂಥ ಹಿನ್ನೆಲೆ ಗಾಯಕರ ಸಾಲಿಗೆ ಗಣೇಶ್ ಹೊಸ ಸೇರ್ಪಡೆ. ನೋಡೋಣ, ಡೈಲಾಗ್ ಡೆಲಿವರಿಯಿಂದಲೇ ಸ್ಟಾರ್ ವ್ಯಾಲ್ಯೂ ಪಡೆದ ಗಣೇಶ್ ಇನ್ನು ಗಾಯನದಿಂದ ಏನು ಸಾಧಿಸುತ್ತಾರೋ ಎಂಬುದನ್ನು.



ಹುಷಾರ್
ಮಲ್ಲಿಕಾ ಕಪೂರ್



“ನಾನು ಯಾವುದೇ ಕಾರಣಕ್ಕೂ ‘ಶರಪಂಜರ’ ಚಿತ್ರದ ರಿಮೇಕ್‌ನಲ್ಲಿ ಭಾಗವಹಿಸುವುದಿಲ್ಲ, ಆ ಚಿತ್ರಗಳು ಕನ್ನಡ ಚಿತ್ರರಂಗದ ಕ್ಲಾಸಿಕ್ ಚಿತ್ರಗಳು. ಅದನ್ನು ಹಾಳುಮಾಡಬಾರದು.’’ ಹೀಗೆಂದು ಖಡಾಖಂಡಿತವಾಗಿ ತನ್ನ ನಿಲುವನ್ನು ವ್ಯಕ್ತಪಡಿಸಿದವರು ನೇರ ನಡೆ ನುಡಿ ಖ್ಯಾತಿಯ ರಮ್ಯಾ. ಇಂತಹ ಒಂದು ದಿಟ್ಟ ನಿಲುವನ್ನು ಕೈಗೆತ್ತಿಕೊಂಡ ರಮ್ಯಾಗೆ ಮೊದಲಿಗೆ ನಮ್ಮ ಅಭಿನಂದನೆ. ಇದೇ ನಿಲುವನ್ನು ‘ಜ್ಯೂಲಿ’ ಚಿತ್ರ ಮಾಡುವಾಗಲೂ ಆಕೆ ಕೈಗೊಳ್ಳಬೇಕಿತ್ತು. ಇದೆಲ್ಲ ಆರಂಭವಾಗಿದ್ದು ಹೀಗೆ. ರಘು ಕಶ್ಯಪ್ ಎಂಬ ಅನಾಮಿಕ ನಿರ್ದೇಶಕ “ನಾನು ‘ಶರಪಂಜರ’ವನ್ನು ರೀಮೇಕ್ ಮಾಡುತ್ತೇನೆ’’ ಎಂದು ಗಾಂಧಿನಗರದಲ್ಲಿ ಹೇಳಿಕೊಂಡು ತಿರುಗಾಡುತ್ತಿದ್ದಾನೆ. ಅಷ್ಟೇ ಅಲ್ಲ “ಈ ಚಿತ್ರದ ಪಾತ್ರವನ್ನು ರಮ್ಯಾ ಮಾಡಿದರೆ ಚೆನ್ನಾಗಿರುತ್ತೆ’’ ಎಂದು ಆತ ಹೇಳಿಕೊಂಡು ತಿರುಗಾಡುತ್ತಿರುವುದೇ ರಮ್ಯಾಳ ಸಿಟ್ಟಿಗೆ ಕಾರಣವಾಗಿದೆ. ಅಂದಹಾಗೆ ಈ ರಘು ಕಶ್ಯಪ್‌ನ ಮಾತಿನ ವರಸೆ ಹೀಗಿದೆ: “ಇದು ರಿಮೇಕ್ ಅಲ್ಲ, ಕಾದಂಬರಿ ಆಧಾರಿತ ಚಿತ್ರವೂ ಅಲ್ಲ, ಹಾಗೆಯೇ ಸ್ವಮೇಕೂ ಅಲ್ಲ’’ ಈತ ಇಷ್ಟೆಲ್ಲ ಹೇಳಿದ ಮೇಲೆ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಆತ ‘ಶರಪಂಜರ’ ಮಾಡದೇ ಇರುವುದು ವಾಸಿ.



‘ಚೆಲುವೆ’ಯ ನಂತರ ‘ರಾಜ್’ ಪಯಣ


ಶಿವರಾಜ್‌ಕುಮಾರ್ ಮೊನ್ನೆ ಮೊನ್ನೆಯಷ್ಟೇ ಪ್ರಪಂಚದ ಏಳು ಅದ್ಭುತಗಳಲ್ಲಿ ಕೆಲವಕ್ಕೆ ಒಂದು ಸುತ್ತು ಹಾಕಿ ವಾಪಾಸು ಬಂದಿದ್ದಾರೆ. ರಘುರಾಮ್ ನಿರ್ದೇಶನದ ‘ಚೆಲುವೆಯೇ ನಿನ್ನ ನೋಡಲು’ ಚಿತ್ರ ಬಹುತೇಕ ಚಿತ್ರೀಕರಣ ಮುಗಿಸಿದೆ.



ಶಿವರಾಜ್‌ಕುಮಾರ್ ವಾಪಾಸ್ ಬೆಂಗಳೂರಿಗೆ ಬಂದ ಎರಡೇ ದಿನಕ್ಕೆ ಆತನ ಸಹೋದರ ಪುನೀತ್ ರಾಜ್‌ಕುಮಾರ್ ಐಸ್‌ಲ್ಯಾಂಡ್ ಮತ್ತು ಸೌತ್ ಆಫ್ರಿಕಾಕ್ಕೆ ಪ್ರಯಾಣ ಬೆಳೆಸಿದ್ದಾರೆ. ಇದು ಪ್ರೇಮ್ ನಿರ್ದೇಶನದ ‘ರಾಜ್’ ಚಿತ್ರದ ಅಂತಿಮ ಚಿತ್ರೀಕರಣಕ್ಕಾಗಿ. ವಾಸ್ತವವಾಗಿ ಈ ಹಾಡನ್ನು ಕರ್ನಾಟಕದಲ್ಲೇ ಸುತ್ತಿಬಿಡುತ್ತಾರೆ ಎಂದು ಭಾರೀ ಸುದ್ದಿ ಹಬ್ಬಿತ್ತು. ಇದಕ್ಕೆ ಚಿತ್ರತಂಡ ನೀಡುತ್ತಿದ್ದ ಕಾರಣ ವಿದೇಶಗಳಲ್ಲಿ ಹರಡಿರುವ ‘ಹಂದಿ ಜ್ವರ’. ವಾಸ್ತವವಾಗಿ ಹಂದಿ ಜ್ವರಕ್ಕಿಂತ ಚಿತ್ರದ ಬಜೆಟ್ ಎಲ್ಲೆ ಮೀರಿದ್ದರಿಂದ ನಿರ್ಮಾಪಕರು ಪ್ರೇಮ್ ಬಗ್ಗೆ ಬೇಸರ ಮತ್ತು ಸಿಟ್ಟು ವ್ಯಕ್ತಪಡಿಸಿದ್ದರು. ಇದೀಗ ನಿರ್ಮಾಪಕರ ಸಿಟ್ಟನ್ನು ತಣ್ಣನೆಗೊಳಿಸಿ ಪ್ರೇಮ್ ತನ್ನ ಚಿತ್ರತಂಡದ ಜೊತೆ ತನ್ನ ಸಂಸಾರ ಸಮೇತ ಸೌತ್ ಆಫ್ರಿಕಾಗೆ ಹಾರಿಹೋಗಿದ್ದಾರೆ.

ಅಂತೂ ಶಿವರಾಜ್‌ಕುಮಾರ್ ನಟನೆಯ ‘ಚೆಲುವೆಯೇ ನಿನ್ನ ನೋಡಲು’ ಮತ್ತು ಪುನೀತ್ ಅಭಿನಯದ ‘ರಾಜ್’ ಚಿತ್ರ ಇವೆರಡರ ನಡುವೆ ಒಂದು ವಿಚಿತ್ರ ರೀತಿಯ ಸ್ಪರ್ಧೆ ನಡೆಯುತ್ತಿದೆ. ಅದೇನೆಂದರೆ, ಯಾವ ಚಿತ್ರದ ಬಜೆಟ್ಟು ಕೈಗೆಟುಕದಷ್ಟು ಎತ್ತರಕ್ಕೆ ಬೆಳೆಯುತ್ತದೆ ಎಂದು. ಸುರೇಶ್ ಮತ್ತು ಸುರೇಶ್ ಗೌಡರಿಬ್ಬರೂ ಸದ್ಯಕ್ಕೆ ಅತ್ಯಂತ ಗೊಂದಲದಲ್ಲಿರುವುದಂತೂ ಸತ್ಯ.

ಬಂಗಾರದ ಮನುಷ್ಯ ಲಕ್ಷ್ಮಣ್



ಮೊನ್ನೆ ನಿರ್ಮಾಪಕ ಆರ್. ಲಕ್ಷ್ಮಣ್ ನಿಧನ ಹೊಂದಿದರು. ಇವರ ನಿಧನವನ್ನು ‘ಬಂಗಾರದ ಮನುಷ್ಯ ಇನ್ನಿಲ್ಲ’ ಎಂದು ಕೆಲವರು ವ್ಯಾಖ್ಯಾನಿಸಿದರು. ಅವರು ‘ಬಂಗಾರದ ಮನುಷ್ಯ’ದ ಪಾಲುದಾರರಲ್ಲಿ ಒಬ್ಬರಾಗಿದ್ದರಿಂದ ಹಾಗೆ ಬರೆದಿರಬಹುದು. ಅದಕ್ಕಿಂತ ಮುಖ್ಯವಾಗಿ ವ್ಯಕ್ತಿಗತವಾಗಿ ಲಕ್ಷ್ಮಣ್ ಉದ್ಯಮದ ಎಲ್ಲರೊಂದಿಗೂ ನಿಕಟ ಸಂಪರ್ಕ ಮತ್ತು ಬಾಂಧವ್ಯವನ್ನು ಹೊಂದಿದವರಾಗಿದ್ದರಿಂದ ಆ ಮಾತು ನಿಜವೆನಿಸಿತು. ಮೊನ್ನೆ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಗೆ ಪಾರ್ವತಮ್ಮ ರಾಜ್‌ಕುಮಾರ್, ರಾಜೇಂದ್ರ ಸಿಂಗ್ ಬಾಬು, ಲೀಲಾವತಿ, ಕೆ.ಎಸ್.ಎಲ್. ಸ್ವಾಮಿ, ರಾಕ್‌ಲೈನ್, ತಲ್ಲಂ ನಂಜುಂಡಶೆಟ್ಟಿ ಹೀಗೆ ಬಹುತೇಕ ಎಲ್ಲ ಗಣ್ಯರೂ ಸೇರಿದ್ದೇ ಅವರ ವ್ಯಕ್ತಿತ್ವವನ್ನು ತೋರಿಸುತ್ತದೆ.

ಲಕ್ಷ್ಮಣ್ ಆರಂಭದಲ್ಲಿ ಪತ್ರಕರ್ತರಾಗಿ ಸ್ವಲ್ಪ ಕಾಲ ದುಡಿದವರು. ಆನಂತರ ಕನ್ನಡ ಚಿತ್ರರಂಗದ ಬಾಲ್ಯಾವಸ್ಥೆಯಿಂದ ಮೊನ್ನೆ ಅಮೃತಮಹೋತ್ಸವದ ತನಕ ಎಲ್ಲ ಹಂತಗಳಲ್ಲೂ ತಮ್ಮನ್ನು ತೊಡಗಿಸಿಕೊಂಡವರು. ಛೇಂಬರ್, ನಿರ್ಮಾಪಕರ ಸಂಘ, ದಕ್ಷಿಣ ಭಾರತ ವಾಣಿಜ್ಯ ಮಂಡಳಿ ಅಧ್ಯಕ್ಷ ಸ್ಥಾನದಲ್ಲೆಲ್ಲಾ ಕೆಲಸ ಮಾಡಿದ ಲಕ್ಷ್ಮಣ್ ಹಳೆಯ ಮೌಲ್ಯಗಳ ಕೊನೆಯ ಕೊಂಡಿಯಾಗಿದ್ದರು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44